## ಅಧ್ಯಾಯ–೮

# ಆರ್ಥಿಕ ಪ್ರವೃತ್ತಿಗಳು

ಯಾವುದೇ ಪ್ರದೇಶದ ಸಮಗ್ರ ಪ್ರಗತಿ ಅಲ್ಲಿನ ಆರ್ಥಿಕ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಆಯಾ ಪ್ರದೇಶಗಳಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತು, ಮಾನವ ಸಂಪತ್ತು, ಕೃಷಿ, ಕೈಗಾರಿಕೆ, ಬ್ಯಾಂಕಿಂಗ್, ವಾಣಿಜ್ಯ, ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ, ಉಳಿತಾಯ ಕ್ಷಮತೆ, ಬಂಡವಾಳ ಹೂಡಿಕೆ, ನಗರೀಕರಣ, ಉದ್ಯೋಗ, ಕೂಲಿ (ಮಜೂರಿ),ತಲಾದಾಯ, ಬೆಲೆ(ದರ), ಮುಂತಾದ ಹತ್ತು ಹಲವು ರಂಗಗಳಲ್ಲಿ ಕಂಡುಬರುವ ಏರಿಳಿತಗಳನ್ನು ಆಧರಿಸಿದ ಆರ್ಥಿಕ ಪ್ರವೃತ್ತಿಗಳು ಆಯಾ ಪ್ರದೇಶಗಳ ಆರ್ಥಿಕ ಮುನ್ನಡೆಯನ್ನು ನಿರ್ದೇಶಿಸುತ್ತವೆ. ಲಭ್ಯವಿರುವ ನೈಸರ್ಗಿಕ ಹಾಗೂ ಆರ್ಥಿಕ ಸಂಪನ್ಮೂಲಗಳ ಸಮಗ್ರ ಬಳಕೆಗೆ ಪೂರಕವಾದ ಮೂಲಭೂತ ಸೌಕರ್ಯಗಳು, ತಂತ್ರಜ್ಞಾನಗಳೇ ಮುಂತಾದ ಅಂಶಗಳು ಆರ್ಥಿಕ ಪ್ರವೃತ್ತಿಯ ದಿಸೆಯನ್ನು ನಿರ್ದೇಶಿಸುವ ಪ್ರಧಾನ ಅಂಶಗಳಾಗಿದ್ದು, ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ನೆರವಾಗುತ್ತವೆ. ಹೀಗೆ ಸಮಾಜದ ಬದಲಾವಣೆ ಮತ್ತು ಸುಧಾರಣೆಗಳಿಗೆ ಮಾರ್ಗಸೂಚಿಗಳಾಗಬಹುದಾದ ಆರ್ಥಿಕ ಪ್ರವೃತ್ತಿಗಳು ಮಂಡ್ಯ ಜಿಲ್ಲೆಯು ಸರ್ವಾಂಗೀಣ ಬೆಳವಣಿಗೆಯನ್ನು ಸಾಧಿಸುವ ನಿಟ್ಟಿನಲ್ಲಿ ವಹಿಸಿರುವ ಪಾತ್ರ ಹಾಗೂ ಬೀರಿರುವ ಪ್ರಭಾವಗಳನ್ನು ಇಲ್ಲಿ ಬಿಂಬಿಸಲು ಯತ್ನಿಸಲಾಗಿದೆ.

ಬಹು ಹಿಂದಿನಿಂದಲೂ ಕೃಷಿ ಪ್ರಧಾನವಾಗಿರುವ ಈ ಜಿಲ್ಲೆಯ ಹೆಚ್ಚಿನ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜಿಲ್ಲೆಯ ಸರಾಸರಿ ವಾರ್ಷಿಕ ಮಳೆ ಸುಮಾರು ೭೦೦ ಮಿ.ಮೀ. ಇದ್ದು, ಅರಣ್ಯ ಸಂಪತ್ತು ಹಾಗೂ ಖನಿಜ ಸಂಪತ್ತು ನಿರೀಕ್ಷಿತ ಪ್ರಮಾಣದಲ್ಲಿಲ್ಲ. ಪ್ರಾಚೀನ ಕಾಲದಲ್ಲಿ ಕೆರೆ, ಕಟ್ಟೆ, ಕಾಲುವೆಗಳಿಂದಲೂ, ಇಪ್ಪತ್ತನೆಯ ಶತಮಾನದಿಂದೀಚೆಗೆ ಕಾವೇರಿ, ಹೇಮಾವತಿ, ನದಿಗಳಿಂದ ನೀರಾವರಿ ಸೌಲಭ್ಯ ಪಡೆದು ವಾಣಿಜ್ಯ ಬೆಳೆಗಳಾದ ಕಬ್ಬು, ಹಿಪ್ಪುನೇರಳೆಗಳೇ ಅಲ್ಲದೆ, ತೋಟಗಾರಿಕೆ ಬೆಳೆಗಳೊಂದಿಗೆ ಪ್ರಮುಖವಾಗಿ ಭತ್ತ ಬೆಳೆಯುವ ಹೊನ್ನಾಡಾಗಿ ಜಿಲ್ಲೆಯು ಪರಿವರ್ತನೆಗೊಂಡಿದೆ. ಹೈನುಗಾರಿಕೆ, ಕುಕ್ಕುಟ ಸಾಕಾಣಿಕೆ ಹಾಗೂ ರೇಷ್ಮೆ ಕೃಷಿಗಳಿಂದು ಜನರ ಪ್ರಮುಖ ಉಪಕಸುಬುಗಳಾಗಿ ಬೆಳೆದು ಅವರ ಆರ್ಥಿಕ ಸ್ಥಿತಿಯನ್ನು ಗಣನೀಯ ಪ್ರಮಾಣದಲ್ಲಿ ಸುಧಾರಿಸಿವೆ. ನೀರಾವರಿ ಸೌಲಭ್ಯದಿಂದ ಹೆಚ್ಚಿದ ಭತ್ತದ ಕೃಷಿಯಿಂದಾಗಿ ಇಂದು ಅಕ್ಕಿ ಗಿರಣಿ ಉದ್ಯಮ ಗಮನಾರ್ಹವಾಗಿ ಬೆಳೆದಿದ್ದು, ೬೬೪ ಹಲ್ಲರ್ ೨೭೪ ಶೆಲ್ಲರ್ ಹಾಗೂ ೨೩೫ ಆಧುನಿಕ ಅಕ್ಕಿ ಗಿರಣಿಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಹಿಂದೆ (ಈಗಲೂ ಸಹ) ಆಲೆಮನೆಗಳಲ್ಲಿ ಬೆಲ್ಲ ತಯಾರಾಗುತ್ತಿದ್ದು, ೧೮೪೭ರಷ್ಟು ಹಿಂದೆಯೇ ಪಾಲಹಳ್ಳಿ (ಶ್ರೀರಂಗಪಟ್ಟಣ ತಾಲೂಕು) ಯಲ್ಲಿ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಅಷ್ಟಗ್ರಾಮ ಸಕ್ಕರೆ ಕಾರ್ಖಾನೆ ಸ್ಥಾಪಿಸಲ್ಪಟ್ಟಿತ್ತು. ಹರಳು ಸಕ್ಕರೆಗಾಗಿ ಅದು ವಿಶ್ವಖ್ಯಾತಿ ಗಳಿಸಿದ್ದರೂ, ಬಲುಬೇಗ ಮುಚ್ಚಲ್ಪಟ್ಟಿತು. ಆದರೆ ಕಾವೇರಿ ಅಣೆಕಟ್ಟಿನ ನಿರ್ಮಾಣದೊಂದಿಗೆ ನೀರಾವರಿ ಸೌಕರ್ಯ ಅಧಿಕಗೊಂಡು ೧೯೩೩ರಿಂದೀಚೆಗೆ ದೊಡ್ಡ ಪ್ರಮಾಣದ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ನಾಂದಿಯಾಯಿತು. ತತ್ಪರಿಣಾಮವಾಗಿ ಇಂದು ಜಿಲ್ಲೆಯ ಮಂಡ್ಯ (೧೯೩೩), ಪಾಂಡವಪುರ (೧೯೫೫), ಕಾಳಮುದ್ದನದೊಡ್ಡಿ (೧೯೭೪) ಹಾಗೂ ಮಾಕವಳ್ಳಿ (೧೯೯೯) ಗಳಲ್ಲಿ ಸಕ್ಕರೆ ಕಾರ್ಖಾನೆಗಳು ಕಾರ್ಯಪ್ರವೃತ್ತವಾಗಿವೆ. ಮದ್ದೂರು ಬಳಿ ಎಸ್.ಸಿ.ಎಂ.ಸಕ್ಕರೆ ಕಾರ್ಖಾನೆ ನಿರ್ಮಾಣದ ಹಂತದಲ್ಲಿದೆ. ಮಂಡ್ಯ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟವು (ಮನ್‌ಮುಲ್) ಮದ್ದೂರು ತಾಲೂಕಿನ ಗೆಜ್ಜಲಗೆರೆಯಲ್ಲಿ ೧೯೮೦ರಿಂದ ಕಾರ್ಯನಿರ್ವಹಿಸುತ್ತಿದ್ದು, ಹಾಲು ಉಪ ಉತ್ಪನ್ನಗಳ ತಯಾರಿಕೆಯ ಜೊತೆಗೆ ಜಿಲ್ಲೆಯ ಕ್ಷೀರ ಕ್ರಾಂತಿಗೆ ಪ್ರೇರಕವಾಗಿದೆ.

ಮಂಡ್ಯ, ಗೆಂಡೆಹೊಸಹಳ್ಳಿ (ಶ್ರೀರಂಗಪಟ್ಟಣ ತಾಲೂಕು) ಹಾಗೂ ಕಾಳೇನಹಳ್ಳಿ (ಮಂಡ್ಯ ತಾಲೂಕು) ಗಳಲ್ಲಿ ಮದ್ಯಸಾರ ಉತ್ಪಾದನಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯ ಮೇಲುಕೋಟೆ (ಧೋತ್ರ), ತಳಗವಾಡಿ, ಕೊಡಿಯಾಲ, ಹೊಸಹೊಳಲು, ಕಿಕ್ಕೇರಿ ಮುಂತಾದವು ಸೀರೆ ನೇಕಾರಿಕೆಗೆ ಪ್ರಸಿದ್ಧವಾಗಿದ್ದು, ಈಗಲೂ ತಮ್ಮ ಮಹತ್ವವನ್ನು ಉಳಿಸಿಕೊಂಡಿವೆ. ಚಿಣ್ಯ, ಮಂಡ್ಯ ಮುಂತಾದವು ಉಣ್ಣೆಯ ಕಂಬಳಿಗಳಿಗೆ; ಮಳವಳ್ಳಿ ಮತ್ತು ಹಲಗೂರು ಚರ್ಮದ ಉತ್ಪನ್ನಗಳಿಗೆ; ನಾಗಮಂಗಲ ಹಿತ್ತಾಳೆ ಉತ್ಪನ್ನಗಳಿಗೆ; ಗಂಜಾಂ, ಸಿಂದಘಟ್ಟ, ರೇಷ್ಮೆ ಬಟ್ಟೆಗಳಿಗೆ; ಗಂಜಾಂ ಎತ್ತಿನಗಾಡಿ ತಯಾರಿಕೆಗೆ ಪ್ರಸಿದ್ಧವಾಗಿದ್ದು, ಈಗಲೂ ಜನಪ್ರಿಯವಾಗಿವೆ.

ಇಪ್ಪತ್ತನೆಯ ಶತಮಾನದಲ್ಲಿ ತಂಬಾಕು ಸಂಸ್ಕರಣಾ ಕಾರ್ಖಾನೆ (೧೯೩೭) ಮಂಡ್ಯದಲ್ಲಿ ಆರಂಭಗೊಂಡರೆ, ಬೆಳಗೊಳದಲ್ಲಿ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ (೧೯೬೨), ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ (೧೯೪೦), ಅಲೈಡ್ ರೆಸಿನ್ಸ್ ಅಂಡ್ ಕೆಮಿಕಲ್ಸ್ (ಲಿ.) (೧೯೬೫), ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪೆನಿ (ಲಿ.) (೧೯೬೩), ಕರ್ನಾಟಕ ಸ್ಕೂಟರ್ಸ್ (ಲಿ.) (೧೯೭೭), ಹಬೀಬ್ ಸಾಲ್ವೆಂಟ್ ಎಕ್ಸ್‌ಟ್ರಾಕ್ಟ್ (ಲಿ.) (೧೯೭೮) ಹಾಗೂ ಎಂ.ಕೆ.ಆಗ್ರೋಟೆಕ್ ಲಿ.ಕಾರ್ಖಾನೆ, ಪಿ.ಟಿ.ಐ (ಲಿ.) (೧೯೮೮) ಸೋಮನಹಳ್ಳಿ ಮುಂತಾದ ಕೆಲವು ಪ್ರಧಾನ ಕೈಗಾರಿಕೆಗಳು ಜಿಲ್ಲೆಯ ಆರ್ಥಿಕ ಪ್ರವೃತ್ತಿಯಲ್ಲಿ ತಿರುವು ನೀಡುವ ಮಹತ್ವದ ಬೆಳವಣಿಗೆಗಳಾಗಿವೆ. ಇದಕ್ಕೆ ಪೂರಕವಾಗಿ ಕೈಗಾರಿಕೆಗಳಿಗೆ ಒತ್ತು ನೀಡುವ ಸಲುವಾಗಿ ಜಿಲ್ಲೆಯಲ್ಲಿ ಕೆಲವು ಆಯ್ದ ಪ್ರದೇಶಗಳನ್ನು ಕೈಗಾರಿಕಾ ಪ್ರದೇಶಗಳೆಂದು ಘೋಷಿಸುವುದರ ಜೊತೆಗೆ ಅವುಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಯತ್ನಿಸಲಾಯಿತು. ತತ್ಪರಿಣಾಮವಾಗಿ ಇಂದು ಜಿಲ್ಲೆಯ ಒಟ್ಟು ಆರು ಕೈಗಾರಿಕಾ ಪ್ರದೇಶಗಳಲ್ಲಿ ೧೨೩ ಕೈಗಾರಿಕಾ ಷೆಡ್ಡುಗಳು ಕಾರ್ಯನಿರ್ವಹಿಸುತ್ತಿವೆ. ೨೦೦೨ರ ಅಂತ್ಯಕ್ಕೆ ಜಿಲ್ಲೆಯಲ್ಲಿ ಬೃಹತ್ ಹಾಗೂ ಮಧ್ಯಮ ಪ್ರಮಾಣದ ಹದಿನಾಲ್ಕು (ಮೂರು ಸರ್ಕಾರಿ, ಎರಡು ಸಹಕಾರಿ ಹಾಗೂ ಒಂಭತ್ತು ಖಾಸಗಿ ಒಡೆತನ) ಕೈಗಾರಿಕೆಗಳಲ್ಲಿ ೨೮,೨೭೨ ಲಕ್ಷ ರೂ. ಬಂಡವಾಳ ಹೂಡಲಾಗಿದ್ದು ೫,೬೫೩ ಕಾರ್ಮಿಕರು ದುಡಿಯುತ್ತಿದ್ದರು. ಇವುಗಳಲ್ಲಿ ಪ್ರಸ್ತುತ ಐದು ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿಲ್ಲ. ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ನೋಂದಣಿಗೊಂಡಿರುವ ೬,೭೭೪ ಸಣ್ಣ ಕೈಗಾರಿಕೆಗಳಲ್ಲಿ ೩೧,೮೬೪ ಕಾರ್ಮಿಕರು, ದುಡಿಯುತ್ತಿದ್ದರು. ಜಿಲ್ಲೆಯಲ್ಲಿ ೧೯೯೯–೨೦೦೦ದ ಸಾಲಿನಲ್ಲಿದ್ದ ೯೭೭ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳಲ್ಲಿ ಕೇವಲ ೩೨೫ ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದವು. ಹಲವಾರು ವೈಶಿಷ್ಟ್ಯಗಳಿಗೆ ಹೆಸರಾಗಿರುವ ಮಂಡ್ಯ ಜಿಲ್ಲೆಯು ಶಿವಸಮುದ್ರ (೧೯೦೨) ಹಾಗೂ ಶಿಂಷಾ (೧೯೪೦) ಜಲವಿದ್ಯುತ್ ಉತ್ಪಾದನಾ ಕೇಂದ್ರಗಳ ಸ್ಥಾಪನೆಯೊಂದಿಗೆ ನಾಡಿನ ಆರ್ಥಿಕ ಅಭಿವೃದ್ಧಿಗೆ ಮತ್ತು ಸಾಮಾಜಿಕ ಏಳಿಗೆಗೆ ಹೊಸ ಆಯಾಮವನ್ನೇ ಉಂಟು ಮಾಡಿದವು. ಈ ನೀರಿನಿಂದ ಜಲವಿದ್ಯುತ್ತನ್ನು ಉತ್ಪಾದಿಸಿ ಕರ್ನಾಟಕ ರಾಜ್ಯ ವಿದ್ಯುತ್

ಪ್ರಸರಣ ನಿಗಮದ ಮೂಲಕ ಅನುಭೋಗಿಗಳಿಗೆ ಸರಬರಾಜು ಮಾಡುವ ಉದ್ದೇಶದಿಂದ ಕೀಲಾರ ವಿದ್ಯುತ್ ಯೋಜನೆಯನ್ನು (ಮಂಡ್ಯ ತಾಲೂಕು) ೧೯೯೭ರಲ್ಲಿ ಆರಂಭಿಸಿರುವುದು ಮತ್ತೊಂದು ಮಹತ್ವದ ಬೆಳವಣಿಗೆಯಾಗಿದೆ. ೨೦೦೨ರ ಮಾರ್ಚ್ ಅಂತ್ಯಕ್ಕೆ ಜಿಲ್ಲೆಯ ೧೩೫೧ ಗ್ರಾಮ ಹಾಗೂ ೪೬೮ ಉಪಗ್ರಾಮಗಳಿಗೆ ವಿದ್ಯುತ್ ಸೌಲಭ್ಯವಿದೆ. ಮಿಗಿಲಾಗಿ ಶಿಂಷಾ ಕೇಂದ್ರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸಲು ಸಾಕಷ್ಟು ಅವಕಾಶವಿದೆ.

ಬ್ಯಾಂಕಿಂಗ್, ವಾಣಿಜ್ಯ, ವ್ಯಾಪಾರ ರಂಗಗಳಲ್ಲಿಯೂ ಜಿಲ್ಲೆಯು ಪ್ರಗತಿ ಪಥದಲ್ಲಿದೆ. ಜಿಲ್ಲೆಯಲ್ಲಿ ೧೯೯೮ರ ವೇಳೆಗೆ ೧೦೨ ವಾಣಿಜ್ಯ ಬ್ಯಾಂಕುಗಳು, ೨೫ ಗ್ರಾಮೀಣ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು ೪೧೦ ಕೋಟಿ ರೂ. ಠೇವಣಿ ಹೊಂದಿದ್ದವು. ಹಾಗೂ ೨೩೮ ಕೋಟಿ ರೂ.ಗಳ ಸಾಲ ನೀಡಿ ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಸಹಕರಿಸಿದವು. ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಂಘ ಹಾಗೂ ಕ್ರೆಡಿಟ್ ಸಹಕಾರ ಸಂಘಗಳಂತಹವು ಆರ್ಥಿಕ ಬದುಕಿಗೆ ನವಚೇತನವನ್ನು ನೀಡಿವೆ. ಸಾಂಪ್ರದಾಯಿಕ ವ್ಯಾಪಾರ ಕೇಂದ್ರಗಳಾದ ಸಂತೆಗಳೊಂದಿಗೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ (ಎ.ಪಿ.ಎಂ.ಸಿ) ಆವರಣಗಳು ರೈತರಿಗೆ ಉತ್ತಮ ಬೆಲೆ ದೊರಕಿಸುವಲ್ಲಿ ನೆರವಾಗುತ್ತಿವೆ. ಮದ್ದೂರು, ಹೇಮಗಿರಿ ಜಾತ್ರೆಗಳು ಇಂದಿಗೂ ದನಗಳ ವ್ಯಾಪಾರಕ್ಕೆ ಪ್ರಸಿದ್ಧವಾಗಿವೆ. ಎಳೆನೀರಿನ ವಿಲೇವಾರಿಗೆ ಮದ್ದೂರಿನಲ್ಲಿ ವಿಶೇಷ ಮಾರುಕಟ್ಟೆಯನ್ನು ತೆರೆಯಲಾಗಿದೆ. ತಾಜಾ ಎಳನೀರನ್ನು ಪ್ಲಾಸ್ಟಿಕ್ ಚೀಲದಲ್ಲಿ ಮಾರುಕಟ್ಟೆಗೆ ಸರಬರಾಜು ಮಾಡುವ ನಿಟ್ಟಿನಲ್ಲಿ ರೈತ ಸಂಘಗಳು ಕಾರ್ಯೋನ್ಮುಖವಾಗಿವೆ. ಮಂಡ್ಯದ ಸಕ್ಕರೆ ಹಲವು ರಾಷ್ಟ್ರಗಳಿಗೆ ರಫ್ತಾಗುತ್ತದೆ. ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕ ವ್ಯವಸ್ಥೆಯು ಉತ್ತಮವಾಗಿದೆ. ಪ್ರತೀ ನೂರು ಚ.ಕಿ.ಮೀ. ಪ್ರದೇಶಕ್ಕೆ ಸುಮಾರು ೧೬೦ ಕಿ.ಮೀ.ರಸ್ತೆಗಳಿದ್ದು, ರಾಜ್ಯದಲ್ಲಿಯೇ ಪ್ರಥಮ ಸ್ಥಾನ ಪಡೆದಿದೆ.

ನಗರೀಕರಣ ಚಟುವಟಿಕೆ ೧೯೮೧ರವರೆಗೆ ಮಂದಗತಿಯಲ್ಲಿದ್ದು, ಶ್ರೀರಂಗಪಟ್ಟಣವು ನಾಲ್ಕನೆಯ ವರ್ಗದ ಪಟ್ಟಣವಾಗಿದ್ದರೆ, ಮಂಡ್ಯ ಆರನೆಯ ವರ್ಗಕ್ಕೆ ಸೇರಿತ್ತು. ಆದರೆ ೧೯೦೧ ರಿಂದ ೧೯೩೧ ಅವಧಿಯಲ್ಲಿ ಮಂಡ್ಯ ಐದನೆಯ ವರ್ಗಕ್ಕೆ ಏರಿತು. ಮುಂದೆ ೧೯೪೧ರ ವೇಳೆಗೆ ಮಂಡ್ಯ ಪಟ್ಟಣವು ನಾಲ್ಕನೆಯ ವರ್ಗಕ್ಕೂ, ೧೯೫೧ರಲ್ಲಿ ಮೂರನೆಯ ವರ್ಗಕ್ಕೂ, ೧೯೭೧ರಲ್ಲಿ ಎರಡನೆಯ ವರ್ಗಕ್ಕೇರಿ, ೧೯೮೧ ರಿಂದೀಚೆಗೆ ಒಂದನೆಯ ವರ್ಗದ ಏಕೈಕ ಪಟ್ಟಣವಾಗಿ ಹೊರಹೊಮ್ಮಿದೆ. ಮಂಡ್ಯ ನಗರವೊಂದನ್ನು ಬಿಟ್ಟು ಉಳಿದ ಪಟ್ಟಣಗಳ ಬೆಳವಣಿಗೆ ಮಂದಗತಿಯಲ್ಲಿಯೇ ಮುಂದುವರಿದಿದೆ.

ಜಿಲ್ಲೆಯ ಆದಾಯಕ್ಕೆ ಪ್ರಾಥಮಿಕ ವಲಯ (ಕೃಷಿ) ಹಾಗೂ ದ್ವಿತೀಯ ವಲಯ (ಕೈಗಾರಿಕೆ)ಗಳ ಆದಾಯಕ್ಕಿಂತ ಹೆಚ್ಚಿನ ಆದಾಯ ತೃತೀಯ ವಲಯ (ಸೇವಾಕ್ಷೇತ್ರ) ದಿಂದ ಸಂದಾಯವಾಗುತ್ತಿದ್ದು, ಇದೂ ಸಹ ಮಹತ್ವದ ಅಂಶವಾಗಿದೆ. ಆದರೆ ಜಿಲ್ಲೆಯ ತಲಾದಾಯ ಹೊರನೋಟಕ್ಕೆ ಹೆಚ್ಚಳವಾಗಿ ಕಂಡುಬಂದರೂ ರಾಜ್ಯಮಟ್ಟದಲ್ಲಿ ಜಿಲ್ಲೆಯು ೧೮ನೇಯ ಸ್ಥಾನದಲ್ಲಿದೆ.

ಜಿಲ್ಲೆಯಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತ ಬಂದಿದ್ದು, ೨೦೦೧-೦೨ರ ಅಂತ್ಯಕ್ಕೆ ಒಟ್ಟು ೬೭,೩೮೪ ಮಂದಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿಕೊಂಡಿದ್ದರೆಂದು ತಿಳಿದುಬರುತ್ತದೆ. ಉದ್ಯೋಗ ನೀಡುವ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಯತ್ನಿಸಿದ್ದರೂ, ನಿರುದ್ಯೋಗ ಸ್ಥಿತಿ ಉದ್ಭವಿಸಿದೆ.

ಜನರ ಜೀವನಮಟ್ಟವನ್ನು ಸುಧಾರಿಸಲು ಬಡತನ ನಿವಾರಣೆ, ಕ್ಷಾಮ ಪರಿಹಾರ ಯೋಜನೆ, ಸಮಾಜ ಕಲ್ಯಾಣ ಯೋಜನೆಗಳಾದ ಕನಿಷ್ಠ ಅಗತ್ಯ ಕಾರ್ಯಕ್ರಮ, ಐ.ಆರ್.ಡಿ.ಪಿ ಮುಂತಾದ ಹತ್ತು ಹಲವು ಯೋಜಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ತತ್ಪರಿಣಾಮವಾಗಿ ಮಂಡ್ಯ ಜಿಲ್ಲೆಯು ಇಂದು ಅಭಿವೃದ್ಧಿಶೀಲ ವಲಯ-೨ರ ಗುಂಪಿನಲ್ಲಿದ್ದು, ಅಭಿವೃದ್ಧಿ ಶೀಲ ಜಿಲ್ಲೆಯಾಗಿ ರೂಪುಗೊಳ್ಳುತ್ತಿದೆ.

## ಸಾಮಾಜಿಕ ಆರ್ಥಿಕ ಸಮೀಕ್ಷೆ (೧೯೪೧)

ಮಂಡ್ಯ ಜಿಲ್ಲೆ ರೂಪುಗೊಂಡ ಎರಡು ವರ್ಷಗಳಲ್ಲಿ ಜರುಗಿದ ದಶ ವಾರ್ಷಿಕ ಗಣತಿಯ ಸಂದರ್ಭದಲ್ಲಿ (೧೯೪೧) ಜಿಲ್ಲೆಯ ತಗ್ಗಹಳ್ಳಿ, ಎಚ್.ಮಲ್ಲಿಗೆರೆ ಹಾಗೂ ಬಸರಾಳು, (ಮಂಡ್ಯ ತಾ.), ನೆಲಮನೆ, ಗೆಂಡೆಹೊಸಹಳ್ಳಿ ಹಾಗೂ ಹುಣಸನಹಳ್ಳಿ (ಶ್ರೀರಂಗಪಟ್ಟಣ ತಾ.), ಬ್ಯಾಡರಹಳ್ಳಿ, ಜಕ್ಕನಹಳ್ಳಿ, ಹಾಗೂ ಲಿಂಗಾಪುರ (ಪಾಂಡವಪುರ ತಾ.), ಮಾರಗೊಂಡನಹಳ್ಳಿ, ಬೆಳ್ಳೂರು, ತೂಬಿನಕೆರೆ ಹಾಗೂ ಬೋಗಾದಿ (ನಾಗಮಂಗಲ ತಾ.), ಅಕ್ಕಿಹೆಬ್ಬಾಳ, ಕಿಕ್ಕೇರಿ ಹಾಗೂ ಮುರಕನಹಳ್ಳಿ (ಕೃಷ್ಣರಾಜಪೇಟೆ ತಾ.), ಹುಲ್ಲಹಳ್ಳಿ, ಚಿಕ್ಕಮುಳಗೋಡ್ ಹಾಗೂ ಪಂಡಿತಹಳ್ಳಿ (ಮಳವಳ್ಳಿ ತಾ.), ಸೋಮನಹಳ್ಳಿ, ಕಾಡಲೂರು, ತೂಬಿನಕೆರೆ ಹಾಗೂ ಸುಬ್ಬನಹಳ್ಳಿ (ಮದ್ದೂರು.ತಾ), ಗಳನ್ನೊಳಗೊಂಡ ೨೩ ಹಳ್ಳಿಗಳಲ್ಲಿ ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಆಯ್ದ ಗ್ರಾಮಗಳಲ್ಲಿದ್ದ ಜನಸಂಖ್ಯೆ, ಕುಟುಂಬಗಳ ಸಂಖ್ಯೆ, ಜನಾಂಗೀಯ ಮಾಹಿತಿ, ಸಾಕ್ಷರತೆ, ಸಾಗುವಳಿ ಭೂಮಿ, ಬೆಳೆಗಳು, ಭೂ ಒಡೆತನ, ಖಾಸಗಿ ಹಾಗೂ ಸಾರ್ವತ್ರಿಕ ಸಂಪತ್ತಿನ ಮೌಲ್ಯ, ಆಸ್ತಿ-ಪಾಸ್ತಿ, ಮನೆ-ಮಾರು, ಸಾಲಸೋಲ, ಜೀವನಮಟ್ಟ, ದುಡಿಯುವ ವರ್ಗಗಳ ಆದಾಯ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಅಂಕಿಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಆಯಾ ಹಳ್ಳಿಗಳ ಆರ್ಥಿಕ ಸ್ಥಿತಿಗತಿಗಳನ್ನೊಳಗೊಂಡ ಮಾಹಿತಿಯನ್ನು ೧೯೪೪ರಲ್ಲಿ ಪ್ರಕಟಿಸಲಾಯಿತು. ಅದರಂತೆ ಇವುಗಳಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ (೨೧೯) ಬೆಳ್ಳೂರಿನಲ್ಲಿದ್ದರೆ, ಅತ್ಯಂತ ಕಡಿಮೆ ಜನಸಂಖ್ಯೆ (೧೦೮) ಲಿಂಗಾಪುರದಲ್ಲಿತ್ತು. ಅದರಂತೆ ಅತ್ಯಂತ ಹೆಚ್ಚು ಮನೆಗಳು (೩೯೫) ಬೆಳ್ಳೂರಿನಲ್ಲೂ, ಕಡಿಮೆ ಮನೆಗಳು (೬೦) ಲಿಂಗಾಪುರದಲ್ಲೂ ಇದ್ದವು. ಕೃಷಿ ಪಶುಸಂಗೋಪನೆಗಳೇ ಪ್ರಧಾನ ಆರ್ಥಿಕ ಚಟುವಟಿಕೆಗಳಾಗಿದ್ದು, ಅತ್ಯಂತ ಹೆಚ್ಚು ನೀರಾವರಿ ಪ್ರದೇಶ (೧೦೫೬ ಎಕರೆ) ಕೆ.ಶೆಟ್ಟಿಹಳ್ಳಿಯಲ್ಲಿದ್ದರೆ, ಕಡಿಮೆ ನೀರಾವರಿ ಪ್ರದೇಶ (೩೬ ಎಕರೆ) ಜಕ್ಕನಹಳ್ಳಿಯಲ್ಲೂ ಇದ್ದು ಈ ಪ್ರದೇಶಗಳಲ್ಲಿ ಭತ್ತ ಪ್ರಧಾನ ಬೆಳೆಯಾಗಿದ್ದಿತು. ತಗ್ಗಹಳ್ಳಿಯಲ್ಲಿ ೬೬ ಎಕರೆ, ಕೊತ್ತತ್ತಿಯಲ್ಲಿ ೨೧೯ ಎಕರೆ, ನೆಲಮನೆಯಲ್ಲಿ ೬೩ ಎಕರೆ, ಗೆಂಡೆಹೊಸಹಳ್ಳಿಯಲ್ಲಿ ಮೂರು ಎಕರೆ, ಮಾರಗೊಂಡನಹಳ್ಳಿಯಲ್ಲಿ ೩೦ ಎಕರೆ ಹಾಗೂ ಬೆಳ್ಳೂರಿನಲ್ಲಿ ೫೨ ಎಕರೆ ನೀರಾವರಿ ಭೂಮಿಯಲ್ಲಿ ಕಬ್ಬನ್ನು ಬೆಳೆಯಲಾಗುತ್ತಿತ್ತು. ಜೋಳ, ಹುರುಳಿ, ಅವರೆ, ಇತರ ಉಲ್ಲೇಖಾರ್ಹ ಬೆಳೆಗಳಾಗಿದ್ದವು. ಆಯಾ ಗ್ರಾಮದ ಖುಷ್ಕಿ ನೀರಾವರಿ, ತೋಟ ಪಟ್ಟೆ, ಪಶುಪ್ರಾಣಿ ಸಂಪತ್ತು, ಮನೆ ಮುಂತಾದವುಗಳ ಮೌಲ್ಯವನ್ನು ಅಂದಾಜಿಸಲಾಗಿದ್ದು, ಅದರಂತೆ ಬೆಳ್ಳೂರು ಅತಿ ಹೆಚ್ಚು ಸಂಪತ್ತನ್ನು (ರೂ.೫,೫೬,೪೧೨) ಹೊಂದಿದ್ದರೆ, ಲಿಂಗಾಪುರದ ಆಸ್ತಿಯ ಮೌಲ್ಯ (ರೂ.೧೪,೧೬೩) ಆಗಿತ್ತು. ನೀರಾವರಿ ಪ್ರದೇಶದಲ್ಲಿ ಕೂಲಿಯ ದರ ಪುರುಷ, ಮಹಿಳೆ ಹಾಗೂ ಬಾಲಕರಿಗೆ ಕ್ರಮವಾಗಿ ೬, ೪, ಹಾಗೂ ೩ ಆಣೆಗಳಾಗಿದ್ದರೆ, ಒಣಬೇಸಾಯ ಪ್ರದೇಶಗಳಲ್ಲಿ ಕ್ರಮವಾಗಿ ೪, ೩ ಹಾಗೂ ೨ ಆಣೆಗಳಾಗಿತ್ತು. ಅತ್ಯಂತ ಹೆಚ್ಚು ಸಾಲಗಾರ ಕುಟುಂಬಗಳು (೨೨೮) ಕಿಕ್ಕೇರಿಯಲ್ಲಿದ್ದು, ಒಟ್ಟು ಸಾಲದ ಮೊತ್ತ ರೂ.೯೧,೮೯೩ ಆಗಿತ್ತು. ಕುಟುಂಬಗಳ ಸರಾಸರಿ ಸಾಲ ರೂ.೨೬೧ ಆಗಿದ್ದಿತು. ಅತ್ಯಂತ ಕಡಿಮೆ ಸಾಲಗಾರರ ಕುಟುಂಬಗಳು ಲಿಂಗಾಪುರದಲ್ಲಿ ಇದ್ದು, ೨೪ ಕುಟುಂಬಗಳಲ್ಲಿ ೧೬ ಕುಟುಂಬಗಳು ಸಾಲ ಮಾಡಿದ್ದು, ಸಾಲದ ಮೊತ್ತ ರೂ.೨,೫೨೦ ಹಾಗೂ ಕುಟುಂಬಗಳ ಸರಾಸರಿ ಸಾಲ ರೂ.೧೫೦ ಆಗಿತ್ತು. ಎಲ್ಲಾ ೨೩ ಗ್ರಾಮಗಳಲ್ಲೂ ಶೇ.೫೦-೬೦ ಸಾಲಗಾರರ ಕುಟುಂಬಗಳಿದ್ದು, ಅವರ ಜೀವನಮಟ್ಟವನ್ನು ಅರಿಯಲು ಇವು ನೆರವಾಗುತ್ತವೆ. ಇದೇ ಮಾದರಿಯಲ್ಲಿ ೧೯೬೧ರ ಜನಗಣತಿ ಸಂದರ್ಭದಲ್ಲೂ ಜಿಲ್ಲೆಯ ಆಯ್ದ ಎರಡು ಗ್ರಾಮಗಳಲ್ಲಿ ಸಾಮಾಜಿಕ-ಆರ್ಥಿಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು.

### ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ (೧೯೬೧)

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಹಾಗೂ ಮದ್ದೂರು ತಾಲೂಕಿನ ಕೆಸ್ತೂರು ಗ್ರಾಮಗಳಲ್ಲಿ ೧೯೬೧ರ ಜನಗಣತಿ ಸಂದರ್ಭದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಲಾಯಿತು. ಸಮೀಕ್ಷೆಯ

ಕಾಲಾವಧಿಯಲ್ಲಿ ಕಿಕ್ಕೇರಿಯಲ್ಲಿ ೫೨೬ ಕುಟುಂಬಗಳಿದ್ದು, ಒಟ್ಟು ೨,೮೪೭ ಜನಸಂಖ್ಯೆಯಿತ್ತು. ಇದರಲ್ಲಿ ೨೦ ವಿವಿಧ ಜಾತಿಯ ಕುಟುಂಬಗಳಿದ್ದು, ಮುಖ್ಯವಾಗಿ ಕುರುಹಿನಶೆಟ್ಟಿ(೨೧೬), ಒಕ್ಕಲಿಗೆ (೧೧೨), ಗಾಣಿಗ(೨೧), ಬ್ರಾಹ್ಮಣ (೪೦), ಹಾಗೂ ಮುಸ್ಲಿಂ ಜನಾಂಗದ ೨೧ ಕುಟುಂಬಗಳು ಸೇರಿದ್ದವು.

ಕಿಕ್ಕೇರಿಯ ೫೨೬ ಕುಟುಂಬಗಳಲ್ಲಿ, ೧೦ ಕುಟುಂಬಗಳು ಕೊಠಡಿರಹಿತ ಮನೆಗಳಲ್ಲಿ ವಾಸಿಸುತ್ತಿದ್ದರು. ೨೨೪ ಕುಟುಂಬಗಳು ಒಂದು ಕೊಠಡಿಯುಳ್ಳ ಮನೆಗಳಲ್ಲಿ ವಾಸವಾಗಿದ್ದರೆ, ೧೭೯ ಕುಟುಂಬಗಳು ಎರಡು ಕೊಠಡಿಗಳನ್ನುಳ್ಳ, ೬೬ ಕುಟುಂಬಗಳು ಮೂರು ಕೊಠಡಿಗಳನ್ನುಳ್ಳ, ೩೪ ಕುಟುಂಬಗಳು ನಾಲ್ಕು ಕೊಠಡಿಗಳನ್ನುಳ್ಳ, ಏಳು ಕುಟುಂಬಗಳು ಐದು ಕೊಠಡಿಗಳನ್ನುಳ್ಳ ಹಾಗೂ ಆರು ಕುಟುಂಬಗಳು ಐದು ಕೊಠಡಿಗಳಿಗಿಂತ ಹೆಚ್ಚಿರುವ ಮನೆಗಳಲ್ಲಿ ವಾಸವಾಗಿದ್ದರು. ಈ ಗ್ರಾಮದಲ್ಲಿದ್ದ ೫೨೬ ಮನೆಗಳಲ್ಲಿ ೪೬೪ ಮನೆಗಳ ಗೋಡೆಗಳು ಮಣ್ಣಿನಿಂದ ನಿರ್ಮಾಣಗೊಂಡಿದ್ದರೆ, ನಾಲ್ಕು ಮನೆಗಳ ಗೋಡೆಗಳು ಮಣ್ಣು ಮತ್ತು ಇಟ್ಟಿಗೆಗಳಿಂದಲೂ, ೫೭ ಮನೆಗಳು ಇಟ್ಟಿಗೆಗಳಿಂದಲೂ ಹಾಗೂ ಒಂದು ಮನೆಯ ಗೋಡೆಯು ಹುಲ್ಲು ಬಿದಿರುಗಳಿಂದಲೂ ನಿರ್ಮಾಣಗೊಂಡಿತ್ತು. ಇದಲ್ಲದೆ ೧೧ ಆರ್.ಸಿ.ಸಿ.ಮನೆಗಳು, ೪೫೮ ನಾಡು ಹೆಂಚಿನ ಮನೆಗಳು, ೪೮ ಮಂಗಳೂರು ಹೆಂಚಿನ ಮನೆಗಳಿದ್ದು, ಎರಡು ಮನೆಗಳು ನಾಡು ಮತ್ತು ಮಂಗಳೂರು ಹೆಂಚುಗಳ ಮಿಶ್ರ ಛಾವಣಿ ಹೊಂದಿದ್ದವು.

ಕಿಕ್ಕೇರಿ ಗ್ರಾಮವು ವ್ಯವಸಾಯ ಪ್ರಧಾನ ಗ್ರಾಮವಾಗಿದ್ದು, ಒಟ್ಟು ೪೭೯.೧೫ ಎಕರೆ ಭೂ ವಿಸ್ತೀರ್ಣವನ್ನು ಹೊಂದಿದ್ದಿತು. ಇಲ್ಲಿನ ೪೨೩ ಕುಟುಂಬಗಳು ಭೂಮಿಯನ್ನು ಹೊಂದಿರಲಿಲ್ಲ. ವಿವಿಧ ಜಾತಿಗಳಿಗೆ ಸೇರಿದ ೧೦೩ ಕುಟುಂಬಗಳು ಒಟ್ಟು ೩೧೨.೯೪ ಎಕರೆ ಭೂಮಿಯನ್ನು ಹೊಂದಿದ್ದವು. ಅದರಲ್ಲೂ ಒಕ್ಕಲಿಗ, ಕುರುಹಿನಶೆಟ್ಟಿ ಹಾಗೂ ಆದಿ ಕರ್ನಾಟಕ ಜಾತಿಗೆ ಸೇರಿದ ಜನರು ಶೇ.೯೦ ರಷ್ಟು ಭೂಮಿಯನ್ನು ಹೊಂದಿದ್ದರು. ಅಲ್ಲದೆ ಕಿಕ್ಕೇರಿಗೆ ನೆರೆಯ ಕೃಷ್ಣರಾಜಪೇಟೆ, ಬೋರೇಗೌಡನ ಕೊಪ್ಪಲು, ಕೃಷ್ಣರಾಜ ನಗರ, ಅಮ್ಮನ ಕಟ್ಟೆ, ಭೂವಪುರ, ಹಟಕನಹಳ್ಳಿ, ದೊಬ್ಬೆಗಟ್ಟ, ನೆಲ್ಲೂರು, ಹೊನ್ನಕಟ್ಟೆಹಳ್ಳಿ ಮತ್ತು ಬೋರಾಪುರ ಮುಂತಾದ ಗ್ರಾಮಗಳಿಂದ ಬಂದು ನೆಲಸಿದ ವಿವಿಧ ಕುಟುಂಬಗಳು ತಮ್ಮ ತಮ್ಮ ಮೂಲ ಊರುಗಳಲ್ಲಿ ಜಮೀನನ್ನು ಹೊಂದಿದ್ದು, ಅದರಂತೆ ಕಿಕ್ಕೇರಿಯ ವ್ಯಾಪ್ತಿಯಲ್ಲಿದ್ದ ಜಮೀನನ್ನು ಕೋಷ್ಟಕ ೮.೧ರಲ್ಲಿ ನೀಡಿರುವಂತೆ ಬಳಸಿಕೊಂಡಿತ್ತು.

**ಕೋಷ್ಟಕ ೮.೧ ಕಿಕ್ಕೇರಿ ಗ್ರಾಮದಲ್ಲಿದ್ದ ಭೂ ಬಳಕೆಯ ವಿವರ (ಎಕರೆಗಳಲ್ಲಿ)**

| | ೧೯೬೦ | ೧೯೬೧ | ೧೯೬೨ |
|---|---|---|---|
| ವ್ಯವಸಾಯೇತರ ಉಪಯೋಗ | ೧೪೩.೦೩ | ೧೪೩.೦೩ | ೧೪೩.೦೩ |
| ಖಾಯಂ ಗೋಮಾಳ ಇತರೆ ಹುಲ್ಲುಗಾವಲುಗಳು | ೩೨.೨೦ | ೨೭.೦೨ | ೨೫.೭೭ |
| ಇತರೆ ವೃಕ್ಷಗಳು ಮತ್ತು ತೋಪುಗಳು | ೧೦.೭೦ | ೧೦.೭೦ | ೧೦.೭೦ |
| ನಿವ್ವಳ ಬಿತ್ತನೆ ಪ್ರದೇಶ | ೨೯೩.೨೨ | ೨೯೮.೪೦ | ೨೯೯.೬೫ |
| ಒಟ್ಟು ಭೂಮಿ | ೪೭೯.೧೫ | ೪೭೯.೧೫ | ೪೭೯.೧೫ |

ಇಲ್ಲಿ ೧,೩೫೧ ಕೆಲಸಗಾರರು ಹಾಗೂ ೧,೪೯೬ ಕೆಲಸಗಾರರಲ್ಲದವರು (ನಾನ್ ವರ್ಕರ್ಸ್) ಇದ್ದರು. ರಾಗಿ ಹಾಗೂ ಭತ್ತ ಬೆಳೆಯಲು ಒಂದು ಎಕರೆಗೆ ತಗಲುತ್ತಿದ್ದ ವೆಚ್ಚದ ವಿವರ ಹೀಗಿದೆ. ೧೯೬೧ರಲ್ಲಿ ಕಿಕ್ಕೇರಿ ಗ್ರಾಮದಲ್ಲಿ ಸಾಂಪ್ರದಾಯಿಕ ಉಪಕರಣಗಳಾದ ಕಬ್ಬಿಣದ ನೇಗಿಲು, ಕುಂಟೆ, ಹಲುಬೆ ಮತ್ತು ಗೆಣೆ ಮುಂತಾದವುಗಳನ್ನು ಬಳಸಲಾಗುತ್ತಿದ್ದು, ಒಂದು ಎಕರೆಯಲ್ಲಿ ರಾಗಿ ಬೆಳೆಯಲು ಉಳುಮೆಗೆ ರೂ.೨೦, ನಾಟಿ ಮಾಡಲು ರೂ.೧೪.೦೦,

ಮೂರು ಕೆ.ಜಿ.ಬಿತ್ತನೆ ರಾಗಿಗೆ ರೂ.೧.೮೦ ಪೈಸೆ, ಇತರೆ ಬೀಜಗಳಿಗೆ ರೂ.೮.೦೦, ಗೊಬ್ಬರಕ್ಕೆ ರೂ.೫೦.೦೦, ಕುಂಟೆ ಹೊಡೆಯಲು ರೂ.೮.೦೦ ಹಾಗೂ ಒಕ್ಕಣೆ ಮಾಡಲು ರೂ.೬೦.೦೦ ಹೀಗೆ ಎಕರೆಗೆ ಒಟ್ಟು ರೂ.೧೬೧.೮೦ ವೆಚ್ಚವಾಗುತ್ತಿದ್ದಿತು. ಒಂದು ಎಕರೆಯಲ್ಲಿ ಎಂಟು ಕ್ವಿಂಟಾಲ್ ರಾಗಿ ಬೆಳೆಯಲಾಗುತ್ತಿದ್ದು, ಇಳುವರಿಯ ಒಟ್ಟು ಮೊತ್ತ ರೂ.೪೦೦ (ದ್ವಿದಳ ಧಾನ್ಯಗಳನ್ನು ಹೊರತುಪಡಿಸಿ) ಆಗಿದ್ದಿತು. ಭತ್ತಕ್ಕೆ ತಗಲುತ್ತಿದ್ದ ವೆಚ್ಚ ಉಳುಮೆಗೆ ೪೦.೦೦ ರೂ.ಗಳು, ನಾಟಿ ಮಾಡಿಸಲು (೧೨ ಹೆಣ್ಣಾಳು, ೪ ಗಂಡಾಳುಗಳಿಗೆ ಒಂದು ದಿನಕ್ಕೆ) ೨೬.೦೦ ರೂ.ಗಳು, ಗೊಬ್ಬರಕ್ಕೆ ೧೩೦.೦೦ ರೂ.ಗಳು, ಬಿತ್ತನೆ ಬೀಜ (೨೦ ಸೇರು) ೨೦.೦೦ ರೂ.ಗಳು, ಕಳೆ ತೆಗೆಯಲು (೨ ಬಾರಿ) ೩೬.೦೦ ರೂ.ಗಳು, ಕೊಯ್ಲು ಮಾಡಲು (೧೨ ಜನರಿಗೆ) ೧೮.೦೦ ರೂ.ಗಳು, ಕೊಯ್ದ ಪೈರನ್ನು ಕಣಕ್ಕೆ ಸಾಗಿಸಲು ರೂ. ೧೦.೦೦ ಹಾಗು ಒಕ್ಕಣೆ ಮಾಡಲು ರೂ.೧೦೦.೦೦ ಒಟ್ಟು ರು.೩೮೦.೦೦ಗಳು ವೆಚ್ಚವಾಗುತ್ತಿತ್ತು. ಇಷ್ಟು ವೆಚ್ಚ ಮಾಡಿ ಎಕರೆಗೆ ೧೫ ಕ್ವಿಂಟಾಲ್ ಭತ್ತ ಬೆಳೆಯಲಾಗುತ್ತಿದ್ದು, ಇಳುವರಿಯ ಮೊತ್ತ ರೂ.೭೫೦ (ಋತುಮಾನಕ್ಕನುಗುಣವಾಗಿ ಹಾಗೂ ಮಾರುಕಟ್ಟೆಯ ಸ್ಥಿತಿಗನುಗುಣವಾಗಿ ಇಳುವರಿಯ ಮೊತ್ತದಲ್ಲಿ ವ್ಯತ್ಯಯ ಉಂಟಾಗುತ್ತದೆ.) ಆಗಿದ್ದಿತು.

**ಕಿಕ್ಕೇರಿಯ ಸಾಂಪ್ರದಾಯಿಕ ಉದ್ಯಮಗಳು**

ನೇಯ್ಗೆ, ಟೈಲರಿಂಗ್, ಕುಂಬಾರಿಕೆ, ಕಮ್ಮಾರಿಕೆ ಹಾಗೂ ಅಕ್ಕಸಾಲಿಗ ವೃತ್ತಿಗಳು ೧೩೦ ಕುಟುಂಬಗಳ ಜೀವನಾಧಾರ ಕಸುಬುಗಳಾಗಿದ್ದವು. ಅವುಗಳಲ್ಲಿ ೧೧೫ ಕುಟುಂಬಗಳು ಸಾಂಪ್ರದಾಯಿಕ ಉದ್ಯಮವಾಗಿದ್ದ ನೇಯ್ಗೆಯಲ್ಲಿ ತೊಡಗಿದ್ದವು.

**ಆದಾಯ**

ಕಿಕ್ಕೇರಿಯಲ್ಲಿ ೧೩೫ ಕುಟುಂಬಗಳು ಭೂಒಡೆತನ ಹೊಂದಿದ ವ್ಯವಸಾಯಗಾರರಾಗಿದ್ದು, ಇವರ ವಾರ್ಷಿಕ ಸರಾಸರಿ ಆದಾಯ ರೂ.೧,೬೪೫ ಅಥವಾ ಮಾಸಿಕ ರೂ.೧೩೭.೦೦ ಆಗಿತ್ತು. ಇವರಲ್ಲಿ ೯ ಕುಟುಂಬಗಳು ವಾರ್ಷಿಕ ರೂ.೩೦೧–೬೦೦ ಆದಾಯ ಹೊಂದಿದ ಗುಂಪಿನಲ್ಲಿದ್ದರೆ, ೨೯ ಕುಟುಂಬಗಳು ರೂ.೬೦೧–೯೦೦, ೨೫ ಕುಟುಂಬಗಳು ರೂ. ೯೦೦–೧೨೦೦ ಹಾಗೂ ೭೨ ಕುಟುಂಬಗಳು ರೂ.೧,೨೦೧ಕ್ಕಿಂತ ಹೆಚ್ಚು ಆದಾಯ ಹೊಂದಿದ ಗುಂಪಿಗೆ ಸೇರಿದ್ದವು. ಹಾಗೆಯೇ ಆರು ಕುಟುಂಬಗಳು ಗೇಣಿ ಆಧಾರಿತ ವ್ಯವಸಾಯಗಾರರಾಗಿದ್ದು, ಇವರ ವಾರ್ಷಿಕ ಸರಾಸರಿ ಆದಾಯ ರೂ. ೧,೦೬೨ಗಳು ಅಥವಾ ತಿಂಗಳಿಗೆ ರೂ.೮೮½ ಆಗಿದ್ದಿತು. ಎರಡು ಕುಟುಂಬಗಳು ಕೃಷಿ ಕಾರ್ಮಿಕ ವೃತ್ತಿಯನ್ನು ಅವಲಂಬಿಸಿದ್ದು, ಅವುಗಳ ವಾರ್ಷಿಕ ಸರಾಸರಿ ಆದಾಯ ರೂ. ೩೬೪ ಅಥವಾ ತಿಂಗಳಿಗೆ ರೂ.೩೦ ಗಳಿಗಿಂತ ಅಧಿಕವಾಗಿತ್ತು. ೧೧೮ ಕುಟುಂಬಗಳು ಗೃಹ ಕೈಗಾರಿಕೆಗಳನ್ನು ಅವಲಂಬಿಸಿದ್ದು, ಇವರ ವಾರ್ಷಿಕ ಸರಾಸರಿ ಆದಾಯ ರೂ. ೧,೧೪೯ ಅಥವಾ ರೂ. ೯೫½ಗಳಿಗಿಂತ ಅಧಿಕ, ೪೭ ಕುಟುಂಬಗಳು ಸಣ್ಣ ಕೈಗಾರಿಕೆ (ಇತರೆ)ಗಳನ್ನು ಅವಲಂಬಿಸಿದ್ದು, ಇವರ ವಾರ್ಷಿಕ ಸರಾಸರಿ ಆದಾಯ ರೂ.೧,೨೨೫ಗಳು ಅಥವಾ ತಿಂಗಳಿಗೆ ರೂ.೧೦೨ ಗಳು ಹಾಗೂ ೨೧೮ ಇತರೆ ಕುಟುಂಬಗಳು ಸರಾಸರಿ ವಾರ್ಷಿಕ ಆದಾಯ ರೂ.೧,೭೫೨ ಅಥವಾ ಮಾಸಿಕ ರೂ.೧೪೬ಗಳು ಆಗಿತ್ತು.

ಕಿಕ್ಕೇರಿ ಗ್ರಾಮದಲ್ಲಿ ೧೦ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ರೂ.೩೦೦ಕ್ಕಿಂತ ಕಡಿಮೆ ಇದ್ದು, ಅವುಗಳ ಸ್ಥಿತಿಯು ದುಸ್ತರವಾಗಿತ್ತು. ೨೩೪ ಕುಟುಂಬಗಳ ಸರಾಸರಿ ವಾರ್ಷಿಕ ಆದಾಯ ರೂ.೧,೨೦೦ಕ್ಕಿಂತ ಹೆಚ್ಚಾಗಿದ್ದು, ಆರ್ಥಿಕ ಸ್ಥಿತಿಗತಿಗಳು ಉತ್ತಮವಾಗಿದ್ದುವೆಂದು ಸಮೀಕ್ಷೆಯಿಂದ ಗೊತ್ತಾಗುತ್ತದೆ.

ಈ ಗ್ರಾಮದ ೫೨೬ ಕುಟುಂಬಗಳ ಪೈಕಿ ೩೬೦ ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಸಾಲದ ಒಟ್ಟು ಮೊತ್ತ ೨,೪೦,೪೨೨ ರೂ.ಗಳಾಗಿತ್ತು. ಇದು ವಿವಿಧ ಆದಾಯದ ಗುಂಪುಗಳಲ್ಲಿ ಹಂಚಿಕೆಯಾಗಿದೆ. ಮಾಸಿಕ ರೂ.೨೫ ಕ್ಕಿಂತ ಕಡಿಮೆ ಇದ್ದ ೧೦ ಕುಟುಂಬಗಳಲ್ಲಿ, ನಾಲ್ಕು ಕುಟುಂಬಗಳು ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಒಟ್ಟು ಸಾಲದ ಮೊತ್ತ ೫೬೦ರೂ.ಗಳಾಗಿತ್ತು. ಮಾಸಿಕ ರೂ.೨೬–೫೦ ವರಮಾನ ಹೊಂದಿದ ೬೩ ಕುಟುಂಬಗಳಲ್ಲಿ ೩೬ ಸಾಲಗಾರ ಕುಟುಂಬಗಳಾಗಿದ್ದು, ಅವುಗಳ ಸಾಲದ ಒಟ್ಟು ಮೊತ್ತ ರೂ.೮,೯೦೦ ಆಗಿತ್ತು. ಮಾಸಿಕ ರೂ.೫೧–೭೫ ವರಮಾನ ಹೊಂದಿದ ೧೦೮ ಕುಟುಂಬಗಳಲ್ಲಿ, ೭೧ ಕುಟುಂಬಗಳು ಒಟ್ಟು ರೂ.೨೦,೫೩೨ ಸಾಲ ಹೊಂದಿದ್ದವು. ಮಾಸಿಕ ರೂ.೧೦೦ಗಳಿಗಿಂತ ಹೆಚ್ಚಿನ ಆದಾಯ ಹೊಂದಿದ ೨೩೪ ಕುಟುಂಬಗಳಲ್ಲಿ, ೧೬೭ ಕುಟುಂಬಗಳು ಮಾಡಿದ ಸಾಲದ ಒಟ್ಟು ಮೊತ್ತ ರೂ.೧,೭೭,೩೭೦ ಆಗಿದ್ದಿತು. ಸಾಲದ ಮೊತ್ತ ರೂ.೨,೪೦,೪೨೨ಗಳ ಪೈಕಿ ರೂ.೧೩,೫೨೫ ಗಳನ್ನು ಸಹಕಾರಿ ಸಂಘಗಳಿಂದ ಪಡೆದಿದ್ದರೆ, ರೂ.೧,೪೦೦ಗಳನ್ನು ಎಲ್.ಐ.ಸಿಯಿಂದ ೧,೫೫೦ರೂ.ಗಳನ್ನು ಪ್ಯಾಕೇಜ್ ಸ್ಕೀಂಗಳಿಂದಲೂ, ರೂ.೮,೦೨೫ಗಳನ್ನು ರಾಷ್ಟ್ರೀಯ ವಿಸ್ತರಣಾ ಸೇವೆಯಿಂದಲೂ, ಬೃಹತ್ ಮೊತ್ತದ ಸಾಲವನ್ನು ಸ್ಥಳೀಯ ಸಾಹುಕಾರರು ಹಾಗೂ ಹಣದ ಲೇವಾದೇವಿಗಾರರಿಂದ ಪಡೆದಿದ್ದರು. ಭೂಮಿಯನ್ನು ಕೊಳ್ಳಲು, ಮನೆ ಕಟ್ಟಲು ಮತ್ತು ದುರಸ್ತಿ ಕೆಲಸಕ್ಕೆ, ಮದುವೆ, ಹಳೆಯ ಸಾಲಗಳನ್ನು ತೀರಿಸಲು, ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು, ಭೂಮಿಯನ್ನು ಅಭಿವೃದ್ಧಿಪಡಿಸಲು, ದನಕರುಗಳನ್ನು ಕೊಳ್ಳಲು ಹಾಗೂ ವಿಧ್ಯಾಭ್ಯಾಸಕ್ಕಾಗಿ ಸಾಲದ ಮೊರೆ ಹೋಗಿದ್ದರು. ಇಲ್ಲಿನ ಒಟ್ಟು ಸಾಲದಲ್ಲಿ ಭೂಮಿಯನ್ನು ಕೊಳ್ಳಲು ೨೯,೮೬೦ ರೂ.ಗಳನ್ನು ಮನೆ ಕಟ್ಟಲು ಮತ್ತು ದುರಸ್ತಿಗಾಗಿ ೨೧,೪೪೮ ರೂ.ಗಳನ್ನು ಮತ್ತು ಮದುವೆ ಮುಂತಾದ ಬಾಬ್ತುಗಳಿಗಾಗಿ ೧೯,೨೪೧ ರೂ.ಗಳನ್ನು ಸಾಲ ಪಡೆಯಲಾಗಿತ್ತು.

## ನಗರೀಕರಣ

ಮಂಡ್ಯ ಜಿಲ್ಲೆಯು ೧೯೩೯ರಲ್ಲಿ ಅಸ್ತಿತ್ವಕ್ಕೆ ಬರುವ ಮೊದಲು ಇಂದಿನ ಮಂಡ್ಯ ಜಿಲ್ಲಾ ಪ್ರದೇಶದಲ್ಲಿದ್ದ ಪಟ್ಟಣಗಳು ಹೊಂದಿದ್ದ ಒಟ್ಟು ಜನಸಂಖ್ಯೆ ೧೮೭೧ರಲ್ಲಿ ೩೨,೬೧೧, ೧೮೮೧ರಲ್ಲಿ ೩೨,೧೨೬, ೧೮೯೧ರಲ್ಲಿ ೩೫,೨೦೨ ಹಾಗೂ ೧೯೨೧ರಲ್ಲಿ ೩೭,೭೭೪ ಆಗಿದ್ದವು. ಶ್ರೀರಂಗಪಟ್ಟಣ, ಕಂಬದಹಳ್ಳಿ, ಅರೆತಿಪ್ಪೂರು, ಕಲ್ಕುಣಿ, ಕೆರೆಗೂಡು, ಹೊಳಲು, ಬೇಲೂರು ಮುಂತಾದವು ಗಂಗರ ಕಾಲದ ಪ್ರಮುಖ ಪಟ್ಟಣಗಳಾದರೆ, ಹೊಸಹೊಳಲು, ಕಿಕ್ಕೇರಿ, ಬಸರಾಳು, ಮೇಲುಕೋಟೆ, ಕನ್ನಂಬಾಡಿ, ತೊಣ್ಣೂರು, ಮದ್ದೂರು, ಮಂಡ್ಯ, ಗೋವಿಂದನಹಳ್ಳಿ, ಅಗ್ರಹಾರ ಬಾಚಹಳ್ಳಿ, ಬೆಳ್ಳೂರು, ನಾಗಮಂಗಲ, ಮರಡೀಪುರ ಮುಂತಾದವು ಚೋಳ ಮತ್ತು ಹೊಯ್ಸಳರ ಕಾಲದಲ್ಲಿ ಪ್ರಮುಖ ಕೇಂದ್ರಗಳಾಗಿದ್ದವು. ವಿಜಯನಗರದರಸರ ಕಾಲದಲ್ಲಿ ಪ್ರಾಂತೀಯ ಕೇಂದ್ರವಾಗಿದ್ದ ಶ್ರೀರಂಗಪಟ್ಟಣ, ಸ್ಥಳೀಯ ಪಾಳೇಗಾರರ ಕೇಂದ್ರಗಳಾಗಿದ್ದ ನಾಗಮಂಗಲ, ಶಿವಸಮುದ್ರಗಳು, ಪ್ರಮುಖ ರಾಜಕೀಯ ಕೇಂದ್ರಗಳಾಗಿದ್ದವು. ಮುಂದೆ ಹೈದರ್, ಟಿಪ್ಪು ಕಾಲಾವಧಿಯಲ್ಲಿ ಶ್ರೀರಂಗಪಟ್ಟಣ ರಾಜಧಾನಿಯಾಯಿತು. ಆ ವೇಳೆಗೆ ಇಲ್ಲಿಯ ಜನಸಂಖ್ಯೆ ಸುಮಾರು ೧.೫ ಲಕ್ಷವಿದ್ದಿತು. ಮರು ವರ್ಷ (೧೮೦೦) ಈ ಸಂಖ್ಯೆ ಸುಮಾರು ೩೨ ಸಾವಿರಕ್ಕೆ ಇಳಿಯಿತು. ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧ ಹಾಗೂ ಪ್ಲೇಗ್‌ನಿಂದ ಜನ ಇತರೆಡೆಗಳಿಗೆ ವಲಸೆ ಹೋದುದೇ ಇದಕ್ಕೆ ಕಾರಣ. ಮುಂದಿನ ವರ್ಷಗಳಲ್ಲಿ ಇನ್ನೂ ಕಡಿಮೆಯಾದ ಜನಸಂಖ್ಯೆ ೧೯೪೧ರ ವೇಳೆಗೆ ೭,೬೭೮ ಆಗಿತ್ತು. ಪುನ: ಜನಸಂಖ್ಯೆ ಹೆಚ್ಚಳಗೊಂಡಿದ್ದು, ೫೦ ವರ್ಷಗಳ ತರುವಾಯ ಮಾತ್ರ. ೧೯೯೧ರಲ್ಲಿ ಶ್ರೀರಂಗಪಟ್ಟಣದ ಜನಸಂಖ್ಯೆ ೨೧,೯೦೫ ಆಗಿತ್ತು. ಈ ಭಾಗಕ್ಕೆ ೧೮೦೦ರಲ್ಲಿ ಭೇಟಿ ನೀಡಿದ್ದ ಫ್ರಾನ್ಸಿಸ್ ಬುಕಾನನ್ನನು ಮದ್ದೂರು, ಮಂಡ್ಯ, ಶ್ರೀರಂಗಪಟ್ಟಣ, ಬೆಳ್ಳೂರು, ನಾಗಮಂಗಲಗಳನ್ನು ತನ್ನ ಪ್ರವಾಸ ಕಥನದಲ್ಲಿ ದಾಖಲಿಸಿದ್ದಾನೆ. ಇಂದಿನ ಮಂಡ್ಯ ಜಿಲ್ಲಾ ಪ್ರದೇಶದಲ್ಲಿ

೧೮೭೧ರ ಜನಗಣತಿ ಪ್ರಕಾರ ಒಟ್ಟು ೮ ಪಟ್ಟಣಗಳಿದ್ದು, ಅವುಗಳನ್ನು ಜನಸಂಖ್ಯೆಯ ಆಧಾರದ ಮೇಲೆ ವರ್ಗೀಕರಿಸಿದಾಗ, ಒಂದು ಪಟ್ಟಣ ೪ನೇ ವರ್ಗಕ್ಕೂ (ಶ್ರೀರಂಗಪಟ್ಟಣ), ಒಂದು ಪಟ್ಟಣ ೫ನೇ ವರ್ಗಕ್ಕೂ (ಮಳವಳ್ಳಿ) ಹಾಗೂ ಉಳಿದ ೬ ಪಟ್ಟಣಗಳು ೬ನೇ ವರ್ಗಕ್ಕೆ (ಮಂಡ್ಯ, ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ, ಮದ್ದೂರು ಹಾಗೂ ಮೇಲುಕೋಟೆ) ಸೇರಿದ್ದವು. ಜಿಲ್ಲೆಯಲ್ಲಿ ೧೮೮೧ ಹಾಗೂ ೧೮೯೧ರಲ್ಲಿ ಪಟ್ಟಣಗಳ ಸಂಖ್ಯೆ ಎಂಟು ಆಗಿದ್ದಿತು. ೧೯೦೧ರ ಜನಗಣತಿ ಪ್ರಕಾರ ಇದ್ದ ಹತ್ತು ಪಟ್ಟಣಗಳಲ್ಲಿ ಐದರಿಂದ ಹತ್ತು ಸಾವಿರದೊಳಗಿನ ಜನಸಂಖ್ಯೆಯು ಎರಡು (ಶ್ರೀರಂಗಪಟ್ಟಣ ಮತ್ತು ಮಳವಳ್ಳಿ) ಪಟ್ಟಣಗಳಿದ್ದು, ಉಳಿದ ಎಂಟು ಪಟ್ಟಣಗಳಲ್ಲಿ ಜನಸಂಖ್ಯೆ ಐದು ಸಾವಿರಕ್ಕಿಂತ ಕಡಿಮೆ ಇದ್ದು, ಅವುಗಳ ಒಟ್ಟು ಜನಸಂಖ್ಯೆ ೪೦,೬೨೩ ಆಗಿದ್ದಿತು. ಜಿಲ್ಲೆಯಲ್ಲಿ ೧೯೧೧ ರಿಂದ ೧೯೨೧ರವರೆಗೆ ೮ ಪಟ್ಟಣಗಳು, ೧೯೩೧ ರಿಂದ ೧೯೪೧ರವರೆಗೆ ೯ ಪಟ್ಟಣಗಳು ಇದ್ದವು. ೧೯೪೧ರ ಜನಗಣತಿ ಪ್ರಕಾರ ಜಿಲ್ಲಾ ಕೇಂದ್ರವಾದ ಮಂಡ್ಯದ ಜನಸಂಖ್ಯೆ ಹತ್ತು ಸಾವಿರ (೧೧,೩೭೪) ದಾಟಿದ್ದರೆ, ಶ್ರೀರಂಗಪಟ್ಟಣದ ಜನಸಂಖ್ಯೆ ೧೯೫೧ರಲ್ಲಿ ೧೦,೪೩೩ಕ್ಕೆ ಏರಿತು. ೧೯೭೧ರ ವೇಳೆಗೆ ಮದ್ದೂರು ೧೨,೦೮೯, ಪಾಂಡವಪುರ ೧೦,೬೫೬, ಶ್ರೀರಂಗಪಟ್ಟಣ ಹಾಗೂ ಮಂಡ್ಯ ಪಟ್ಟಣಗಳ ಜನಸಂಖ್ಯೆಯು ಕ್ರಮವಾಗಿ ೧೪,೧೦೦ ಹಾಗೂ ೭೨,೧೩೨ಕ್ಕೆ ಏರಿತು. ಜಿಲ್ಲಾ ಕೇಂದ್ರವಾದ ಮಂಡ್ಯದ ಜನಸಂಖ್ಯೆ ೧೯೮೧ರ ವೇಳೆಗೆ ೧,೦೦,೨೮೫ ಕ್ಕೇರಿದರೆ, ೨೦,೦೦೦ಕ್ಕೂ ಹೆಚ್ಚು ಜನಸಂಖ್ಯೆವುಳ್ಳ ಒಂದು ಪಟ್ಟಣ (ಮಳವಳ್ಳಿ) ಹಾಗೂ ೧೦,೦೦೦ ಕ್ಕೂ ಅಧಿಕ ಜನಸಂಖ್ಯೆವುಳ್ಳ ಐದು ಪಟ್ಟಣಗಳು (ಮದ್ದೂರು, ಪಾಂಡವಪುರ, ನಾಗಮಂಗಲ, ಕೃಷ್ಣರಾಜಪೇಟೆ ಹಾಗೂ ಶ್ರೀರಂಗಪಟ್ಟಣ) ಹಾಗೂ ಐದು ಸಾವಿರಕ್ಕಿಂತ ಅಧಿಕವಿರುವ ಎರಡು ಪಟ್ಟಣಗಳು (ಬೆಳಕವಾಡಿ ಹಾಗೂ ಬೆಳ್ಳೂರು) ಹಾಗೂ ಐದು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯಿರುವ ಒಂದು ಪಟ್ಟಣ (ಮೇಲುಕೋಟೆ) ಹೀಗೆ ಒಟ್ಟು ೧೦ ಪಟ್ಟಣಗಳು ಜಿಲ್ಲೆಯಲ್ಲಿದ್ದವು. ಮುಂದೆ ೧೯೯೧ರ ವೇಳೆಗೆ ೨೦,೦೦೦ಕ್ಕಿಂತ ಅಧಿಕ ಜನಸಂಖ್ಯೆವುಳ್ಳ ಪಟ್ಟಣಗಳ ಸಂಖ್ಯೆ ಮೂರು, ೧೦,೦೦೦ಕ್ಕಿಂತ ಅಧಿಕವಿರುವ ಪಟ್ಟಣಗಳ ಸಂಖ್ಯೆ ಮೂರು, ಐದು ಸಾವಿರಕ್ಕಿಂತ ಜನಸಂಖ್ಯೆ ಹೆಚ್ಚಿರುವ ಮೂರು ಹಾಗೂ ಐದು ಸಾವಿರಕ್ಕಿಂತ ಕಡಿಮೆ ಇರುವ ಒಂದು ಪಟ್ಟಣವು ಜಿಲ್ಲೆಯಲ್ಲಿದ್ದವು. ವಿವರಗಳಿಗೆ ಕೋಷ್ಟಕ ೮.೨ ಅನ್ನು ನೋಡಿ. ಜಿಲ್ಲೆಯ ಒಟ್ಟು ಜನಸಂಖ್ಯೆಯ ಪೈಕಿ ೧೯೬೧ರಲ್ಲಿ ಶೇ.೧೧.೧ ರಷ್ಟು ಜನರು ನಗರ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಇದು ೧೯೭೧ರಲ್ಲಿ ಶೇ.೧೩.೮ಕ್ಕೆ ಹೆಚ್ಚಳಗೊಂಡಿತು. ೧೯೮೧ರಲ್ಲಿ ಶೇ.೧೫.೫ರಷ್ಟು ಜನರು ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದುದ್ದನ್ನು ಗಮನಿಸಿದಾಗ, ಗ್ರಾಮಾಂತರ ಪ್ರದೇಶದಿಂದ ಪಟ್ಟಣಗಳ ಕಡೆಗೆ ಜನರ ವಲಸೆ ಹೆಚ್ಚಳಗೊಂಡು ಪಟ್ಟಣಗಳ ಬೆಳವಣಿಗೆ ಆಯಿತು ಎಂಬ ಅಂಶ ಗೋಚರವಾಗುತ್ತದೆ. ೧೯೯೧ರ ಜನಗಣತಿಯಂತೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಯ ಶೇ.೧೬.೨ರಷ್ಟು ಜನರು ನಗರ ಪ್ರದೇಶದಲ್ಲೂ, ಶೇ.೮೩.೮ರಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲೂ ವಾಸಿಸುತ್ತಿದ್ದರು. ೧೯೯೧ರ ಜನಗಣತಿಯಂತೆ ಮಂಡ್ಯವು ೧,೨೦,೨೬೫, ಮದ್ದೂರು ೨೨,೧೧೫, ಮಳವಳ್ಳಿ ೨೯,೮೨೨, ಶ್ರೀರಂಗಪಟ್ಟಣ ೨೧,೯೦೫, ಜನಸಂಖ್ಯೆಯನ್ನು ಹೊಂದಿದ್ದವು. ಪಾಂಡವಪುರದಲ್ಲಿ ೧೫,೯೯೮ ಜನಸಂಖ್ಯೆಯಿದ್ದರೆ, ನಾಗಮಂಗಲದಲ್ಲಿ ೧೪,೦೯೬, ಕೆ.ಆರ್.ಪೇಟೆಯಲ್ಲಿ ೧೭,೯೯ ಬೆಳಕವಾಡಿಯಲ್ಲಿ ೭,೨೮೨, ಬೆಳ್ಳೂರಿನಲ್ಲಿ ೬,೧೮೭, ಮೇಲುಕೋಟೆಯಲ್ಲಿ ೩,೨೫೪ ಹಾಗೂ ಕೃಷ್ಣರಾಜಸಾಗರದಲ್ಲಿ ೭,೮೮೧ ಜನಸಂಖ್ಯೆ ಇತ್ತು. ಕರ್ನಾಟಕ ಪುರಸಭೆ ಕಾಯಿದೆಗೆ ೧೯೯೪ರಲ್ಲಿ ತಂದ ತಿದ್ದುಪಡಿ ಪ್ರಯುಕ್ತ, ಜಿಲ್ಲೆಯಲ್ಲಿ ಪಟ್ಟಣಗಳ ಸಂಖ್ಯೆ ಏಳಕ್ಕೆ ಇಳಿದಿದೆ. ಈ ಕಾನೂನಿನ ಪ್ರಕಾರ ಪಟ್ಟಣದ ಮಾನ್ಯತೆ ಪಡೆಯಬೇಕಾದರೆ, ಜನಸಂಖ್ಯೆ ೧೦,೦೦೦ ದಿಂದ ೨೦,೦೦೦ದವರೆಗೆ ಇರಬೇಕಾಗುತ್ತದೆ. ತಾಲೂಕು ಕೇಂದ್ರಗಳಲ್ಲಿ ಜನಸಂಖ್ಯೆ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಇದ್ದರೂ, ಅದನ್ನು ಪಟ್ಟಣ ಪಂಚಾಯ್ತಿ ಎಂದು ಪರಿಗಣಿಸಲಾಗುತ್ತದೆ. ಜನಸಂಖ್ಯೆಯು ೨೦,೦೦೦ದಿಂದ ೪೦,೦೦೦ದವರೆಗೆ ಇದ್ದರೆ, ಅದನ್ನು ಪುರಸಭೆ ಎಂದೂ, ಜನಸಂಖ್ಯೆ ೪೦,೦೦೦ಕ್ಕಿಂತ

ಹೆಚ್ಚು ಇದ್ದರೆ ನಗರಸಭೆ ಎಂದೂ ಪರಿಗಣಿಸಲಾಗುತ್ತದೆ. ೧೯೯೪ರಲ್ಲಿದ್ದ ೧೧ ಪಟ್ಟಣಗಳಲ್ಲಿ ಪಾಂಡವಪುರ, ಕೆ.ಆರ್.ಪೇಟೆ ಮತ್ತು ನಾಗಮಂಗಲಗಳು ಪಟ್ಟಣ ಪಂಚಾಯ್ತಿಗಳಾಗಿಯೂ, ಮದ್ದೂರು, ಶ್ರೀರಂಗಪಟ್ಟಣ ಮತ್ತು ಮಳವಳ್ಳಿಗಳು ಪುರಸಭೆಗಳಾಗಿಯೂ, ಮಂಡ್ಯವನ್ನು ನಗರಸಭೆ ಎಂದು ಪರಿಗಣಿಸಲಾಗಿತ್ತು. ಅಧಿಸೂಚಿತ ಪ್ರದೇಶವಾಗಿದ್ದ ಕೆ.ಆರ್.ಎಸ್. ಹಾಗೂ ಇನ್ನುಳಿದ ಬೆಳಕವಾಡಿ, ಬೆಳ್ಳೂರು, ಮತ್ತು ಮೇಲುಕೋಟೆಗಳ ಜನಸಂಖ್ಯೆ ೧೦ ಸಾವಿರಕ್ಕಿಂತ ಕಡಿಮೆ ಇರುವುದರಿಂದ ಇಂದು ಅವು ಪಟ್ಟಣದ ಮಾನ್ಯತೆಯನ್ನು ಕಳೆದುಕೊಂಡು ಗ್ರಾಮಪಂಚಾಯ್ತಿಗಳಾಗಿವೆ. ವಿವರಗಳಿಗೆ ಕೋಷ್ಟಕ ೮.೨ ಅನ್ನು ಮುಂದಿನ ಪುಟದಲ್ಲಿ ನೋಡಿ.

**ಕೋಷ್ಟಕ ೮.೩ ಜನಸಂಖ್ಯಾ ಆಧಾರಿತ ಪಟ್ಟಣವರ್ಗಗಳ ಪಟ್ಟಿ (೧೯೯೧ ರ ಜನಗಣತಿಯಂತೆ)**

| ವರ್ಗ - I<br>೧,೦೦,೦೦೦<br>ಕ್ಕಿಂತ ಹೆಚ್ಚು | ವರ್ಗ– II<br>೫೦,೦೦೦–<br>೯೯,೯೯೯ | ವರ್ಗ – III<br>೨೦,೦೦೦–<br>೪೯,೯೯೯ | ವರ್ಗ – IV<br>೧೦,೦೦೦–<br>೧೯,೯೯೯ | ವರ್ಗ – V<br>೫,೦೦೦–<br>೯,೯೯೯ | ವರ್ಗ – VI<br>೫೦೦೦ಕ್ಕಿಂತ<br>ಕಡಿಮೆ |
|---|---|---|---|---|---|
| ಮಂಡ್ಯ<br>೧,೨೦,೨೬೫ | ಇಲ್ಲ | ಮಳವಳ್ಳಿ–<br>೨೯,೮೨೨<br>ಮದ್ದೂರು<br>–೨೨,೧೧೫<br>ಶ್ರೀರಂಗಪಟ್ಟಣ<br>–೨೧,೯೦೫ | ಕೆ.ಆರ್.ಪೇಟೆ–<br>೧೭,೯೯೯<br>ಪಾಂಡವಪುರ–<br>೧೫,೯೯೮<br>ನಾಗಮಂಗಲ–<br>೧೪,೦೯೬ | ಬೆಳಕವಾಡಿ<br>–೭,೨೮೨<br>ಬೆಳ್ಳೂರು–೬,೧೮೭<br>ಕೃಷ್ಣರಾಜಸಾಗರ–<br>೭,೮೮೧ | ಮೇಲುಕೋಟೆ–<br>೩,೨೫೪ |
| ೧,೨೦,೨೬೫<br>(೪೫.೦೮) | ಇಲ್ಲ | ೭೩,೮೪೨<br>(೨೭.೬೮) | ೪೮,೦೯೩<br>(೧೮.೦೨) | ೨೧,೩೫೦<br>(೮.೦೦) | ೩,೨೫೪<br>(೧.೨೨) |

ಸೂಚನೆ : ಕಂಸದಲ್ಲಿ ನೀಡಿರುವ ಅಂಕಿಗಳು ಜಿಲ್ಲೆಯ ಒಟ್ಟು ನಗರ ಜನಸಂಖ್ಯೆಯ ಶೇಕಡವಾರು ಪ್ರಮಾಣವಾಗಿದೆ.

ನಗರೀಕರಣ ಕ್ರಿಯೆಯಲ್ಲಿ ದುಡಿಯುವ ವರ್ಗದ ಪ್ರಭಾವವು ಗಣನೀಯವಾಗಿರುತ್ತದೆ. ಪ್ರಕೃತಿ ವಿಕೋಪ ಮುಂತಾದ ನಾನಾ ಕಾರಣಗಳಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬದುಕು ದುಸ್ಸಾಧ್ಯವಾಗಿ ಜೀವನ ಮಾರ್ಗ ಅರಸಿ ಸಮೀಪದ ಪಟ್ಟಣಗಳಿಗೆ ವಲಸೆ ಹೋದಾಗ ಪಟ್ಟಣಗಳ ಜನಸಂಖ್ಯೆ ಸಹಜವಾಗಿ ಹೆಚ್ಚುತ್ತದೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ೧೯೯೧ರ ಜನಗಣತಿಯಂತೆ ಜಿಲ್ಲೆಯಲ್ಲಿರುವ ಪಟ್ಟಣ ಮತ್ತು ನಗರಗಳ ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ಕೆಲಸಗಾರರ ಸಂಖ್ಯೆ ಶೇ.೩೨.೨೩ ಇದ್ದರೆ, ಅರೆಕಾಲಿಕ ಕೆಲಸಗಾರರ ಸಂಖ್ಯೆ ಕೇವಲ ೦.೭೪ರಷ್ಟು ಇತ್ತು. ಒಟ್ಟು ಜನಸಂಖ್ಯೆಯಲ್ಲಿ ಒಟ್ಟು ಕೆಲಸಗಾರರ ಸಂಖ್ಯೆ ಶೇ.೩೨.೯೭ರಷ್ಟಿದ್ದು, ಕೆಲಸಗಾರರಲ್ಲದವರ ಪ್ರಮಾಣ ಶೇ.೬೭.೦೩ರಷ್ಟಿತ್ತು. ವಿವರಗಳಿಗೆ ಕೋಷ್ಟಕ ೮.೪ ಅನ್ನು ನೋಡಿ.

**ಕೋಷ್ಟಕ ೮.೪ ಜಿಲ್ಲೆಯ ನಗರ ಪಟ್ಟಣ ಪ್ರದೇಶಗಳಲ್ಲಿದ್ದ ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ಕೆಲಸಗಾರರು**

## ಕೋಷ್ಟಕ ೮.೨ ಜಿಲ್ಲೆಯಲ್ಲಿ ೧೮೭೧ ರಿಂದ ೧೯೯೧ರವರೆಗಿನ ಪಟ್ಟಣಗಳು ಮತ್ತು ಜನಸಂಖ್ಯೆಯ ವಿವರ (ವರ್ಗಗಳೊಂದಿಗೆ)

| ವರ್ಷಗಳು | ಕೃಷ್ಣರಾಜಪೇಟೆ | ನಾಗಮಂಗಲ | ಪಾಂಡವಪುರ | ಮಂಡ್ಯ | ಮದ್ದೂರು | ಮಳವಳ್ಳಿ | ಶ್ರೀರಂಗಪಟ್ಟಣ | ಮೇಲುಕೋಟೆ | ಬೆಳಕವಾಡಿ | ಬೆಳ್ಳೂರು | ಕೃಷ್ಣರಾಜಸಾಗರ |
|---|---|---|---|---|---|---|---|---|---|---|---|
| ೧೮೭೧ | ೧,೬೧೬ (VI) | ೨,೪೯೪ (VI) | ೪,೩೭೩ (VI) | ೩,೨೪೧ (VI) | ೨,೨೮೮ (VI) | ೫,೧೧೪ (V) | ೧೦,೫೯೪ (IV) | ೨,೮೯೧ (VI) | ೨,೧೩೧ (VI) | ೧,೫೮೧ (VI) | - |
| ೧೮೮೧ | ೧,೪೦೧ (VI) | ೨,೩೯೭ (VI) | ೩,೩೨೭ (VI) | ೩,೭೭೦ (VI) | ೨,೧೧೭ (VI) | ೫,೦೭೮ (V) | ೧೧,೭೩೪ (IV) | ೨,೩೦೨ (VI) | ೨,೫೩೭ (VI) | ೧,೧೧೪ (VI) | - |
| ೧೮೯೧ | ೧,೬೬೨ (VI) | ೨,೯೨೮ (VI) | ೨,೪೭೦ (VI) | ೪,೧೦೦ (VI) | ೨,೩೯೨ (VI) | ೬,೩೦೮ (V) | ೧೨,೫೫೩ (IV) | ೨,೭೮೯ (VI) | ೨,೭೯೫ (VI) | ೧,೪೮೪ (VI) | - |
| ೧೯೦೧ | ೨,೧೩೧ (VI) | ೩,೫೧೬ (VI) | ೧,೯೮೩ (VI) | ೪,೪೯೬ (VI) | ೨,೫೯೭ (VI) | ೭,೨೭೦ (V) | ೮,೫೮೪ (V) | ೩,೧೨೯ (VI) | ೫,೧೮೩ (V) | ೧,೭೩೪ (VI) | - |
| ೧೯೧೧ | ೨,೩೩೭ (VI) | ೩,೬೩೩ (VI) | ೧,೯೨೨ (VI) | ೪,೨೫೫ (VI) | ೨,೨೭೯ (VI) | ೫,೪೬೧ (V) | ೭,೪೫೭ (V) | ೨,೫೩೫ (VI) | ೪,೦೬೦ (VI) | ೧,೬೭೬ (VI) | - |
| ೧೯೨೧ | ೩,೨೨೬ (VI) | ೩,೪೭೪ (VI) | ೨,೪೦೭ (VI) | ೪,೮೮೭ (VI) | ೨,೮೧೬ (VI) | ೭,೪೦೦ (V) | ೭,೨೧೭ (V) | ೬,೩೦೭ (V) | ೫,೮೧೭ (V) | ೧,೭೨೩ (VI) | - |
| ೧೯೩೧ | ೨,೭೫೦ (VI) | ೩,೭೮೦ (VI) | ೩,೦೧೬ (VI) | ೫,೯೫೮ (V) | ೩,೦೯೩ (VI) | ೮,೩೪೮ (V) | ೬,೩೦೦ (V) | ೨,೭೩೩ (vi) | ೪,೦೦೧ (VI) | ೧,೯೩೭ (VI) | - |
| ೧೯೪೧ | ೩,೧೨೭ (VI) | ೪,೨೫೮ (VI) | ೪,೨೭೧ (VI) | ೧೧,೩೭೪ (IV) | ೩,೮೩೮ (VI) | ೯,೦೫೫ (V) | ೭,೬೭೮ (V) | ೨,೭೮೭ (vi) | ೪,೨೫೦ (VI) | ೨,೩೯೧ (VI) | - |
| ೧೯೫೧ | ೬,೯೭೨ (V) | ೫,೪೯೨ (V) | ೫,೭೫೦ (V) | ೨೧,೧೫೮ (II) | ೫,೩೩೧ (V) | ೧೨,೦೬೩ (IV) | ೧೦,೪೩೩ (IV) | ೨,೮೪೬ (vi) | ೪,೬೦೨ (VI) | ೩,೧೨೯ (VI) | - |
| ೧೯೬೧ | ೮,೩೩೧ (V) | ೬,೫೨೪ (V) | ೭,೫೦೮ (V) | ೩೩,೩೪೭ (III) | ೮,೧೨೦ (V) | ೧೩,೫೬೧ (IV) | ೧೧,೪೨೩ (IV) | ೨,೭೮೧ (vi) | ೪,೮೭೫ (VI) | ೩,೬೦೨ (VI) | - |
| ೧೯೭೧ | ೯,೬೩೧ (V) | ೮,೫೮೩ (V) | ೧೦,೬೫೬ (IV) | ೭೨,೧೩೨ (II) | ೧೨,೦೮೯ (IV) | ೧೯,೦೦೭ (IV) | ೧೪,೧೦೦ (IV) | ೨,೭೩೦ (vi) | ೫,೫೩೭ (V) | ೪,೩೨೩ (VI) | |
| ೧೯೮೧ | ೧೨,೮೦೦ (IV) | ೧೧,೦೮೪ (IV) | ೧೪,೧೬೪ (IV) | ೧,೦೦,೨೮೫ (I) | ೧೭,೪೦೨ (IV) | ೨೫,೧೧೪ (II) | ೧೮,೧೩೭ (IV) | ೨,೯೫೮ (vi) | ೬,೩೯೬ (V) | ೫,೪೩೮ (V) | - |
| ೧೯೯೧ | ೧೭,೯೯೯ (IV) | ೧೪,೦೯೬ (IV) | ೧೫,೯೯೮ (IV) | ೧,೨೦,೨೬೫ (I) | ೨೨,,೧೧೫ (II) | ೨೯,೮೨೨ (II) | ೨೧,೯೦೫ (II) | ೩,೨೫೪ (vi) | ೭,೨೮೨ (V) | ೬,೧೮೭ (V) | ೭,೮೮೧ (V) |
| ೨೦೦೧ (ಪಿ) | ೨೨,೪೭೩ | ೧೬,೦೫೦ | ೧೮,೨೩೬ | ೧,೩೧,೨೧೧ | ೨೬,೪೫೬ | ೩೫,೮೦೦ | ೨೩,೪೪೮ | – | – | – | ೮,೫೧೦ |

ಆಧಾರ : ಜನರಲ್ ಪಾಪ್ಯುಲೇಷನ್ ಟೇಬಲ್ ೧೯೯೧ರ ಜನಗಣತಿ ಭಾಗ II A pp.೫೨೩

ಸೂಚನೆ : ಪಿ– ಪ್ರಾವಿಷನಲ್

ಜನಸಂಖ್ಯಾ ಆಧಾರಿತ ಪಟ್ಟಣ ವರ್ಗಗಳು: ವರ್ಗ I = ೧,೦೦,೦೦೦ ಕ್ಕಿಂತ ಹೆಚ್ಚು, ವರ್ಗ II = ೫೦,೦೦೦ ದಿಂದ ೯೯,೯೯೯, ವರ್ಗ III = ೨೦,೦೦೦ ದಿಂದ ೪೯,೯೯೯, ವರ್ಗ IV = ೧೦,೦೦೦ ದಿಂದ ೧೯,೯೯೯, ವರ್ಗ V = ೫,೦೦೦ ದಿಂದ ೯,೯೯೯, ವರ್ಗ VI = ೫,೦೦೦ ಕ್ಕಿಂತ ಕಡಿಮೆ, ಪಟ್ಟಣದ ವರ್ಗಗಳನ್ನು ರೋಮನ್ ಅಂಕಿಗಳಲ್ಲಿ ನೀಡಲಾಗಿದೆ.

**ಅರೆಕೆಲಸಗಾರರು ಮತ್ತು ಕೆಲಸಗಾರರಲ್ಲದವರ ಶೇಕಡವಾರು ವಿವರ (೧೯೯೧ರ ಜನಗಣತಿಯಂತೆ)**

| ನಗರ ಮತ್ತು ಪಟ್ಟಣಗಳ ಹೆಸರು | ಒಟ್ಟು ಜನಸಂಖ್ಯೆಯಲ್ಲಿ | | | ಮುಖ್ಯ ಕೆಲಸಗಾರರು | | | ಅರೆಕಾಲಿಕ ಕೆಲಸಗಾರರು | | | ಕೆಲಸಗಾರರಲ್ಲದವರು | | |
|---|---|---|---|---|---|---|---|---|---|---|---|---|
| | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟು | ಪು | ಮ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ | ೧೨ | ೧೩ |
| ಬೆಳಕವಾಡಿ ಗ್ರಾ.ಪಂ. | ೩೯.೫೪ | ೫೭.೧೧ | ೨೧.೮೧ | ೩೮.೦೮ | ೫೬.೯೨ | ೧೯.೦೮ | ೧.೪೬ | ೦.೧೯ | ೨.೭೩ | ೬೦.೪೬ | ೪೨.೮೯ | ೭೮.೧೯ |
| ಬೆಳ್ಳೂರು ಗ್ರಾ.ಪಂ. | ೩೬.೪೩ | ೫೬.೭೮ | ೧೪.೦೮ | ೩೫.೮೫ | ೫೬.೭೫ | ೧೨.೮೯ | ೦.೫೮ | ೦.೦೩ | ೧.೧೯ | ೬೩.೫೭ | ೪೩.೨೨ | ೮೫.೯೨ |
| ಕೆ.ಆರ್.ಪೇಟೆ ಪಟ್ಟಣ ಪಂಚಾಯ್ತಿ | ೩೪.೦೦ | ೫೧.೭೬ | ೧೪.೪೯ | ೩೧.೫೬ | ೫೧.೬೪ | ೯.೫೧ | ೨.೪೪ | ೦.೧೨ | ೪.೯೮ | ೬೬.೦೦ | ೪೮.೨೪ | ೮೫.೨೧ |
| ಕೃಷ್ಣರಾಜಸಾಗರ ಗ್ರಾ.ಪಂ. | ೩೧.೧೯ | ೪೮.೪೫ | ೧೨.೮೩ | ೩೧.೦೮ | ೪೮.೩೫ | ೧೨.೭೦ | ೦.೧೧ | ೦.೧೦ | ೦.೧೩ | ೬೮.೮೧ | ೫೧.೫೫ | ೮೭.೧೭ |
| ಮದ್ದೂರು ಪುರಸಭೆ | ೩೬.೮೬ | ೫೪.೪೮ | ೧೮.೩೫ | ೩೬.೬೮ | ೫೪.೪೦ | ೧೮.೦೭ | ೦.೧೮ | ೦.೦೮ | ೦.೨೮ | ೬೩.೧೪ | ೪೫.೫೨ | ೮೧.೬೫ |
| ಮಳವಳ್ಳಿ (ಪುರಸಭೆ) | ೩೧.೪೯ | ೪೯.೬೫ | ೧೨.೨೬ | ೨೯.೯೮ | ೪೮.೪೪ | ೧೦.೪೨ | ೧.೫೧ | ೧.೨೧ | ೧.೮೪ | ೬೮.೫೧ | ೫೦.೩೫ | ೮೭.೭೪ |
| ಮಂಡ್ಯ (ನಗರಸಭೆ) | ೩೦.೭೯ | ೪೯.೧೦ | ೧೦.೯೬ | ೩೦.೫೪ | ೪೮.೯೩ | ೧೦.೬೨ | ೦.೨೫ | ೦.೧೭ | ೦.೩೪ | ೬೯.೨೧ | ೫೦.೯೦ | ೮೯.೦೪ |
| ಮೇಲುಕೋಟೆ (ಗ್ರಾ.ಪಂ.) | ೩೦.೩೩ | ೪೮.೮೮ | ೧೧.೧೩ | ೨೯.೩೨ | ೪೮.೬೪ | ೯.೩೨ | ೧.೦೧ | ೦.೨೪ | ೧.೮೧ | ೬೯.೬೭ | ೫೧.೧೨ | ೮೮.೮೭ |
| ನಾಗಮಂಗಲ (ಪಟ್ಟಣ ಪಂಚಾಯ್ತಿ) | ೩೦.೮೪ | ೫೦.೧೨ | ೯.೯೫ | ೨೯.೪೦ | ೪೯.೧೨ | ೮.೦೩ | ೧.೪೪ | ೧.೦೦ | ೧.೯೨ | ೬೯.೧೬ | ೪೯.೮೮ | ೯೦.೦೫ |
| ಪಾಂಡವಪುರ (ಪಟ್ಟಣ ಪಂಚಾಯ್ತಿ) | ೩೫.೮೬ | ೫೪.೬೪ | ೧೬.೧೮ | ೩೫.೪೪ | ೫೪.೫೮ | ೧೫.೩೭ | ೦.೪೨ | ೦.೦೬ | ೦.೮೧ | ೬೪.೧೪ | ೪೫.೩೬ | ೮೩.೮೩ |
| ಶ್ರೀರಂಗಪಟ್ಟಣ (ಪುರಸಭೆ) | ೩೯.೩೪ | ೫೪.೮೩ | ೨೩.೩೬ | ೩೭.೯೫ | ೫೪.೬೪ | ೨೦.೭೪ | ೧.೩೯ | ೦.೧೯ | ೨.೬೨ | ೬೦.೬೬ | ೪೫.೧೭ | ೭೬.೬೪ |
| ಒಟ್ಟು | ೩೨.೯೭ | ೫೧.೦೦ | ೧೩.೬೯ | ೩೨.೨೩ | ೫೦.೬೯ | ೧೨.೪೮ | ೦.೭೪ | ೦.೩೧ | ೧.೨೧ | ೬೭.೦೩ | ೪೯.೦೦ | ೮೬.೩೧ |

## ಆದಾಯ

ಜಿಲ್ಲಾ ಆದಾಯವೆಂದು ಸಾಮಾನ್ಯವಾಗಿ ಕರೆಯಲಾಗುವ ಜಿಲ್ಲಾ ನಿವ್ವಳ ಆಂತರಿಕ ಉತ್ಪನ್ನವು, ಜಿಲ್ಲೆಯ ಆರ್ಥಿಕ ಅಭಿವೃದ್ಧಿ ಗುಣಮಟ್ಟವನ್ನು ಅಳತೆ ಮಾಡುವ ಮುಖ್ಯ ಸೂಚಿಯಾಗಿದೆ. ಆಯಾ ವರ್ಷದಲ್ಲಿ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಇದರಿಂದ ತಿಳಿಯಬಹುದು. ಪ್ರಸಕ್ತ ಬೆಲೆಗಳಲ್ಲಿ ಜಿಲ್ಲೆಯ ನಿವ್ವಳ ಆಂತರಿಕ ಉತ್ಪನ್ನದ ಅಂದಾಜುಗಳು, ಚಾಲ್ತಿಯಲ್ಲಿರುವ ಬೆಲೆಗಳ ಮೇರೆಗೆ ಹುಟ್ಟುವಳಿ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. ಸ್ಥಿರಬೆಲೆಗಳು ಈ ಅಂದಾಜು ಬೆಲೆಗಳ ವ್ಯತ್ಯಾಸದ ಪರಿಣಾಮವನ್ನು ದೂರವಾಗಿಸಿ, ನಿಜವಾದ ಆರ್ಥಿಕ ಬೆಳವಣಿಗೆಯನ್ನು ಪ್ರತಿಬಿಂಬಿಸುವಲ್ಲಿ ನೆರವಾಗುತ್ತವೆ. ತಲವಾರು ನಿವ್ವಳ ಆಂತರಿಕ ಉತ್ಪನ್ನವು ಜಿಲ್ಲೆಯ ಆರ್ಥಿಕ ಬೆಳವಣಿಗೆಯನ್ನು ಗುರುತಿಸುವ ಇನ್ನೊಂದು ಮಾಪನವಾಗಿದ್ದು, ಪ್ರಾದೇಶಿಕ ಅಸಮತೋಲನವನ್ನು ಅಳೆಯಲು ಸಹಕರಿಸುತ್ತದೆ. ಜಿಲ್ಲೆಯ ಆದಾಯವು ೧೯೬೦-೬೧ರ ಚಾಲ್ತಿ ಬೆಲೆಗಳಲ್ಲಿ ೨,೩೦೨ ಲಕ್ಷ ರೂ.ಗಳಷ್ಟಿದ್ದು, ರಾಜ್ಯದ ಆದಾಯದ ಶೇ.೩.೩೦ರಷ್ಟಾಗಿತ್ತು. ಇದು ೧೯೭೦-೭೧ರಲ್ಲಿ ರೂ.೬,೯೩೦ ಲಕ್ಷಗಳಿಗೆ ಹೆಚ್ಚಳಗೊಂಡಿದ್ದು, ರಾಜ್ಯದ ಆದಾಯದ ಶೇ.೩.೪೯ರಷ್ಟಾಗಿತ್ತು.

ಮೂಲ ಉದ್ಯಮಗಳ ಪ್ರಕಾರ ಜಿಲ್ಲೆಯ ನಿವ್ವಳ ಆದಾಯ ಚಾಲ್ತಿ ಬೆಲೆಗಳಲ್ಲಿ ೧೯೭೫-೭೬ರಲ್ಲಿ ಕೃಷಿಯಿಂದ ೮,೬೨೧ ಲಕ್ಷ ರೂ.ಗಳು; ಅರಣ್ಯ ಮತ್ತು ಮರದ ದಿಮ್ಮಿಗಳಿಂದ ೪೩ ಲಕ್ಷ ರೂ.ಗಳು; ಮೀನುಗಾರಿಕೆಯಿಂದ ೧೦೪ ಲಕ್ಷ ರೂ.ಗಳು; ಗಣಿಗಾರಿಕೆಗಳಿಂದ ೦೨ ಲಕ್ಷ ರೂ.ಗಳು; ನೋಂದಾಯಿತ ಮತ್ತು ನೋಂದಾಯಿತವಲ್ಲದ ತಯಾರಿಕಾ ಘಟಕಗಳಿಂದ ೫೬೭ ಲಕ್ಷ ರೂ.ಗಳು; ನಿರ್ಮಾಣದಿಂದ ೪೦೨ ಲಕ್ಷ ರೂ.ಗಳು; ವಿದ್ಯುತ್, ಅನಿಲ ಮತ್ತು ನೀರು ಸರಬರಾಜು ಬಾಬ್ತು ೨೭೮ ಲಕ್ಷ ರೂ.ಗಳು; ರೈಲ್ವೆಯಿಂದ ೫೬ ಲಕ್ಷ ರೂ.ಗಳು; ಸಾರಿಗೆ ಮತ್ತು ಸಂಗ್ರಹಣೆಯಿಂದ ೧೪೦ ಲಕ್ಷರೂ.ಗಳು; ಸಂಪರ್ಕದಿಂದ ೩೮ ಲಕ್ಷ ರೂ.ಗಳು; ವ್ಯಾಪಾರ, ಹೋಟೆಲ್ ಮತ್ತು ಉಪಾಹಾರ ಮಂದಿರಗಳಿಂದ ೭೯೧ ಲಕ್ಷ ರೂ.ಗಳು; ಬ್ಯಾಂಕ್ ಮತ್ತು ವಿಮೆ ೧೨೨ ಲಕ್ಷ ರೂ.ಗಳು; ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ ಹಾಗೂ ವ್ಯವಹಾರ ಸೇವೆಗಳಿಂದ ೨೭೫ ಲಕ್ಷ ರೂ.ಗಳು; ಸಾರ್ವಜನಿಕ ಆಡಳಿತದಿಂದ ೩೦೪ ಲಕ್ಷ ರೂ.ಗಳು ಮತ್ತು ಇತರೆ ಸೇವೆಗಳಿಂದ ೫೯೨ ಲಕ್ಷ ರೂ.ಗಳು; ಸೇರಿ ಎಲ್ಲಾ ಮೂಲಗಳಿಂದ ಒಟ್ಟು ೧೨,೩೩೫ ಲಕ್ಷ ರೂ.ಗಳು ಸಂಗ್ರಹವಾಗಿರುವುದು. ಇದು ೧೯೭೯-೮೦ರಲ್ಲಿ ೧೬,೨೬೪ ಲಕ್ಷ ರೂ. ಗಳಿಗೆ ಏರಿತು.

೧೯೮೦-೮೧ರಲ್ಲಿ ಚಾಲ್ತಿ ಬೆಲೆಗಳಲ್ಲಿ ೨೨,೩೫೪ ಲಕ್ಷ ರೂ.ಗಳಷ್ಟಿದ್ದ ಜಿಲ್ಲಾ ಆದಾಯವು, ೧೯೯೦-೯೧ರಲ್ಲಿ ೬೪,೮೪೯ ಲಕ್ಷ ರೂ.ಗಳಿಗೇರಿತು. ಜಿಲ್ಲೆಯ ಆದಾಯವನ್ನು ರಾಜ್ಯದ ಆದಾಯದ ಜೊತೆ ತುಲನೆ ಮಾಡಿ ನೋಡಿದಾಗ ಜಿಲ್ಲೆಯು ೧೯೮೦-೮೧ರಲ್ಲಿ ೧೩ನೇ ಸ್ಥಾನವನ್ನು ಹೊಂದಿದ್ದು, ೧೯೯೦-೯೧ರಲ್ಲಿ ಅದರ ಸ್ಥಾನವು ೧೬ಕ್ಕೆ ಇಳಿಯಿತು. ಜಿಲ್ಲೆಯ ಆದಾಯದ ಪ್ರಮಾಣ ರಾಜ್ಯದ ಆದಾಯದ ಪ್ರಮಾಣಕ್ಕನುಗುಣವಾಗಿ ಹೆಚ್ಚಳಗೊಳ್ಳದಿರುವುದೇ ಈ ಸ್ಥಾನ ಕುಸಿತಕ್ಕೆ ಕಾರಣ. ೧೯೯೪-೯೫ರಲ್ಲಿ ಜಿಲ್ಲಾ ಆದಾಯ ೧,೩೩,೪೬೪ ಲಕ್ಷ ರೂ.ಗಳಷ್ಟಿದ್ದು, ರಾಜ್ಯದಲ್ಲಿ ಇದರ ಸ್ಥಾನ ೧೩ಕ್ಕೆ ಏರಿತ್ತಾದರೂ, ಇದು ೧೯೯೫-೯೬ರಲ್ಲಿ ೧,೩೪,೧೧೧ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡರೂ, ಅದರ ಸ್ಥಾನವು ಮತ್ತೇ ೧೬ಕ್ಕೆ ತಳ್ಳಲ್ಪಟ್ಟಿತು. ೧೯೯೬-೯೭ರಲ್ಲಿ ಜಿಲ್ಲೆಯು ೧,೩೨,೧೦೬ ಲಕ್ಷ ರೂ.ಗಳನ್ನು ಗಳಿಸಿದ್ದು, ಇದನ್ನು ಹಿಂದಿನ ಸಾಲಿನ ಜಿಲ್ಲಾ ಆದಾಯಕ್ಕೆ ಹೋಲಿಸಿದಾಗ ೨೦೦೫ ಲಕ್ಷ ರೂ.ಗಳಷ್ಟು ಕಡಿಮೆ ಇದ್ದು ಅದರ ಸ್ಥಾನವು ರಾಜ್ಯದಲ್ಲಿ ೧೯ನೇ ಸ್ಥಾನಕ್ಕೆ ಕುಸಿದಿರುವ ಅಂಶ ವಿಚಾರಾರ್ಹವಾಗಿದೆ. ಆದರೆ ಮತ್ತೆ ೧೯೯೯-೦೦ರದಲ್ಲಿ ಜಿಲ್ಲಾದಾಯ ೨,೪೩,೪೯೭ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡು ೧೨ನೇ ಸ್ಥಾನ ಪಡೆದುಕೊಂಡಿದೆ. ಜಿಲ್ಲಾ ಆದಾಯ ೧೯೮೦-೮೧ರ ಸ್ಥಿರಬೆಲೆಗಳಲ್ಲಿ ೨೨,೩೫೪ ಲಕ್ಷ ರೂ.ಗಳಾಗಿದ್ದು, ೧೯೯೦-೯೧ರಲ್ಲಿ ೩೦,೩೮೧ ಲಕ್ಷ ರೂ.ಗಳಿಗೆ ಹೆಚ್ಚಳಗೊಂಡು,

ರಾಜ್ಯದಲ್ಲಿ ಜಿಲ್ಲೆಗೆ ೧೪ನೆಯ ಸ್ಥಾನ ದೊರಕಿಸಿಕೊಟ್ಟಿತು. ೧೯೯೪–೯೫ರಲ್ಲಿ ಅದು ೪೩,೩೪೭ ಲಕ್ಷ ರೂ.ಗಳಷ್ಟಕ್ಕೆ ಹೆಚ್ಚಳ ಪಡೆದು ೧೦ನೇ ಸ್ಥಾನ ಪಡೆದುಕೊಂಡಿತು. ೧೯೯೯–೦೦ದಲ್ಲಿ ಜಿಲ್ಲಾ ಆದಾಯವು ೧,೭೪,೦೯೨ ಲಕ್ಷ ರೂ.ಗಳಿಗೆ ಹೆಚ್ಚಿದ್ದರೂ ರಾಜ್ಯದಲ್ಲಿ ಜಿಲ್ಲೆಯ ಸ್ಥಾನ ೧೧ಕ್ಕೆ ತಳ್ಳಲ್ಪಟ್ಟಿತು.

ಪ್ರಾಥಮಿಕ ವಲಯದಿಂದ ೧೯೮೦–೮೧ರಲ್ಲಿ ಜಿಲ್ಲಾ ಆದಾಯಕ್ಕೆ ಹೆಚ್ಚಿನ ಕೊಡುಗೆಯಿದ್ದರೂ, ಕ್ರಮೇಣ ಅದು ಕಡಿಮೆಯಾಗುತ್ತಾ ಬಂದಿರುವುದು ಉಲ್ಲೇಖಾರ್ಹ. ಪ್ರಾಥಮಿಕ ವಲಯದಿಂದ ೧೯೮೦–೮೧ರಲ್ಲಿ ೧೪,೫೭೫ ಲಕ್ಷ ರೂ.ಗಳು; ೧೯೯೦–೯೧ರಲ್ಲಿ ೩೫,೨೫೮ ಲಕ್ಷ ರೂ.ಗಳು ಮತ್ತು ೧೯೯೪–೯೫ರಲ್ಲಿ ೭೫,೨೩೦ಲಕ್ಷ ರೂ.ಗಳು ಸಂದಿದೆ. ಆದರೆ ೧೯೯೫–೯೬ರಿಂದ ಪ್ರಾಥಮಿಕ ವಲಯದಿಂದ ಜಿಲ್ಲಾದಾಯಕ್ಕೆ ಬರುವ ಕೊಡುಗೆ ಕಡಿಮೆಯಾಗಿದ್ದು, ೧೯೯೫–೯೬ರಲ್ಲಿ ಇದು ೭೦,೯೯೩ ಲಕ್ಷ ರೂ.ಗಳಿಗೂ, ೧೯೯೬–೯೭ರಲ್ಲಿ ೬೦,೩೨೯ ಲಕ್ಷ ರೂ.ಗಳಿಗೂ ಕುಸಿದಿರುವುದನ್ನು ಗಮನಿಸಿದಾಗ, ಜಿಲ್ಲೆಯಲ್ಲಿ ಕೃಷಿಯ ಪ್ರಾಬಲ್ಯ ಕಡಿಮೆಯಾಗುತ್ತಿರುವುದು ಸ್ಪಷ್ಟವಾಗುತ್ತದೆ. ಆದರೆ ಜಿಲ್ಲಾದಾಯಕ್ಕೆ ದ್ವಿತೀಯವಲಯದ ಕೊಡುಗೆ ೧೯೮೦–೮೧ರಲ್ಲಿ ಕಡಿಮೆಯಿದ್ದರೂ ನಂತರ ವೃದ್ಧಿಯಾಗಿರುವುದನ್ನು ಕಾಣಬಹುದು. ೧೯೮೦–೮೧ರಲ್ಲಿ ದ್ವಿತೀಯವಲಯದ ಕೊಡುಗೆ ೨,೭೯೬ ಲಕ್ಷ ರೂ.ಗಳಿದ್ದರೆ, ೧೯೯೦–೯೧ರಲ್ಲಿ ಇದು ೯,೩೩೪ ಲಕ್ಷ ರೂ.ಗಳಿಗೂ, ೧೯೯೪–೯೫ರಲ್ಲಿ ೧೫,೮೧೧ ಲಕ್ಷ ರೂ.ಗಳಿಗೂ ಮತ್ತು ೧೯೯೯–೦೦ರಲ್ಲಿ ೩೩,೯೭೦ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿರುವುದು ಗಮನಾರ್ಹವಾಗಿದೆ. ಜಿಲ್ಲಾ ಆದಾಯಕ್ಕೆ ತೃತೀಯ ವಲಯದ ಕೊಡುಗೆಯು ೧೯೮೦–೮೧ರಲ್ಲಿ ೫,೪೮೩ ಲಕ್ಷ ರೂ.ಗಳಿದ್ದು, ಅದು ೧೯೯೦–೯೧ರಲ್ಲಿ ೨೦,೨೯೭ ಲಕ್ಷ ರೂ.ಗಳಿಗೂ, ೧೯೯೪–೯೫ರಲ್ಲಿ ೪೨,೪೨೩ ಲಕ್ಷ ರೂ.ಗಳಿಗೂ ಹಾಗೂ ೧೯೯೯–೦೦ರಲ್ಲಿ ೯೨,೧೩೩ ಲಕ್ಷ ರೂ.ಗಳಿಗೂ ಹೆಚ್ಚಳಗೊಂಡಿದ್ದು, ಈ ಹೆಚ್ಚಳ ಅದರ ಮಹತ್ವವನ್ನು ಪ್ರತಿಬಿಂಬಿಸುತ್ತದೆ.

## ತಲಾ ಆದಾಯ

ಜಿಲ್ಲೆಯ ತಲಾ ಆದಾಯವು ೧೯೬೦–೬೧ರಲ್ಲಿ ಚಾಲ್ತಿ ಬೆಲೆಗಳಲ್ಲಿ ರೂ.೨೫೮.೩೬ ಗಳಿದ್ದರೆ, ೧೯೭೦–೭೧ರಲ್ಲಿ ಅದು ರೂ. ೬೦೬.೮೩ಗಳಿಗೂ, ೧೯೮೦–೮೧ರಲ್ಲಿ ರೂ. ೧,೫೯೨ ಗಳಿಗೂ ಹೆಚ್ಚಳಗೊಂಡಿದ್ದು, ರಾಜ್ಯದಲ್ಲಿ ಜಿಲ್ಲೆಗೆ ಆ ಸಾಲಿನಲ್ಲಿ ಎಂಟನೇ ಸ್ಥಾನ ದೊರಕುವಂತೆ ಮಾಡಿತು. ೧೯೯೦–೯೧ರಲ್ಲಿ ಜಿಲ್ಲೆಯ ತಲಾ ಆದಾಯ ೩,೯೨೪ ರೂ.ಗಳಿಗೆ ಹೆಚ್ಚಳಗೊಂಡರೂ, ರಾಜ್ಯದಲ್ಲಿ ಇದರ ಸ್ಥಾನ ೧೩ಕ್ಕೆ ಕುಸಿತಗೊಂಡರೂ, ೧೯೯೪–೯೫ರಲ್ಲಿ ಅದು ೭,೬೯೨ರೂ.ಗಳಿಗೆ ಹೆಚ್ಚಳಗೊಂಡಿದ್ದು, ರಾಜ್ಯದಲ್ಲಿ ೯ನೇ ಸ್ಥಾನ ಪಡೆದುಕೊಂಡಿತು. ತಲಾ ಆದಾಯ ೧೯೯೬–೯೭ರಲ್ಲಿ ೭,೪೦೨ ರೂ.ಗಳಿಗಿಳಿದು ರಾಜ್ಯದ ತಲಾವರಮಾನದ ಪಟ್ಟಿಯಲ್ಲಿ ೧೬ನೇಯ ಸ್ಥಾನಕ್ಕೆ ಕುಸಿದಿದೆ.

೧೯೮೦–೮೧ ರ ಸ್ಥಿರ ಬೆಲೆಗಳಲ್ಲಿ ಜಿಲ್ಲೆಯ ತಲಾದಾಯ ೧,೫೯೨ರೂ.ಗಳಿದ್ದು, ರಾಜ್ಯದಲ್ಲಿ ೮ನೇ ಸ್ಥಾನ ಪಡೆದಿತ್ತು. ಆದರೆ ಅದು ೧೯೯೮–೯೯ ಮತ್ತು ೧೯೯೯–೦೦ದಲ್ಲಿ ೧೯೯೩–೯೪ರ ಸ್ಥಿರ ಬೆಲೆಗಳಲ್ಲಿ ಕ್ರಮವಾಗಿ ೭,೯೯೨ ಮತ್ತು ೧೦,೦೫೭ ರೂ.ಗಳಾಗಿದ್ದು, ರಾಜ್ಯದಲ್ಲಿ ಕ್ರಮವಾಗಿ ೧೬ ಹಾಗೂ ೧೪ನೇ ಸ್ಥಾನದಲ್ಲಿತ್ತು.

ಜಿಲ್ಲಾವಾರು ಆದಾಯ ಮತ್ತು ತಲಾದಾಯಗಳ ತುಲನಾತ್ಮಕ ಅಧ್ಯಯನದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಾಗಿರುವ ಪ್ರಗತಿಯ ಅಂತರ, ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ಗುರುತಿಸಿ, ಅವುಗಳಿಗೆ ಕಾರಣಗಳನ್ನು ಕಂಡುಕೊಂಡು, ಅವುಗಳಿಗಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಜಾರಿಗೆ ತರಲು ಅನುಕೂಲವಾಗುವುದು. ಜಿಲ್ಲೆಯಲ್ಲಿ ಮೂಲ

ಉದ್ದಿಮೆಗಳಿಂದ ೧೯೮೦–೮೧ ರಿಂದ ೧೯೯೯–೨೦೦೦ದವರೆಗೆ ದೊರಕಿರುವ ವಲಯವಾರು ನಿವ್ವಳ ಆದಾಯವನ್ನು ಚಾಲ್ತಿ ಮತ್ತು ಸ್ಥಿರ ಬೆಲೆಗಳಲ್ಲಿ ಕೋಷ್ಟಕ ೮.೫ರಲ್ಲಿ ಹಾಗೂ ೮.೬ರಲ್ಲಿ ನೀಡಲಾಗಿದೆ.

## ಬೆಲೆ

ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣವಾಗುವವರೆಗೂ ಮಂಡ್ಯ ಜಿಲ್ಲೆಯು ಪ್ರಧಾನವಾಗಿ ಮಳೆ ಆಧಾರಿತ ಕೃಷಿ ಪ್ರದೇಶವಾಗಿದ್ದು, ಜನರ ಸ್ಥಿತಿಗತಿಗಳು ದುರ್ಬಲವಾಗಿತ್ತು. ಜಿಲ್ಲೆಯ ವ್ಯವಸಾಯೋತ್ಪನ್ನಗಳಿಗೆ ಉತ್ತಮ ಸಾಗಾಣಿಕೆ ಮತ್ತು ಮಾರುಕಟ್ಟೆ ಸೌಲಭ್ಯದ ಕೊರತೆಗಳಿಂದಾಗಿ ತಕ್ಕ ಪ್ರತಿಫಲ ಸಿಕ್ಕುತ್ತಿರಲ್ಲಿಲ್ಲ. ಇದರಿಂದ ಜನರ ಆರ್ಥಿಕ ಸ್ಥಾನಮಾನ ಹದಗೆಟ್ಟಿತ್ತು. ಅಗತ್ಯ ವಸ್ತುಗಳ ಬೆಲೆ ಮತ್ತು ಕೂಲಿಯ ದರದಲ್ಲಿನ ವ್ಯತ್ಯಾಸಗಳು ಜನರ ಜೀವನಮಟ್ಟವನ್ನು ನಿರ್ಧರಿಸುತ್ತವೆ. ಲಭ್ಯವಿರುವ ದಾಖಲೆಗಳಿಂದ ಬೆಲೆ ಪ್ರವೃತ್ತಿಯ ಬಗ್ಗೆ ವಿಮರ್ಶಿಸಬಹುದು. ಫ್ರಾನ್ಸಿಸ್ ಬುಕಾನನ್‌ನು ತಿಳಿಸಿರುವಂತೆ ೧೮೦೦ರಲ್ಲಿ ೧೨ ಸುಲ್ತಾನಿ ಪಣಮ್‌ಗೆ ಒಂದು ಖಂಡುಗ (೨೦೦ ಸೇರು) ರಾಗಿ, ಇಪ್ಪತ್ತೆಂಟೂವರೆ ಸೇರು ಉತ್ತಮ ಅಕ್ಕಿ ಮತ್ತು ಅರವತ್ತಾರೂವರೆ ಸೇರು ದಪ್ಪ ಅಕ್ಕಿ ದೊರಕುತ್ತಿತ್ತು. ಇದನ್ನು ರೂಪಾಯಿಗೆ ಪರಿವರ್ತಿಸಿದರೆ ಒಂದು ರೂಪಾಯಿಗೆ ೫೦ ಸೇರು ರಾಗಿ, ಉತ್ತಮ ಅಕ್ಕಿ ೯ ಸೇರು, ದಪ್ಪ ಅಕ್ಕಿ ೨೧ ಸೇರು ಪಡೆಯಬಹುದಾಗಿತ್ತು. ೧೯ನೇ ಶತಮಾನದ ಕೊನೆಯಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿ, ರೈಲ್ವೆ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರ ವೇತನ ಹೆಚ್ಚಳ ಮತ್ತು ೧೮೭೭–೭೮ರಲ್ಲಿ ಸಂಭವಿಸಿದ ಪ್ರಕೃತಿ ವಿಕೋಪ ಮೊದಲಾದವು ಬೆಲೆಯ ಹೆಚ್ಚಳಕ್ಕೆ ಮುಖ್ಯ ಕಾರಣಗಳಾಗಿದ್ದವು.

**ಸಗಟು ಬೆಲೆ :** ೧೯೬೭ರ ಮಂಡ್ಯ ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಉಲ್ಲೇಖಿಸಿರುವಂತೆ, ಅಂದಿನ ಮೈಸೂರು ಪ್ರದೇಶದಲ್ಲಿ ೧೮೮೧–೮೨ರ ಸಾಲಿನಲ್ಲಿ ಒಂದು ರೂಪಾಯಿಗೆ ೧೨.೮೬ ಸೇರು ಅಕ್ಕಿ ಹಾಗು ೨೭.೨೩ ಸೇರು ರಾಗಿ ಸಗಟು ಮಾರಾಟದ ಲೆಕ್ಕದಲ್ಲಿ ಲಭಿಸುತ್ತಿದ್ದು, ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ರೂಪಾಯಿಗೆ ೧೬ ಸೇರು ಅಕ್ಕಿ, ೩೬.೫೭ ಸೇರು ರಾಗಿ ಲಭಿಸುತ್ತಿದ್ದ ಅಂಶ ಗೊತ್ತಾಗುತ್ತದೆ. ೧೮೯೦ರಲ್ಲಿ ಇದು ರೂಪಾಯಿಗೆ ಸುಮಾರು ೧೧.೬೫ ಸೇರು ಅಕ್ಕಿ, ೩೯.೩೮ ಸೇರು ರಾಗಿ, ಸಗಟು ದರದಲ್ಲಿ ಲಭಿಸುತ್ತಿತ್ತು. ಆ ದಶಕದಲ್ಲಿ ಅಕ್ಕಿಯ ಸಗಟು ಬೆಲೆಯಲ್ಲಿ ಏರುಪೇರು ಗಣನೀಯ ಪ್ರಮಾಣದಲ್ಲಿ ಕಂಡುಬಂದರೆ ರಾಗಿಯ ಸಗಟು ಬೆಲೆಯಲ್ಲಿ ಗಮನಾರ್ಹ ಇಳಿತ ಕಂಡುಬಂದಿರುವುದು ಉಲ್ಲೇಖಾರ್ಹವಾಗಿದೆ. ೧೮೯೦–೯೧ರಲ್ಲಿ ರೂಪಾಯಿಗೆ ಸುಮಾರು ೧೦ ಸೇರು ಅಕ್ಕಿ, ೨೯ ಸೇರು ರಾಗಿ ಸಗಟು ಮಾರಾಟಕ್ಕೆ ಲಭಿಸುತ್ತಿದ್ದು, ೧೯೦೦–೦೧ರಲ್ಲಿ ಇದು ರೂಪಾಯಿಗೆ ಸುಮಾರು ೮ ಸೇರು ಅಕ್ಕಿ ಹಾಗೂ ೧೫ ಸೇರು ರಾಗಿಗಳಿಗೆ ಇಳಿಯಿತು. ಮುಂದಿನ ಮೂರು ವರ್ಷದ (೧೯೦೧–೦೪) ಅವಧಿಯಲ್ಲಿ ರೂಪಾಯಿಗೆ ೧೦ ಸೇರು ಅಕ್ಕಿ ಲಭಿಸಿದರೆ, ರಾಗಿ ಆ ಮೂರು ವರ್ಷ ಕ್ರಮವಾಗಿ ರೂಪಾಯಿಗೆ ೧೮, ೨೬, ೩೭ ಸೇರು ಲಭಿಸುತ್ತಿತ್ತು. ಅದರಲ್ಲೂ ವಿಶೇಷವಾಗಿ ೧೯೦೪ರ ನಂತರ ಅಕ್ಕಿಯ ಬೆಲೆಯಲ್ಲಿ ಹೆಚ್ಚಳವಾಗಿರುವುದು ಕಂಡುಬರುತ್ತದೆ. ಇದು ೧೯೧೦–೧೧ರ ವೇಳೆಗೆ ರೂಪಾಯಿಗೆ ಅಕ್ಕಿ ೭.೨೯ ಹಾಗೂ ರಾಗಿ ೨೦.೨೫ ಸೇರುಗಳಿಗೆ ಇಳಿದುದು ಗಮನಾರ್ಹವಾಗಿತ್ತು. ಇದು ೧೯೧೧–೧೨ರಲ್ಲಿ ಕ್ರಮವಾಗಿ ರೂಪಾಯಿಗೆ ೬ ಹಾಗೂ ೧೫ ಸೇರು ಲಭಿಸುತ್ತಿದ್ದು, ೧೯೧೨–೧೩ರಲ್ಲಿ ರೂಪಾಯಿಗೆ ಐದೂವರೆ ಸೇರು ಅಕ್ಕಿ, ೧೬ ಸೇರು ರಾಗಿ ಲಭಿಸುತ್ತಿತ್ತು. ಹೀಗೆ ಬೆಲೆಗಳಲ್ಲಿ ಏರಿಳಿತ ಕಂಡುಬರಲು ಪ್ರಕೃತಿ ವಿಕೋಪ, ಜನಸಂಖ್ಯಾ ಹೆಚ್ಚಳ, ಹಣದುಬ್ಬರ ಮುಂತಾದವು ಪ್ರಮುಖ ಕಾರಣಗಳಾಗಿವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೭ ಅನ್ನು ನೋಡಿ,

ಮೆಟ್ರಿಕ್ ಮಾಪನ ಜಾರಿಯಾಗುವುದಕ್ಕೆ ಮೊದಲು ಮಂಡ್ಯ ಜಿಲ್ಲೆಯಲ್ಲಿ ಪ್ರಚಲಿತದಲ್ಲಿದ್ದ ಅಳತೆ–ತೂಕಗಳ ವಿವರ

**ಕೋಷ್ಟಕ ೮.೫ ಮೂಲ ಉದ್ದಿಮೆಗಳಿಂದ ೧೯೮೦–೮೧ ರಿಂದ ೧೯೯೯–೨೦೦೦ ರವರೆಗೆ ನಿವ್ವಳ ಜಿಲ್ಲಾದಾಯ (ಚಾಲ್ತಿ ಬೆಲೆಗಳಲ್ಲಿ)**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ವಿವಿಧ ಮೂಲಗಳಿಂದ ಜಿಲ್ಲೆಯ ಆದಾಯ | ೧೯೮೦–೮೧ | ೧೯೯೦–೯೧ | ೧೯೯೩–೯೪ | ೧೯೯೪–೯೫ | ೧೯೯೫–೯೬ | ೧೯೯೬–೯೭ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ |
|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| | | | | | **ಪ್ರಾಥಮಿಕ ವಲಯ** | | | | | |
| ೧ | ಕೃಷಿ | ೧೪,೧೭೪ | ೩೨,೮೭೯ | ೫೬,೭೬೩ | ೭೧,೩೦೬ | ೬೬,೭೨೦ | ೫೫,೫೪೭ | ೮೨,೫೫೯ | ೮೯,೯೨೦ | ೧೦೯,೭೭೬ |
| ೨ | ಆರಣ್ಯ | ೨೭೨ | ೨,೧೯೨ | ೩,೦೦೩ | ೩,೧೪೮ | ೩,೩೩೮ | ೩,೬೮೮ | ೪,೨೯೬ | ೫,೧೧೩ | ೫,೪೧೭ |
| ೩ | ಮೀನುಗಾರಿಕೆ | ೧೨೮ | ೧೮೫ | ೪೬೫ | ೭೭೧ | ೭೮೬ | ೧,೦೪೪ | ೨,೨೧೬ | ೨,೨೨೫ | ೨,೧೯೮ |
| ೪ | ಗಣಿ ಮತ್ತು ಕಲ್ಲು ಅಗೆತ | ೧ | ೨ | ೨ | ೫ | ೧೪೯ | ೫೦ | ೧,೮೭೪ | ೮ | ೩ |
| | ಒಟ್ಟು | ೧೪,೫೭೫ | ೩೫,೨೫೮ | ೬೦,೨೩೩ | ೭೫,೨೩೦ | ೭೦,೯೯೩ | ೬೦,೩೨೯ | ೯೦,೯೪೫ | ೯೭,೨೬೬ | ೧,೧೭,೩೯೪ |
| | | | | | **ದ್ವಿತೀಯ ವಲಯ** | | | | | |
| ೫ | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೧,೨೦೪ | ೪,೦೯೧ | ೭,೪೬೩ | ೭,೮೫೪ | ೮,೪೪೭ | ೯,೫೦೭ | ೩೧,೦೧೫ | ೧೪,೫೨೮ | ೧೫,೫೭೮ |
| ೬ | ನಿರ್ಮಾಣ | ೮೫೯ | ೩,೨೦೦ | ೫,೭೭೦ | ೬,೨೯೬ | ೭,೨೫೧ | ೯,೫೨೩ | ೧೦,೨೪೪ | ೧೩,೨೩೮ | ೧೬,೪೫೩ |
| ೭ | ವಿದ್ಯುತ್, ಅನಿಲ, ನೀರು ಸರಬರಾಜು | ೨೩೩ | ೨,೦೪೩ | ೧,೦೮೮ | ೧,೬೬೧ | ೧,೯೧೭ | ೧,೮೩೦ | ೧,೮೬೪ | ೩,೪೧೧ | ೧,೯೩೯ |
| | ಒಟ್ಟು | ೨,೨೯೬ | ೯,೩೩೪ | ೧೪,೩೨೧ | ೧೫,೮೧೧ | ೧೭,೬೧೫ | ೨೦,೮೬೦ | ೪೩,೧೨೩ | ೩೧,೧೭೭ | ೩೩,೯೭೦ |
| | | | | | **ತೃತೀಯ ವಲಯ** | | | | | |
| ೮ | ರೈಲ್ವೆ | ೨೮ | ೧೩೮ | ೨೪೯ | ೧೯೨ | ೨೦೭ | ೨೫೭ | ೫೯೬ | ೩೪೫ | ೩೯೯ |
| ೯ | ಇತರೆ ಸಾರಿಗೆ | ೨೫೭ | ೧,೧೩೬ | ೨,೦೮೦ | ೩,೧೧೧ | ೨,೬೨೫ | ೩,೯೩೦ | ೧,೬೨೬ | ೨,೪೯೮ | ೩,೭೦೭ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
|---|---|---|---|---|---|---|---|---|---|---|
| ೧೦ | ಸಂಗ್ರಹಣೆ | ೧ | ೯ | ೧೯ | ೧೮ | ೨೦ | ೨೭ | ೩೪ | ೫೨ | ೭೫ |
| ೧೧ | ಸಂಪರ್ಕ | ೧೧೧ | ೩೪೦ | ೭೫೨ | ೭೯೪ | ೮೯೦ | ೩,೧೨೪ | ೨,೯೭೩ | ೪,೨೬೧ | ೪,೦೪೬ |
| ೧೨ | ವ್ಯಾಪಾರ, ಹೋಟೇಲ್ ಮತ್ತು ಉಪಹಾರಗಳು | ೨,೧೮೬ | ೬,೯೯೩ | ೧೪,೩೭೫ | ೧೯,೨೪೧ | ೧೯,೯೧೫ | ೧೪,೧೮೩ | ೨೨,೯೯೩ | ೨೩,೭೩೮ | ೨೩,೬೫೪ |
| ೧೩ | ಬ್ಯಾಂಕ್ ಮತ್ತು ವಿಮೆ | ೨೫೭ | ೧,೭೬೪ | ೩,೧೩೩ | ೪,೦೩೪ | ೪,೮೭೯ | ೬,೬೯೯ | ೭,೦೪೫ | ೮,೮೯೬ | ೮,೯೯೦ |
| ೧೪ | ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ | ೧,೨೧೧ | ೩,೨೫೮ | ೪,೧೦೦ | ೪,೬೦೩ | ೫,೦೫೬ | ೬,೦೭೦ | ೧೨,೯೩೭ | ೧೫,೦೪೨ | ೧೭,೨೯೮ |
| ೧೫ | ಸಾರ್ವಜನಿಕ ಆಡಳಿತ | ೫೧೭ | ೨,೫೩೧ | ೩,೦೭೦ | ೩,೩೩೫ | ೪,೦೩೫ | ೫,೭೯೭ | ೭,೦೮೭ | ೮,೯೯೫ | ೧೨,೩೭೬ |
| ೧೬ | ಇತರೆ ಸೇವೆಗಳು | ೯೧೫ | ೪,೧೨೮ | ೬,೧೯೨ | ೭,೦೯೫ | ೭,೮೭೬ | ೧೦,೮೩೦ | ೧೪,೭೬೭ | ೧೭,೦೮೬ | ೨೧,೫೮೮ |
| | ಒಟ್ಟು | ೫,೪೮೩ | ೨೦,೨೯೭ | ೩೩,೯೭೦ | ೪೨,೪೨೩ | ೪೫,೫೦೩ | ೫೦,೯೧೭ | ೭೦,೦೫೮ | ೮೦,೯೧೩ | ೯೨,೧೩೩ |
| ೧೭ | ಜಿಲ್ಲೆಯ ಒಟ್ಟು ನಿವ್ವಳ ಆದಾಯ | ೨೨,೩೫೪ | ೬೪,೮೮೯ | ೧,೦೮,೫೨೪ | ೧,೩೩,೪೬೪ | ೧,೩೪,೧೧೧ | ೧,೩೨,೧೦೬ | ೨,೦೪,೧೨೬ | ೨,೦೯,೩೫೬ | ೨,೪೩,೪೯೭ |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ(ಸಂಖ್ಯೆ)ಗಳಲ್ಲಿ | ೧೩ | ೧೬ | ೧೫ | ೧೩ | ೧೬ | ೧೯ | | ೧೨ | ೧೨ |
| ೧೯ | ತಲಾದಾಯ (ರೂ.ಗಳಲ್ಲಿ) | ೧,೫೯೨ | ೩,೯೨೪ | ೬,೩೪೭ | ೭,೬೯೨ | ೭,೬೧೯ | ೭,೪೦೨ | ೧೧,೦೮೧ | ೧೧,೧೮೨ | ೧೪,೦೬೬ |
| ೨೦ | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೮ | ೧೩ | ೧೧ | ೯ | ೧೬ | ೧೮ | | ೧೮ | ೧೪ |

**ಕೋಷ್ಟಕ ೮.೬ ಮೂಲ ಉದ್ದಿಮೆಗಳಿಂದ ೧೯೮೦–೮೧ ರಿಂದ ೧೯೯೯–೨೦೦೦ದವರೆಗೆ ನಿವ್ವಳ ಜಿಲ್ಲಾದಾಯ (೧೯೮೦–೮೧ ಸ್ಥಿರ ಬೆಲೆಗಳಲ್ಲಿ)**

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ವಿವಿಧ ಮೂಲಗಳಿಂದ ಜಿಲ್ಲೆಯ ಆದಾಯ | ೧೯೮೦–೮೧ | ೧೯೯೦–೯೧ | ೧೯೯೩–೯೪ | ೧೯೯೪–೯೫ | ೧೯೯೫–೯೬ | ೧೯೯೬–೯೭ | ೧೯೯೭–೯೮ | ೧೯೯೮–೯೯ | ೧೯೯೯–೨೦೦೦ |
|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
| | **ಪ್ರಾಥಮಿಕ ವಲಯ** | | | | | | | | | |
| ೧ | ಕೃಷಿ | ೧೪,೧೭೪ | ೧೬,೬೨೨ | ೧೯,೯೫೯ | ೨೩,೮೯೪ | ೨೦,೯೭೩ | ೧೪,೧೯೯ | ೬೩,೪೦೧ | ೬೭,೩೨೬ | ೮೪,೬೭೫ |
| ೨ | ಆರಣ್ಯ | ೨೭೨ | ೨೮೮ | ೨೯೭ | ೩೦೩ | ೩೦೭ | ೩೧೪ | ೩,೨೦೧ | ೩,೩೭೮ | ೩,೪೨೬ |
| ೩ | ಮೀನುಗಾರಿಕೆ | ೧೨೮ | ೧೨೮ | ೨೨೪ | ೨೦೦ | ೧೯೬ | ೧೯೬ | ೭೩೩ | ೬೬೮ | ೫೯೩ |
| ೪ | ಗಣಿ ಮತ್ತು ಕಲ್ಲು ಅಗೆತ | ೧ | ೧ | – | – | ೮ | ೩ | ೧,೪೧೫ | ೬ | ೧ |
| | ಒಟ್ಟು | ೧೪,೫೭೫ | ೧೭,೦೩೯ | ೨೦,೪೮೦ | ೨೪,೩೯೭ | ೨೧,೪೮೪ | ೧೪,೭೧೨ | ೬೮,೭೫೦ | ೭೧,೩೭೮ | ೮೮,೬೯೫ |
| | **ದ್ವಿತೀಯ ವಲಯ** | | | | | | | | | |
| ೫ | ತಯಾರಿಕೆ (ನೋಂದಣಿಯಾದ ಮತ್ತು ನೋಂದಣಿಯಾಗದ) | ೧,೨೦೪ | ೧,೯೪೨ | ೨,೯೫೧ | ೨,೭೨೬ | ೨,೮೭೬ | ೩,೦೩೪ | ೨೪,೫೯೨ | ೧೦,೭೪೦ | ೧೦,೮೫೩ |
| ೬ | ನಿರ್ಮಾಣ | ೮೫೯ | ೧,೦೩೮ | ೧,೨೫೦ | ೧,೨೫೮ | ೧,೪೪೬ | ೧,೫೫೯ | ೭,೭೦೭ | ೯,೫೬೨ | ೧೧,೫೯೧ |
| ೭ | ವಿದ್ಯುತ್, ಅನಿಲ, ನೀರು ಸರಬರಾಜು | ೨೩೩ | ೪೬೪ | ೩೮೭ | ೪೯೭ | ೩೯೦ | ೩೩೭ | ೧,೨೯೩ | ೨,೦೦೦ | ೧,೨೦೨ |
| | ಒಟ್ಟು | ೨,೨೯೬ | ೩,೪೪೪ | ೪,೫೮೮ | ೪,೪೮೧ | ೪,೭೧೨ | ೪,೯೩೦ | ೩೩,೫೯೨ | ೨೨,೩೦೨ | ೨೩,೬೪೬ |
| | **ತೃತೀಯ ವಲಯ** | | | | | | | | | |
| ೮ | ರೈಲ್ವೆ | ೨೮ | ೩೬ | ೩೩ | ೨೦ | ೨೯ | ೩೪ | ೪೮೨ | ೨೫೭ | ೩೧೨ |
| ೯ | ಇತರೆ ಸಾರಿಗೆ | ೨೫೭ | ೪೭೯ | ೬೫೨ | ೭೧೯ | ೬೮೨ | ೭೯೧ | ೮೫೭ | ೧,೨೩೮ | ೧,೮೧೮ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ | ೧೧ |
|---|---|---|---|---|---|---|---|---|---|---|
| ೧೦ | ಸಂಗ್ರಹಣೆ | ೧ | ೬ | ೬ | ೮ | ೮ | ೧೦ | ೨೬ | ೪೦ | ೫೧ |
| ೧೧ | ಸಂಪರ್ಕ | ೧೧೧ | ೭೪ | ೧೦೪ | ೧೧೫ | ೧೩೭ | ೩೫೧ | ೨,೬೭೩ | ೩,೯೨೯ | ೪,೦೧೨ |
| ೧೨ | ವ್ಯಾಪಾರ, ಹೋಟೇಲ್ ಮತ್ತು ಉಪಹಾರಗಳು | ೨,೧೮೬ | ೩,೮೩೪ | ೫,೫೮೧ | ೭,೧೧೮ | ೬,೭೯೩ | ೪,೧೯೫ | ೧೭,೫೨೮ | ೧೭,೧೨೨ | ೧೭,೦೭೬ |
| ೧೩ | ಬ್ಯಾಂಕ್ ಮತ್ತು ವಿಮೆ | ೨೫೭ | ೮೮೦ | ೧,೩೧೬ | ೧,೨೨೬ | ೧,೪೪೬ | ೧,೯೭೩ | ೫,೭೧೪ | ೬,೬೧೮ | ೬,೭೬೮ |
| ೧೪ | ಸ್ಥಿರಾಸ್ತಿ ಮತ್ತು ವಾಸಗೃಹಗಳ ಒಡೆತನ | ೧,೨೧೧ | ೧,೮೦೯ | ೧,೯೭೨ | ೨,೧೨೧ | ೨,೨೧೭ | ೨,೨೯೫ | ೯,೬೧೫ | ೧೦,೫೨೫ | ೧೧,೨೬೯ |
| ೧೫ | ಸಾರ್ವಜನಿಕ ಆಡಳಿತ | ೫೧೭ | ೧,೦೬೮ | ೯೬೮ | ೯೫೩ | ೧,೦೫೧ | ೧,೩೭೭ | ೫,೦೦೨ | ೫,೬೧೧ | ೭,೪೬೪ |
| ೧೬ | ಇತರೆ ಸೇವೆಗಳು | ೯೧೫ | ೧,೭೧೨ | ೧,೯೮೮ | ೨,೧೮೯ | ೨,೦೫೯ | ೨,೫೮೦ | ೧೦,೨೭೫ | ೧೦,೬೦೧ | ೧೨,೯೮೧ |
|  | ಒಟ್ಟು | ೫೪೮೩ | ೯,೮೯೮ | ೧೨,೬೨೦ | ೧೪,೪೬೯ | ೧೪,೪೨೨ | ೧೩,೬೦೬ | ೫೨,೧೭೭ | ೫೫,೯೪೧ | ೬೧,೭೫೧ |
| ೧೭ | ಜಿಲ್ಲೆಯ ಒಟ್ಟು ನಿವ್ವಳ ಆದಾಯ | ೨೨,೩೫೪ | ೩೦,೩೮೧ | ೩೭,೬೮೮ | ೪೩,೩೪೭ | ೪೦,೬೧೮ | ೩೩,೨೪೮ | ೧೫,೪೫೧೯ | ೧,೪೯,೬೨೧ | ೧,೭೪,೦೯೨ |
| ೧೮ | ಜಿಲ್ಲಾದಾಯದಲ್ಲಿ ಜಿಲ್ಲೆಯ ಸ್ಥಾನ ಸಂಖ್ಯೆಗಳಲ್ಲಿ | ೧೩ | ೧೪ | ೧೪ | ೧೦ | ೧೪ | ೧೫ |  | ೧೩ | ೧೧ |
| ೧೯ | ತಲಾದಾಯ (ರೂ.ಗಳಲ್ಲಿ) | ೧,೫೯೨ | ೧,೮೩೭ | ೨,೨೦೪ | ೨,೪೯೮ | ೨,೩೦೮ | ೧,೮೬೩ | ೮,೩೮೮ | ೭,೯೯೨ | ೧೦,೦೫೭ |
| ೨೦ | ತಲಾದಾಯದಲ್ಲಿ ಜಿಲ್ಲೆಯ ಸ್ಥಾನ (ಸಂಖ್ಯೆಗಳಲ್ಲಿ) | ೮ | ೧೧ | ೯ | ೮ | ೧೦ | ೧೮ |  | ೧೬ | ೧೪ |

ಸೂಚನೆ : ೧೯೯೭–೯೮ರ ನಂತರ ನೀಡಿರುವ ಜಿಲ್ಲಾ ಆದಾಯ ಹಾಗೂ ತಲಾ ಆದಾಯವನ್ನು ೧೯೯೩–೯೪ರ ಸ್ಥಿರ ಬೆಲೆಗಳಲ್ಲಿ **ನೀಡಲಾಗಿದೆ.**

| ತೊಲ | ಗ್ರಾಂಗಳು | ತೊಲ | ಗ್ರಾಂಗಳು |
|---|---|---|---|
| ೧ ೧/೨ | ೧೮ | ೧೩ ೧/೨ | ೧೫೮ |
| ೩ | ೩೫ | ೧೫ | ೧೭೫ |
| ೪ ೧/೨ | ೫೩ | ೧೬ ೧/೨ | ೧೯೩ |
| ೬ | ೭೦ | ೧೮ | ೨೧೦ |
| ೭೧/೨ | ೮೮ | ೧೯ ೧/೨ | ೨೨೮ |
| ೯ | ೧೦೫ | ೨೧ | ೨೪೫ |
| ೧೦ ೧/೨ | ೧೨೩ | ೨೨ ೧/೨ | ೨೬೩ |
| ೧೨ | ೧೪೦ | ೨೪ | ೨೮೦ |

| ಸೇರು | ತೊಲ | ಕಿಲೋಗ್ರಾಂ | ಗ್ರಾಂಗಳು | ಸೇರು | ತೊಲ | ಕಿಲೋಗ್ರಾಂ | ಗ್ರಾಂಗಳು |
|---|---|---|---|---|---|---|---|
| ೧ | ೨೪ | .. | ೨೮೦ | ೨೧ | ೫೦೪ | ೫.೮೮ | ೫,೮೮೦ |
| ೨ | ೪೮ | .. | ೫೬೦ | ೨೨ | ೫೨೮ | ೬.೧೬ | ೬,೧೬೦ |
| ೩ | ೭೨ | .. | ೮೪೦ | ೨೩ | ೫೫೨ | ೬.೪೪ | ೬,೪೪೦ |
| ೪ | ೯೬ | ೧.೧೨ | ೧,೧೨೦ | ೨೪ | ೫೭೬ | ೬.೭೨ | ೬,೭೨೦ |
| ೫ | ೧೨೦ | ೧.೪೦ | ೧,೪೦೦ | ೨೫ | ೬೦೦ | ೭.೦೦ | ೭,೦೦೦ |
| ೬ | ೧೪೪ | ೧.೬೮ | ೧,೬೮೦ | ೨೬ | ೬೨೪ | ೭.೨೮ | ೭,೨೮೦ |
| ೭ | ೧೬೮ | ೧.೯೬ | ೧,೯೬೦ | ೨೭ | ೬೪೮ | ೭.೫೬ | ೭೫೬೦ |
| ೮ | ೧೯೨ | ೨.೨೪ | ೨,೨೪೦ | ೨೮ | ೬೭೨ | ೭.೮೪ | ೭೮೪೦ |
| ೯ | ೨೧೬ | ೨.೫೨ | ೨,೫೨೦ | ೨೯ | ೬೯೬ | ೮.೧೨ | ೮೧೨೦ |
| ೧೦ | ೨೪೦ | ೨.೮೦ | ೨,೮೦೦ | ೩೦ | ೭೨೦ | ೮.೪೦ | ೮,೪೦೦ |
| ೧೧ | ೨೬೪ | ೩.೦೮ | ೩,೦೮೦ | ೩೧ | ೭೪೪ | ೮.೬೮ | ೮,೬೮೦ |
| ೧೨ | ೨೮೮ | ೩.೩೬ | ೩,೩೬೦ | ೩೨ | ೭೬೮ | ೮.೯೬ | ೮,೯೬೦ |
| ೧೩ | ೩೧೨ | ೩.೬೪ | ೩,೬೪೦ | ೩೩ | ೭೯೨ | ೯.೨೪ | ೯,೨೪೦ |
| ೧೪ | ೩೩೬ | ೩.೯೨ | ೩,೯೨೦ | ೩೪ | ೮೧೬ | ೯.೫೨ | ೯,೫೨೦ |
| ೧೫ | ೩೬೦ | ೪.೨೦ | ೪,೨೦೦ | ೩೫ | ೮೪೦ | ೯.೮೦ | ೯,೮೦೦ |
| ೧೬ | ೩೮೪ | ೪.೪೮ | ೪,೪೮೦ | ೩೬ | ೮೬೪ | ೧೦.೦೮ | ೧೦,೦೮೦ |
| ೧೭ | ೪೦೮ | ೪.೭೬ | ೪,೭೬೦ | ೩೭ | ೮೮೮ | ೧೦.೩೬ | ೧೦,೩೬೦ |
| ೧೮ | ೪೩೨ | ೫.೦೪ | ೫,೦೪೦ | ೩೮ | ೯೧೨ | ೧೦.೬೪ | ೧೦,೬೪೦ |
| ೧೯ | ೪೫೬ | ೫.೩೨ | ೫,೩೨೦ | ೩೯ | ೯೩೬ | ೧೦.೯೨ | ೧೦,೯೨೦ |
| ೨೦ | ೪೮೦ | ೫.೬೦ | ೫,೬೦೦ | ೪೦ | ೯೬೦ | ೧೧.೨೦ | ೧೧,೨೦೦ |

| ಮಣ | ಸೇರು | ತೊಲ | ಕಿಲೋಗ್ರಾಂಗಳು | ಗ್ರಾಂಗಳು |
|---|---|---|---|---|

| | | | | |
|---|---|---|---|---|
| ೧ | ೪೦ | ೯೬೦ | ೧೧.೨ | ೧೧,೨೦೦ |
| ೨ | ೮೦ | ೧,೯೨೦ | ೨೨.೪ | ೨೨,೪೦೦ |
| ೩ | ೧೨೦ | ೨,೮೮೦ | ೩೩.೬ | ೩೩,೬೦೦ |
| ೪ | ೧೬೦ | ೩,೮೪೦ | ೪೪.೮ | ೪೪,೮೦೦ |
| ೫ | ೨೦೦ | ೪,೮೦೦ | ೫೬.೦ | ೫೬,೦೦೦ |
| ೬ | ೨೪೦ | ೫,೭೬೦ | ೬೭.೨ | ೬೭,೨೦೦ |
| ೭ | ೨೮೦ | ೬,೭೨೦ | ೭೮.೪ | ೭೮,೪೦೦ |
| ೮ | ೩೨೦ | ೭,೬೮೦ | ೮೯.೬ | ೮೯,೬೦೦ |
| ೯ | ೩೬೦ | ೮,೬೪೦ | ೧೦೦.೮ | ೧,೦೦,೮೦೦ |
| ೧೦ | ೪೦೦ | ೯,೬೦೦ | ೧೧೨.೦ | ೧,೧೨,೦೦೦ |

ಆಧಾರ: ನಿಯಂತ್ರಕರು, ತೂಕ ಮತ್ತು ಅಳತೆ ಇಲಾಖೆ, ಬೆಂಗಳೂರು

**ಕೋಷ್ಟಕ ೮.೭ ಒಂದು ರೂಪಾಯಿಗೆ ೮೦ ತೊಲದ (೯೩೩ ಗ್ರಾಂ) ಸೇರಿನಲ್ಲಿ ಅಕ್ಕಿ,ರಾಗಿಗಳ ಸಗಟುಬೆಲೆ ವಿವರ**

| ವರ್ಷ | ಅಕ್ಕಿ | ರಾಗಿ |
|---|---|---|
| ೧೮೮೧–೮೨ | ೧೨.೮೬ | ೨೭.೨೩ |
| ೧೮೯೦–೯೧ | ೯.೬೮ | ೨೮.೯೭ |
| ೧೯೦೦–೦೧ | ೮.೧೧ | ೧೪.೬೪ |
| ೧೯೧೦–೧೧ | ೭.೫೬ | ೨೦.೨೫ |

ಮೇಲಿನ ಕೋಷ್ಟಕವು ಬೆಲೆಯ ಪ್ರವೃತ್ತಿಗಳಲ್ಲಿ ವ್ಯತ್ಯಾಸವಾಗಿರುವುದನ್ನು ಸೂಚಿಸುತ್ತದೆ. ಅಲ್ಲದೆ ಅನುಕ್ರಮವಾಗಿ ಅಕ್ಕಿಯ ಬೆಲೆ ಹೆಚ್ಚಳವಾಗಿರುವುದು ಕಂಡುಬರುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ ೧೯೦೦–೦೧ರ ನಂತರ ಅಕ್ಕಿಯ ಬೆಲೆಯಲ್ಲಿ ಹೆಚ್ಚಳವಾಗಿರುವುದು ಕಂಡುಬರುತ್ತದೆ. ಹೀಗೆ ಬೆಲೆಯಲ್ಲಿ ಏರಿಳಿತವಾಗಿರುವುದಕ್ಕೆ ಮಳೆಯ ಅಭಾವ, ಅತಿವೃಷ್ಟಿ, ಅನಾವೃಷ್ಟಿ, ಜನಸಂಖ್ಯೆ ಹೆಚ್ಚಳ ಮುಂತಾದವು ಕಾರಣವಾಗಿವೆ.

**ಕೋಷ್ಟಕ ೮.೮ ಒಂದು ರೂಪಾಯಿಗೆ ೮೦ ತೊಲದ (೯೩೩ ಗ್ರಾಂ) ಸೇರುಗಳಲ್ಲಿ ಅಕ್ಕಿ ಮತ್ತು ರಾಗಿಯ ಸಗಟು ಮತ್ತು ಚಿಲ್ಲರೆ ಬೆಲೆ ವಿವರ**

| ವರ್ಷ | ಅಕ್ಕಿ | ರಾಗಿ | ಅಕ್ಕಿ | ರಾಗಿ |
|---|---|---|---|---|
| | ಚಿಲ್ಲರೆ ಬೆಲೆ | | ಸಗಟು ಬೆಲೆ | |
| ೧ | ೨ | ೩ | ೪ | ೫ |
| ೧೯೧೩ | ೬.೦೯ | ೧೪.೨೮ | ೫.೯೭ | ೧೪.೦೩ |
| ೧೯೧೪ | ೬.೧೨ | ೧೨.೬೧ | ೫.೯೧ | ೧೨.೧೯ |
| ೧ | ೨ | ೩ | ೪ | ೫ |

| | | | | |
|---|---|---|---|---|
| ೧೯೧೫ | ೬.೯೬ | ೧೫.೦೯ | ೬.೪೮ | ೧೪.೩೯ |
| ೧೯೧೬ | ೭.೧೩ | ೧೬.೯೫ | ೬.೭೫ | ೧೬.೮೪ |
| ೧೯೧೭ | ೬.೮೯ | ೧೫.೦೯ | ೬.೬೪ | ೧೪.೭೬ |
| ೧೯೧೮ | ೬.೧೪ | ೧೨.೪೨ | ೫.೯೭ | ೧೨.೩೦ |
| ೧೯೧೯ | ೪.೭೩ | ೭.೮೬ | ೪.೪೪ | ೭.೫೨ |
| ೧೯೨೦ | ೪.೪೭ | ೭.೭೯ | ೪.೦೩ | ೭.೪೭ |
| ೧೯೨೧ | ೪.೩೪ | ೯.೪೧ | ೪.೨೩ | ೯.೦೧ |

ಮೊದಲನೇ ಜಾಗತಿಕ ಯುದ್ಧ ಪ್ರಾರಂಭವಾದಂದಿನಿಂದ ಸಾಮಾನ್ಯವಾಗಿ ಆಹಾರಪದಾರ್ಥಗಳ ಬೆಲೆಯಲ್ಲಿ ಹೆಚ್ಚಳ ಉಂಟಾಗಿರುವುದು ಗಮನಾರ್ಹ. ೧೯೧೩–೧೮ರ ಅವಧಿಯಲ್ಲಿ ಏರಿಳಿತವಿದ್ದ ಬೆಲೆಗಳು ಅನಂತರ ಅಧಿಕಗೊಂಡಿರುವುದನ್ನು ಕೋಷ್ಟಕ ೮.೮ ರಲ್ಲಿ ಗಮನಿಸಬಹುದಾಗಿದೆ. ೧೯೧೮ರಲ್ಲಿ ಸಗಟು ಮಾರಾಟದ ಲೆಕ್ಕದಲ್ಲಿ ಒಂದು ರೂಪಾಯಿಗೆ ೫.೯೭ ಸೇರು ಅಕ್ಕಿ ಲಭಿಸುತ್ತಿದ್ದು, ಇದು ೧೯೧೯ರಲ್ಲಿ ೪.೪೪ ಸೇರು, ೧೯೨೦ರಲ್ಲಿ ೪.೦೩ ಸೇರುಗಳು ಲಭಿಸುತ್ತಿದ್ದುದರಿಂದ, ಬೆಲೆಯ ಹೆಚ್ಚಳವಾಗಿರುವ ಅಂಶ ಸ್ಪಷ್ಟವಾಗಿದೆ. ಈ ಸಾಲುಗಳಲ್ಲಿ ರಾಗಿಯ ಬೆಲೆ ಕ್ರಮವಾಗಿ ಒಂದು ರೂಪಾಯಿಗೆ ೧೨.೩೦ ಸೇರು, ೭.೫೨ ಸೇರು ಹಾಗೂ ೭.೪೭ ಸೇರು ಲಭಿಸುತ್ತಿತ್ತು. ಚಿಲ್ಲರೆ ಬೆಲೆಯಲ್ಲಿ ೧೯೧೮ರಲ್ಲಿ ಅಕ್ಕಿ ಒಂದು ರೂಪಾಯಿಗೆ ೬.೧೪ ಸೇರುಗಳಿದ್ದಿದ್ದು, ೧೯೧೯ರಲ್ಲಿ ೪.೭೩ ಸೇರುಗಳಿಗೆ, ೧೯೨೦ರಲ್ಲಿ ೪.೪೭ ಸೇರುಗಳಿಗೆ ಲಭಿಸುತ್ತಿದ್ದು, ಇದೇ ಅವಧಿಯಲ್ಲಿ ರಾಗಿಯ ಬೆಲೆ ಕ್ರಮವಾಗಿ ಒಂದು ರೂಪಾಯಿಗೆ ೧೨.೪೨ ಸೇರು, ೭.೮೬ ಸೇರು ಹಾಗೂ ೭.೭೯ ಸೇರುಗಳು ಲಭಿಸುತ್ತಿದ್ದುದರಿಂದ ಬೆಲೆಯು ಹೆಚ್ಚಳಗೊಂಡಿರುವುದು ಸ್ಪಷ್ಟವಾಗುತ್ತದೆ. ೧೯೨೧ ರಿಂದ ೧೯೩೧ರ ಕಾಲದಲ್ಲೂ ಅದೇ ಬೆಲೆ ಮುಂದುವರಿಯಿತು. ೧೯೨೯–೩೦ರಲ್ಲಿ ಸಂಭವಿಸಿದ ಆರ್ಥಿಕ ಮುಗ್ಗಟ್ಟು ೨೦ನೇ ಶತಮಾನದ ಮೊದಲ ೩೦ ವರ್ಷಗಳಲ್ಲಿದ್ದ ಬೆಲೆಯ ಸ್ಥಿರತೆಯನ್ನು ತಿರುವು ಮುರುವು ಮಾಡಿತು. ಅಲ್ಲದೆ ವ್ಯವಸಾಯೋತ್ಪನ್ನಗಳ ಬೆಲೆ ದುಸ್ಥಿತಿಗಿಳಿಯಿತು. ಕೆಲವು ವಸ್ತುಗಳ ಬೆಲೆಗಳು ಶೇ.೫೦ ರಷ್ಟು ಕಡಿಮೆಯಾಯಿತು. ಮೊದಲೇ ನಿರ್ಧಾರವಾಗಿದ್ದ ಭೂಬಾಡಿಗೆಯನ್ನು ನೀಡಬೇಕಾಗಿದ್ದುದರಿಂದ ಹಿಡುವಳಿದಾರರ ಸ್ಥಿತಿ ದುರ್ಬಲವಾಯಿತು. ದೊಡ್ಡ ಮತ್ತು ಮಧ್ಯಮ ಪ್ರಮಾಣದ ಭೂಮಾಲೀಕರು ತಮ್ಮ ಸರಕುಗಳನ್ನು ಅತೀ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಯಿತು. ಸಣ್ಣ ಭೂಮಾಲೀಕರು ತೊಂದರೆಗೊಳಗಾಗಿ, ತಮ್ಮ ದೈನಂದಿನ ವ್ಯವಹಾರಗಳಿಗಾಗಿ ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಮಾರಿಕೊಳ್ಳಬೇಕಾಯಿತು. ಹಲವರು ಬೇಸಾಯ ಮಾಡುವುದನ್ನೇ ಬಿಟ್ಟರು. ಬೆಲೆ ಕುಸಿತ ಕೇವಲ ವ್ಯವಸಾಯಗಾರರಿಗಷ್ಟೇ ಅಲ್ಲದೆ, ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲೂ ದುಷ್ಪರಿಣಾಮ ಬೀರಿತು. ಅಲ್ಲದೆ ಸರ್ಕಾರವು ವ್ಯವಸಾಯಗಾರರಿಗೆ ಸುಲಭ ದರದಲ್ಲಿ ಸಾಲ ಸೌಲಭ್ಯ ಮತ್ತು ಭೂಕಂದಾಯ ವಸೂಲಿಯಲ್ಲಿ ರಿಯಾಯಿತಿ ಸೌಲಭ್ಯವನ್ನು ನೀಡಬೇಕಾಯಿತು. ಇಂತಹ ಸ್ಥಿತಿ ಸೆಪ್ಟೆಂಬರ್ ೧೯೩೯ರವರೆಗೂ ಮುಂದುವರೆಯಿತು. ಈ ನಡುವೆ ೧೯೩೯ರಲ್ಲಿ ಎರಡನೇ ಜಾಗತಿಕ ಯುದ್ಧ ಆರಂಭವಾಯಿತು. ೧೯೪೦ರಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಹಣದುಬ್ಬರ ಉಂಟಾಯಿತು. ಆಹಾರ ಪದಾರ್ಥಗಳ ಬೇಡಿಕೆ ಮತ್ತು ಬೆಲೆ ಏರತೊಡಗಿತು. ಆಹಾರಧಾನ್ಯಗಳ ಸಂಗ್ರಹಣೆ ಕಡಿಮೆಯಾಯಿತು. ಹಣದುಬ್ಬರದ ಪರಿಣಾಮವಾಗಿ ಸಗಟು ಮತ್ತು ಚಿಲ್ಲರೆ ವ್ಯಾಪಾರಿಗಳು ಹೆಚ್ಚು ಆಹಾರಪದಾರ್ಥಗಳನ್ನು ಸಂಗ್ರಹಿಸದಂತೆ ತಡೆಯುಂಟು ಮಾಡಿತು. ೧೯೩೯–೪೦ರಲ್ಲಿ ಅಕ್ಕಿ ಮತ್ತು ರಾಗಿಯ ಬೆಲೆ ಪಲ್ಲಕ್ಕೆ (೧೦೦ ಸೇರುಗಳಲ್ಲಿ) ಕ್ರಮವಾಗಿ ರೂ.೧೬–೨–೦ ಮತ್ತು ೬–೦–೦ ಇದ್ದದ್ದು, ೧೯೪೪–೪೫ರಲ್ಲಿ ರೂ.೨೫–೦–೦ ಮತ್ತು ರೂ.೧೪–೮–೩ಕ್ಕೆ ಹೆಚ್ಚಳಗೊಂಡಿತು. ಇದು ಎರಡನೇ ಜಾಗತಿಕ ಯುದ್ಧದ ಸಂದರ್ಭವಾಗಿದ್ದು,

ಅದರ ಪರಿಣಾಮವನ್ನು ಆಹಾರ ವಸ್ತುಗಳ ಬೆಲೆಗಳ ಏರಿಕೆಯಲ್ಲಿ ಕಾಣಬಹುದಾಗಿದೆ. ವಿವರಗಳಿಗೆ ಕೋಷ್ಟಕ ೮.೯ ಅನ್ನು ನೋಡಿ.

**ಕೋಷ್ಟಕ ೮.೯ ೧೯೨೩–೨೪ ರಿಂದ ೧೯೪೪–೪೫ರವರೆಗಿನ ಆಹಾರಪದಾರ್ಥಗಳ ಸಗಟುಬೆಲೆ (ಒಂದು ಪಲ್ಲಕ್ಕೆ ೧೦೦ ಸೇರುಗಳು)**

| ವರ್ಷಗಳು | ಅಕ್ಕಿ ಉತ್ತಮ ದರ್ಜೆ | ಅಕ್ಕಿ ಮಧ್ಯಮ ದರ್ಜೆ | ರಾಗಿ | ಜೋಳ | ಕಡಲೆಬೇಳೆ | ಉಪ್ಪು |
|---|---|---|---|---|---|---|
| | ರೂ–ಆಣೆ–ಪೈ | ರೂ–ಆಣೆ–ಪೈ | ರೂ–ಆಣೆ–ಪೈ | ರೂ–ಆಣೆ–ಪೈ | ರೂ–ಆಣೆ–ಪೈ | ರೂ_ಆಣೆ–ಪೈ |
| ೧೯೨೩–೨೪ | ೨೩–೧೦–೦ | ೧೯–೧೨–೦ | ೧೧–೧೨–೦ | ೧೧–೧೪–೦ | ೧೬–೩–೦ | ೧೪–೪–೦ |
| ೧೯೨೪–೨೫ | ೨೩–೮–೦ | ೧೯–೦–೦ | ೧೨–೮–೦ | ೧೨–೮–೦ | ೧೪–೪–೦ | ೧೧–೦–೦ |
| ೧೯೨೫–೨೬ | ೨೫–೮–೦ | ೨೧–೫–೦ | ೧೨–೩–೦ | ೧೩–೯–೦ | ೧೬–೮–೦ | ೮–೧–೦ |
| ೧೯೨೬–೨೭ | ೨೩–೨–೦ | ೧೯–೧೨–೦ | ೧೧–೧೦–೦ | ೧೧–೧೨–೦ | ೧೯–೪–೦ | ೭–೬–೦ |
| ೧೯೨೭–೨೮ | ೨೫–೪–೦ | ೨೦–೧೨–೦ | ೧೧–೧೨–೦ | ೧೦–೮–೦ | ೨೦–೦–೦ | ೭–೧೨–೦ |
| ೧೯೨೮–೨೯ | ೨೨–೪–೦ | ೧೭–೧೨–೦ | ೧೧–೮–೦ | ೧೧–೦–೦ | ೨೦–೪–೦ | ೮–೦–೦ |
| ೧೯೨೯–೩೦ | ೨೧–೪–೦ | ೧೭–೧–೦ | ೧೦–೧೨–೦ | ೧೦–೦–೦ | ೨೧–೦–೦ | ೮–೦–೦ |
| ೧೯೩೦–೩೧ | ೧೮–೧೨–೦ | ೧೪–೦–೦ | ೬–೧೦–೦ | ೬–೫–೦ | ೧೭–೩–೦ | ೭–೧೦–೦ |
| ೧೯೩೧–೩೨ | ೧೩–೧೨–೦ | ೧೨–೦–೦ | ೫–೧೧–೦ | ೫–೧೫–೦ | ೧೧–೩–೦ | ೭–೮–೦ |
| ೧೯೩೨–೩೩ | ೧೧–೯–೦ | ೯–೧೩–೦ | ೫–೭–೦ | ೪–೯–೦ | ೧೧–೧೦–೦ | ೭–೧೪–೦ |
| ೧೯೩೩–೩೪ | ೧೧–೩–೦ | ೯–೧–೦ | ೫–೦–೦ | ೫–೦–೦ | ೧೧–೪–೦ | ೮–೦–೦ |
| ೧೯೩೪–೩೫ | ೧೨–೪–೦ | ೧೨–೦–೦ | ೭–೨–೦ | ೭–೫–೦ | ೧೦–೩–೦ | ೭–೬–೦ |
| ೧೯೩೫–೩೬ | ೧೩–೧–೦ | ೧೦–೧೦–೦ | ೭–೧೦–೦ | ೭–೭–೦ | ೧೦–೮–೦ | ೮–೦–೦ |
| ೧೯೩೬–೩೭ | ೧೩–೦–೦ | ೧೧–೦–೦ | ೫–೧೨–೦ | ೬–೧೨–೦ | ೧೧–೮–೦ | ೮–೨–೦ |
| ೧೯೩೭–೩೮ | ೧೨–೧೨–೦ | ೧೨–೦–೦ | ೫–೮–೦ | ೬–೪–೦ | ೧೦–೦–೦ | ೭–೮–೦ |
| ೧೯೩೮–೩೯ | ೧೨–೧೨–೦ | ೧೧–೪–೦ | ೫–೮–೦ | ೭–೦–೦ | ೧೨–೦–೦ | ೮–೦–೦ |
| ೧೯೩೯–೪೦ | ೧೬–೨–೦ | ೧೧–೧೨–೦ | ೬–೦–೦ | ೮–೦–೦ | ೧೨–೦–೦ | ೮–೦–೦ |
| ೧೯೪೦–೪೧ | ೧೬–೦–೦ | ೧೧–೧೨–೦ | ೬–೯–೦ | ೮–೦–೦ | ೧೨–೦–೦ | ೮–೦–೦ |
| ೧೯೪೧–೪೨ | ೧೮–೮–೦ | ೧೫–೧೩–೦ | ೭–೨–೦ | ೭–೪–೦ | ೧೮–೦–೦ | ೯–೪–೦ |
| ೧೯೪೨–೪೩ | ೨೩–೧೩–೦ | ೧೯–೦–೦ | ೯–೧೨–೦ | ೧೧–೧–೦ | ೨೮–೧೨–೦ | ೧೧–೪–೦ |
| ೧೯೪೩–೪೪ | ೨೫–೦–೦ | ೨೦–೧–೬ | ೧೩–೮–೦ | ೧೪–೧೧–೬ | ೩೨–೧೨–೦ | ೧೧–೧೨–೦ |
| ೧೯೪೪–೪೫ | ೨೫–೦–೦ | ೨೪–೬–೬ | ೧೪–೮–೩ | ೧೪–೧೨–೩ | ೩೩–೦–೦ | ೧೨–೦–೦ |

ಸೂಚನೆ : ೧೯೩೮–೩೯ರಲ್ಲಿ ಮಂಡ್ಯ ಜಿಲ್ಲೆ ಮೈಸೂರು ಜಿಲ್ಲೆಯಿಂದ ವಿಭಜನೆ ಆಯಿತು. ಅಲ್ಲಿಯವರೆಗೆ, ಬೆಲೆಗಳ ಅಧ್ಯಯನಕ್ಕೆ ಎರಡು ಜಿಲ್ಲೆಗಳನ್ನೂ ಆಧಾರವಾಗಿಟ್ಟುಕೊಳ್ಳಲಾಗಿದೆ. ೧೯೩೯–೪೦ ರಿಂದ ೧೯೪೪–೪೫ರವರೆಗೆ ಮಂಡ್ಯ ಜಿಲ್ಲೆಯಲ್ಲಿದ್ದ ಬೆಲೆಗಳನ್ನೂ ಮಾತ್ರ ನೀಡಲಾಗಿದೆ.

ಜಿಲ್ಲೆಯಲ್ಲಿ ೧೯೬೦ರಲ್ಲಿ ಅಕ್ಕಿಯ ಬೆಲೆ ಒಂದು ರೂಪಾಯಿಗೆ ಒಂದೂಕಾಲು ಸೇರು ಇದ್ದರೆ, ರಾಗಿ ಎರಡೂವರೆ

ಸೇರು ಆಗಿತ್ತು. ೧೯೬೪-೬೫ರಲ್ಲಿ ಅಕ್ಕಿ ಒಂದು ಸೇರಿಗೆ ೯೨ ಪೈಸೆಗಳಿಂದ ೯೭ ಪೈಸೆಗಳಿಗೆ ಹೆಚ್ಚಾಯಿತು. ಅದೇ ಅವಧಿಯಲ್ಲಿ ರಾಗಿ ಸೇರಿಗೆ ೯೫ ಪೈಸೆಯಿಂದ ರೂ.೧.೧೦ಕ್ಕೆ ಏರಿ ಅಕ್ಕಿಗಿಂತ ರಾಗಿಯ ಬೆಲೆಯೇ ಅಧಿಕಗೊಂಡಿರುವುದು ಉಲ್ಲೇಖಾರ್ಹವಾಗಿತ್ತು. ಹೆಚ್ಚಿನ ಮಾಹಿತಿಗಾಗಿ ಮುಂದಿನ ಕೋಷ್ಟಕ ೮.೧೦ ಅನ್ನು ನೋಡಿ

**ಕೋಷ್ಟಕ ೮.೧೦ ೧೯೬೪-೬೫ ಮತ್ತು ೧೯೬೫-೬೬ರಲ್ಲಿ ಆಹಾರ ಪದಾರ್ಥಗಳ ಬೆಲೆ (ಒಂದು ಕೆ.ಜಿ.ಗೆ ರೂ.ಗಳಲ್ಲಿ)**

| ಕ್ರ.ಸಂ. | ಆಹಾರ ಪದಾರ್ಥಗಳು | ೧೯೬೪-೬೫ | ೧೯೬೫-೬೬ |
|---|---|---|---|
| | ಸ್ಥಳೀಯ ಉತ್ಪಾದನೆ | ರೂ.ಗಳಲ್ಲಿ | ರೂ.ಗಳಲ್ಲಿ |
| ೧ | ಅಕ್ಕಿ (ಉತ್ತಮ) | ೦.೯೨ | ೦.೯೭ |
| ೨ | ಅಕ್ಕಿ (ಮಧ್ಯಮ) | ೦.೮೬ | ೦.೮೮ |
| ೩ | ಅಕ್ಕಿ (ದಪ್ಪ) | ೦.೭೯ | ೦.೮೪ |
| ೪ | ಕುಸುಬಲ ಅಕ್ಕಿ | ೦.೯೨ | ೦.೯೬ |
| ೫ | ಗೋಧಿ (ಬಿಳಿ) | ೦.೮೦ | ೦.೮೪ |
| ೬ | ಗೋಧಿ (ಕೆಂಪು) | ೦.೭೮ | ೦.೮೦ |
| ೭ | ಜೋಳ (ಬಿಳಿ) | ೦.೭೦ | ೦.೭೨ |
| ೮ | ಜೋಳ (ಕೆಂಪು) | ೦.೬೮ | ೦.೭೦ |
| ೯ | ಮೆಕ್ಕೆಜೋಳ | ೦.೭೦ | ೦.೭೨ |
| ೧೦ | ಸಜ್ಜೆ | ೦.೭೫ | ೦.೭೮ |
| ೧೧ | ರಾಗಿ | ೦.೯೫ | ೧.೧೦ |
| | ಆಮದು ಮಾಡಿಕೊಂಡ ಪದಾರ್ಥಗಳು | | |
| ೧ | ಅಕ್ಕಿ | ೦.೯೦ | ೦.೯೧ |
| ೨ | ದಪ್ಪ ಅಕ್ಕಿ (ಅಮೆರಿಕಾ) | ೦.೮೫ | ೦.೮೬ |
| ೩ | ಗೋಧಿ | ೦.೬೦ | ೦.೬೨ |
| ೪ | ಜೋಳ (ಮದ್ರಾಸ್) | ೦.೮೦ | ೦.೮೨ |
| ೫ | ಮೆಕ್ಕೆಜೋಳ (ಪಂಜಾಬ್) | ೦.೮೦ | ೦.೮೪ |
| ೬ | ಕೆಂಜೋಳ | ೦.೪೦ | ೦.೪೫ |
| ೭ | ಹೋಲ್ ಮಿಲ್ ಅಟ್ಟಾ | ೦.೬೦ | ೦.೬೪ |
| ೮ | ಸಜ್ಜೆ | ೦.೮೦ | ೦.೮೫ |
| ೯ | ಹೊಟ್ಟು | ೦.೩೫ | ೦.೩೬ |
| ೧೦ | ಕಡಲೆಬೇಳೆ | ೧.೫೦ | ೧.೬೦ |

ಮಂಡ್ಯ ಜಿಲ್ಲೆಯಲ್ಲಿ ಅಗತ್ಯ ವಸ್ತುಗಳ ಸಗಟು ಬೆಲೆ ೧೯೮೦ರಲ್ಲಿ ಕ್ವಿಂಟಾಲ್‌ಗೆ ಭತ್ತ (ಮಧ್ಯಮ) ೧೧೩.೮೮

ರೂಪಾಯಿಗಳಾಗಿದ್ದು, ೧೯೯೦ರಲ್ಲಿ ಅದು ೨೫೦.೮೩ರೂ.ಗಳಿಗೂ, ೧೯೯೫ರಲ್ಲಿ ೪೬೨ ರೂ.ಗಳಿಗೂ, ೨೦೦೦ದಲ್ಲಿ ೬೪೭ ರೂ.ಗಳಿಗೂ ಹೆಚ್ಚಳಗೊಂಡಿತು. ಹಾಗೆಯೇ ಅಕ್ಕಿ(ಮಧ್ಯಮ) ೧೯೮೦ರಲ್ಲಿ ೨೦೨.೮೫ ರೂ.ಗಳಾಗಿದ್ದು, ೧೯೯೦ರಲ್ಲಿ ಅದು ೫೨೮.೩೩ ರೂ.ಗಳಿಗೂ, ೧೯೯೪ರಲ್ಲಿ ೮೯೯.೧೭ ರೂ.ಗಳಿಗೂ, ೨೦೦೦ದಲ್ಲಿ ೧,೪೬೨.೫೦ರೂ.ಗಳಿಗೂ ಹೆಚ್ಚಳಗೊಂಡಿತು.

ರಾಗಿಯ ಬೆಲೆ ೧೯೮೦ರಲ್ಲಿ ೧೧೦.೩೩ ರೂ.ಗಳಾಗಿದ್ದು, ೧೯೯೦ರಲ್ಲಿ ಅದು ೨೧೮.೭೫ ರೂ.ಗಳಿಗೂ, ೧೯೯೫ರಲ್ಲಿ ೩೯೯.೫೦ ರೂ.ಗಳಿಗೂ, ೨೦೦೦ದಲ್ಲಿ ೬೬೨.೫೮ರೂ.ಗಳಿಗೂ ಹೆಚ್ಚಳಗೊಂಡಿದ್ದನ್ನು ಕಾಣಬಹುದು.

**ಕೋಷ್ಟಕ ೮.೧೧ ಜಿಲ್ಲೆಯಲ್ಲಿ ೧೯೮೦ ರಿಂದ ೨೦೦೦ದವರೆಗಿನ ಅಗತ್ಯ ವಸ್ತುಗಳ ಸಗಟು ಬೆಲೆಯನ್ನು ನೀಡಲಾಗಿದೆ (ಕ್ವಿಂಟಾಲ್‌ಗೆ)**

| | ೧೯೮೦ | ೧೯೯೦ | ೧೯೯೫ | ೧೯೯೬ | ೧೯೯೭ | ೧೯೯೮ | ೧೯೯೯ | ೨೦೦೦ |
|---|---|---|---|---|---|---|---|---|
| ೧. ಭತ್ತ (ಮಧ್ಯಮ) | ೧೧೩.೮೮ | ೨೫೦.೮೩ | ೪೬೨.೦೦ | ೪೮೪.೪೩ | ೫೧೮.೭೫ | ೫೦೫.೧೭ | ೬೨೫.೦೦ | ೬೪೭.೦೦ |
| ೨. ಅಕ್ಕಿ (ಮಧ್ಯಮ) | ೨೦೨.೮೫ | ೫೨೮.೩೩ | ೮೯೬.೦೦ | ೮೬೩.೮೬ | ೧,೦೦೯.೭೭ | ೧,೨೫೪.೪೨ | ೧೪೨೯.೧೭ | ೧,೪೬೨.೫೦ |
| ೩.ಜೋಳ (ಬಿಳಿ) | ೧೦೫.೫೩ | ೨೧೬.೪೬ | ೪೩೩.೫೦ | ೪೩೨.೧೭ | – | – | – | ೬೧೭.೧೭ |
| ೪. ರಾಗಿ | ೧೧೦.೩೩ | ೨೧೮.೭೫ | ೩೯೯.೫೦ | ೩೯೧.೬೭ | ೪೪೭.೦೫ | ೪೯೨.೨೫ | ೫೪೭.೩೩ | ೬೬೨.೫೮ |
| ೫. ಹುರುಳಿ | ೧೩೮.೨೯ | ೪೩೨.೪೬ | ೫೫೯.೦೦ | ೫೬೭.೫೦ | ೮೧೦.೯೧ | – | ೮೬೦.೯೨ | ೮೫೭.೫೮ |
| ೬. ನೆಲಗಡಲೆ (ಕಡಲೆಕಾಯಿ) | – | – | ೧,೨೮೧.೦೦ | ೧,೨೪೧.೬೭ | ೨೧೮೩.೩೩ | ೧೫೪೭.೭೫ | ೧,೪೨೫.೪೨ | ೧,೬೦೮.೩೩ |
| ೭.ಒಣಮೆಣಸಿನ ಕಾಯಿ | – | ೧,೮೯೨.೭೫ | ೪,೪೫೫.೦೦ | ೫,೪೧೨.೫೦ | ೭,೪೯೫.೮೩ | ೫,೮೩೫.೩೩ | ೬,೦೮೫.೪೨ | ೫,೨೫೧.೯೨ |
| ೮. ಈರುಳ್ಳಿ | ೭೦.೦೦ | ೨೭೬.೬೭ | ೨೫೮.೫೦ | ೩೬೮.೧೩ | ೪೭೩.೭೫ | ೧೪೭೦.೦೦ | ೫೩೩.೩೩ | ೪೫೭.೬೭ |
| ೯. ಆಲೂಗಡ್ಡೆ | ೧೫೨.೫೦ | ೩೦೮.೫೮ | ೩೫೪.೫೦ | ೪೨೦.೦೦ | ೫೪೮.೩೩ | ೬೦೭.೫೦ | ೪೭೨.೦೦ | ೪೧೧.೪೭ |
| ೧೦. ತೆಂಗಿನ ಕಾಯಿ | ೧,೦೫೮.೩೩ | ೨೬೫೨.೨೭ | ೩೬೦೦.೦೦ | ೩,೬೬೬.೬೭ | – | ೪,೯೮೯.೫೮ | ೫,೨೯೮.೭೫ | ೪,೫೪೪.೧೭ |
| ೧೧. ಸಜ್ಜೆ | – | – | ೩೮೭.೫೦ | ೩೭೯.೧೭ | – | ೪೭೨.೦೦ | ೫೧೦.೦೮ | ೫೯೮.೩೩ |
| ೧೨. ಗೋಧಿ (ಬಿಳಿ) | ೧೯೯.೩೦ | – | – | – | ೧೦೦೪.೦೦ | – | – | – |
| ೧೩. ಹುಣಸೆಹಣ್ಣು | ೭೦೦.೦೦ | ೮೨೭.೨೯ | ೧,೬೧೦.೦೦ | ೧,೯೦೬.೨೫ | ೨೦೭೦.೦೦ | ೨೪೫೬.೫೦ | ೩೪೪೧.೬೭ | ೨,೮೨೨.೯೨ |

ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

ಜಿಲ್ಲೆಯಲ್ಲಿ ೧೯೮೦ರಿಂದ ೨೦೦೦ರವರೆಗಿನ ಅಗತ್ಯ ವಸ್ತುಗಳ ಚಿಲ್ಲರೆ ಬೆಲೆಗಳಲ್ಲಿ ಕಂಡು ಬಂದ ವ್ಯತ್ಯಾಸಗಳನ್ನು ಕೋಷ್ಟಕ ೮.೧೨ ರಲ್ಲಿ ನೀಡಿದೆ.

**ಕೋಷ್ಟಕ ೮.೧೨**

| | ೧೯೮೦ | ೧೯೯೦ | ೧೯೯೫ | ೧೯೯೬ | ೧೯೯೭ | ೧೯೯೮ | ೧೯೯೯ | ೨೦೦೦ |
|---|---|---|---|---|---|---|---|---|
| ೧. ಅಕ್ಕಿ (ಮಧ್ಯಮ) | ೨.೨೧ | ೫.೫೧ | ೯.೬೫ | ೯.೪೫ | ೧೧.೫೦ | ೧೩.೯೨ | ೧೫.೪೨ | ೧೫.೫೦ |
| ೨. ಜೋಳ (ಬಿಳಿ) | ೧.೧೪ | ೨.೩೭ | ೫.೨೫ | ೫.೦೩ | ೮.೧೭ | ೬.೬೦ | – | ೮.೭೭ |
| ೩. ರಾಗಿ | ೧.೨೬ | ೨.೪೦ | ೪.೪೮ | ೪.೫೧ | ೫.೦೦ | ೫.೮೩ | ೬.೪೮ | ೭.೨೫ |
| ೪. ಹುರುಳಿ | ೧.೫೦ | ೪.೬೨ | ೬.೬೫ | ೮.೧೩ | ೮.೮೯ | – | ೯.೦೬ | ೯.೭೧ |
| ೫. ನೆಲಗಡಲೆ (ಕಡಲೆಕಾಯಿ) | – | ೭.೮೨ | ೧೫.೮೦ | ೧೯.೬೭ | | ೧೭.೫೦ | ೨೦.೨೧ | – |
| ೬. ಒಣಮೆಣಸಿನ ಕಾಯಿ | ೮.೩೦ | ೨೦.೫೨ | ೪೮.೪೦ | ೫೮.೩೬ | ೨೬.೭೪ | ೬೬.೧೫ | ೬೮.೨೫ | ೬೨.೩೩ |
| ೭. ಈರುಳ್ಳಿ | ೧.೦೭ | ೩.೨೯ | ೩.೫೫ | ೫.೨೧ | ೫.೩೬ | ೧೪.೯೬ | ೭.೨೭ | ೬.೧೪ |
| ೮. ಆಲೂಗಡ್ಡೆ | ೧.೯೪ | ೩.೪೨ | ೫.೨೦ | ೫.೫೮ | ೬.೨೩ | ೯.೭೫ | ೬.೬೬ | ೬.೩೩ |
| ೯. ತೆಂಗಿನಕಾಯಿ (ಒಂದಕ್ಕೆ) | ೧.೧೫ | ೩.೦೯ | ೪.೪೫ | ೪.೪೩ | ೬.೦೫ | ೬.೨೨ | ೭.೦೨ | ೬.೫೨ |
| ೧೦. ಸಜ್ಜೆ | – | – | ೪.೯೦ | ೪.೭೦ | – | ೬.೬೯ | ೭.೦೮ | ೭.೯೬ |
| ೧೧. ಗೋದಿ | ೨.೧೦ | – | – | ೯.೭೯ | ೧೦.೭೯ | – | – | – |
| ೧೨. ಹುಣಸೆಹಣ್ಣು | ೫.೫೦ | ೮.೭೫ | ೧೮.೪೦ | ೨೨.೧೫ | ೨೧.೩೨ | ೨೬.೯೫ | ೩೬.೫೦ | ೨೯.೦೦ |
| ೧೩. ಹರಳು | – | – | ೧೨.೨೦ | ೧೨.೦೦ | ೩೧.೫೦ | ೧೨.೧೪ | – | – |

ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.

## ಕೂಲಿ

ಬಹು ಹಿಂದಿನಿಂದಲೂ ಸಮಷ್ಟಿ ಬದುಕು ಈ ಮಣ್ಣಿನ ಗುಣವಾಗಿದ್ದು, ದುಡಿಮೆ, ಉತ್ಪಾದನೆಗಳಲ್ಲಿ ಸಹಕಾರ ತತ್ವ ರೂಢಿಯಲ್ಲಿದ್ದು, ಕೃಷಿ ಕ್ಷೇತ್ರದಲ್ಲಿ ಸಹಕಾರಿ ತತ್ವ ಪ್ರಮುಖ ಲಕ್ಷಣವಾಗಿತ್ತು. ವಸ್ತು ವಿನಿಮಯ ಪದ್ಧತಿಯಲ್ಲಿ ಜನ ಪರಸ್ಪರ ಸಹಕಾರದೊಂದಿಗೆ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿದ್ದರು. ದುಡಿಯುವ ವರ್ಗದ ಜನರಿಗೂ ಅವರ ಶ್ರಮಕ್ಕೆ ಪ್ರತಿಫಲವಾಗಿ ಕೂಲಿಯನ್ನು ವಸ್ತುವಿನ ರೂಪದಲ್ಲಿ ನೀಡುವ ಪದ್ಧತಿ ಈಗಲೂ ಹಲವೆಡೆ ರೂಢಿಯಲ್ಲಿದೆ. ಕೈಗಾರೀಕಿಕರಣದ ನಂತರ ಹಣಕಾಸಿನ ಚಲಾವಣೆಯಿಂದಾಗಿ ನಗದು ರೂಪದಲ್ಲಿ ಕೂಲಿ ನೀಡುವ ಪದ್ಧತಿ ಆರಂಭವಾಯಿತು. ಜಿಲ್ಲೆಗೆ ಸಂಬಂಧಿಸಿದಂತೆ ೧೯೫೬ಕ್ಕೆ ಪೂರ್ವದಲ್ಲಿ ಮೈಸೂರು ಜಿಲ್ಲೆಯಲ್ಲಿ ಚಾಲ್ತಿಯಲ್ಲಿದ್ದ ಕೂಲಿ ದರವನ್ನೇ ಪರಿಗಣಿಸಲಾಗಿದೆ.

೧೮೭೬ರಲ್ಲಿ ಒಂದು ದಿನಕ್ಕೆ ಕುಶಲ ಕೆಲಸಗಾರರಿಗೆ ೦–೪–೦ ರಿಂದ ೧–೦–೦ ಗೂ, ಕುಶಲೇತರ ಕೆಲಸಗಾರರಿಗೆ ೦–೨–೦ ಯಿಂದ ೦–೮–೦ ಆಣೆಯನ್ನು ಮತ್ತು ಎತ್ತಿನ ಗಾಡಿಯವರಿಗೆ ೦–೮–೦ ಯಿಂದ ೧–೪–೦ ವರೆಗೆ ಕೂಲಿ ನೀಡಲಾಗುತ್ತಿತ್ತು. ಇದು ೧೯೦೨ರಲ್ಲಿ ಕುಶಲ ಕೆಲಸಗಾರರಿಗೆ ೦–೮–೦ ಯಿಂದ ೧–೪–೦; ಕುಶಲೇತರರಿಗೆ ೦–೧–೦ ಯಿಂದ ೦–೮–೦ ಹಾಗೂ ಎತ್ತಿನ ಗಾಡಿಯ ಬಾಡಿಗೆದಾರರಿಗೆ ೦–೧೨–೦ ಯಿಂದ ೧–೮–೦ ಆಗಿತ್ತು. ೧೮೯೦ರಲ್ಲಿ ಸಂಭವಿಸಿದ ಪ್ಲೇಗು ರೋಗ, ವ್ಯವಸಾಯದ ವಿಸ್ತರಣೆ, ವ್ಯವಸಾಯ ಕಾರ್ಮಿಕರಿಗೆ ತಮ್ಮ ಹಳ್ಳಿಗಳಲ್ಲಿ ದೊರಕಿದ ವ್ಯವಸಾಯೇತರ ಉದ್ಯೋಗ, ಸ್ಥಳೀಯವಾಗಿ ಕಾರ್ಮಿಕರ ವಲಸೆ, ಕಾರ್ಮಿಕರಿಗೆ ನೆರೆಹೊರೆಯ ಜಿಲ್ಲೆಗಳಿಂದ ಇದ್ದ ಬೇಡಿಕೆ ಮುಂತಾದವು ಕೂಲಿಯದರ ಹೆಚ್ಚಳಕ್ಕೆ ಬಹುಮಟ್ಟಿಗೆ ಕಾರಣಗಳಾಗಿದ್ದವು.

**ಕೋಷ್ಟಕ ೮.೧೩ ಮಂಡ್ಯ ಜಿಲ್ಲೆಯ ವ್ಯಾಪ್ತಿಗೊಳಪಟ್ಟಿದ್ದ ಆರು ತಾಲೂಕುಗಳಲ್ಲಿ ೧೯೧೭ರಲ್ಲಿದ್ದ ದಿನಗೂಲಿಯ ದರಗಳ ವಿವರ**

| ತಾಲೂಕುಗಳು | ಇಟ್ಟಿಗೆ ಹಾಕುವವರು | ಮರಗೆಲಸ/ಮನೆ ಕಟ್ಟುವವರು | ಗಾರೆ ಕೆಲಸಗಾರರು | ಕುಶಲೇತರ ಕೆಲಸಗಾರರು |
|---|---|---|---|---|
| | ರೂ–ಆಣೆ–ಪೈ | ರೂ–ಆಣೆ–ಪೈ | ರೂ–ಆಣೆ–ಪೈ | ರೂ–ಆಣೆ–ಪೈ |
| ಶ್ರೀರಂಗಪಟ್ಟಣ | ೦–೧೨–೦ | ೦–೧೦–೦ | ೧–೦–೦ | ೦–೬–೦ |
| ಪಾಂಡವಪುರ | ೦–೧೨–೦ | ೦–೧೦–೦ | ೧–೦–೦ | ೦–೫–೦ |
| ಮಂಡ್ಯ | ೦–೧೨–೦ | ೦–೮–೦ | ೦–೧೨–೦ | ೦–೪–೦ |
| ನಾಗಮಂಗಲ | ೦–೧೦–೦ | ೦–೧೨–೦ | ೦–೧೦–೦ | ೦–೩–೦ |
| ಕೆ.ಆರ್.ಪೇಟೆ | ೦–೧೨–೦ | ೦–೧೨–೦ | ೦–೧೨–೦ | ೦–೬–೦ |
| ಮಳವಳ್ಳಿ | ೦–೧೦–೦ | ೦–೮–೦ | ೧–೦–೦ | ೦–೫–೦ |

೧೯೩೪ರಲ್ಲಿ ದಿನವೊಂದಕ್ಕೆ ಕುಶಲ ಕೆಲಸಗಾರರ ಕೂಲಿಯು ಎಂಟಾಣೆಯಿಂದ ನಾಲ್ಕು ರೂಪಾಯಿ, ಕುಶಲೇತರ ಕೆಲಸಗಾರರಿಗೆ ಮೂರಾಣೆಯಿಂದ ಒಂದು ರೂಪಾಯಿ ಮತ್ತು ಎತ್ತಿನಗಾಡಿ ಬಾಡಿಗೆ ಒಂದು ರೂಪಾಯಿಂದ ೫ ರೂಪಾಯಿಗಳಿಗೆ ಏರಿತು. ಎರಡನೇ ಮಹಾಯುದ್ಧದ ನಂತರ ಕೂಲಿಯ ದರವು ಎಲ್ಲಾ ತಾಲೂಕುಗಳಲ್ಲಿ ಸಮಾನ ರೂಪದಲ್ಲಿತ್ತು. ೧೯೫೧ರಲ್ಲಿ ಮರಗೆಲಸ ಮಾಡುವವರಿಗೆ ರೂ.೪, ಕಮ್ಮಾರರಿಗೆ ರೂ.೪, ಚಮ್ಮಾರರಿಗೆ ರೂ.೩ ಆಗಿದ್ದರೆ, ವ್ಯವಸಾಯ ಕಾರ್ಮಿಕರಿಗೆ ೧–೮–೦ ಹಾಗೂ ಪಶುಪಾಲಕರಿಗೆ ರೂ.೧.೦೦ ಸಿಗುತ್ತಿತ್ತು.

**ಕೋಷ್ಟಕ ೮.೧೪ ಜಿಲ್ಲೆಯಲ್ಲಿ ೧೯೬೫–೬೬ರಲ್ಲಿ ವಿವಿಧ ತಾಲೂಕುಗಳಲ್ಲಿ ನೀಡಲ್ಪಡುತ್ತಿದ್ದ ಕೂಲಿಯ ದರ**

| | | ಕುಶಲ ಕೆಲಸಗಾರರು | | | ಇತರೆ ಕೆಲಸಗಾರರು | |
|---|---|---|---|---|---|---|
| | | ಮರಗೆಲಸದವರು | ಕಮ್ಮಾರರು | ಚಮ್ಮಾರರು | ವ್ಯವಸಾಯ ಕಾರ್ಮಿಕರು | ಪಶುಪಾಲಕರು |
| | | ರೂ. ಪೈ. | ರೂ. ಪೈ. | ರೂ. ಪೈ. | ರೂ. ಪೈ. | ರೂ. ಪೈ. |
| ೧ | ಮಂಡ್ಯ | ೬.೫೦ | ೬.೦೦ | ೪.೫೦ | ೨.೦೦ | ೨.೦೦ |
| ೨ | ಮದ್ದೂರು | ೬.೫೦ | ೫.೦೦ | ೩.೫೦ | ೨.೦೦ | ೧.೭೫ |
| ೩ | ಮಳವಳ್ಳಿ | ೬.೦೦ | ೫.೦೦ | ೨.೦೦ | ೧.೨೫ | ೧.೫೦ |
| ೪ | ಪಾಂಡವಪುರ | ೫.೦೦ | ೪.೦೦ | ೧.೭೫ | ೧.೨೫ | ೧.೫೦ |
| ೫ | ಕೆ.ಆರ್.ಪೇಟೆ | ೫.೦೦ | ೪.೨೫ | ೨.೦೦ | ೧.೨೫ | ೧.೨೫ |
| ೬ | ನಾಗಮಂಗಲ | ೫.೨೫ | ೪.೦೦ | ೨.೫೦ | ೧.೫೦ | ೧.೨೫ |
| ೭ | ಶ್ರೀರಂಗಪಟ್ಟಣ | ೬.೦೦ | ೪.೨೫ | ೩.೦೦ | ೧.೫೦ | ೧.೨೫ |

ಕುಶಲ ಕಾರ್ಮಿಕರಾದ ಬಡಗಿಗಳಿಗೆ ೧೯೬೭ರಲ್ಲಿ ದಿನವೊಂದಕ್ಕೆ ನೀಡಲ್ಪಡುತ್ತಿದ ರೂ.೪.೬೦ ಕೂಲಿ ದರವು, ೧೯೭೦ರಲ್ಲಿ ರೂ.೪.೮೯ಕ್ಕೆ, ೧೯೯೦ರಲ್ಲಿ ರೂ.೨೮.೦೯ಕ್ಕೆ, ೧೯೯೪ರಲ್ಲಿ ರೂ.೪೭.೧೪ಕ್ಕೆ, ಮತ್ತು ೨೦೦೧ರಲ್ಲಿ ರೂ. ೧೦೦.೦೦ಕ್ಕೆ ಹೆಚ್ಚಳಗೊಂಡಿತು. ಕಮ್ಮಾರರಿಗೆ ದಿನಕ್ಕೆ ೧೯೬೭ರಲ್ಲಿ ರೂ.೪.೫೧, ೧೯೭೦ರಲ್ಲಿ ರೂ.೫.೦೫, ೧೯೯೦ರಲ್ಲಿ ರೂ.೨೫.೦೧, ೧೯೯೪ರಲ್ಲಿ ರೂ. ೩೬.೫೪, ೨೦೦೧ರಲ್ಲಿ ರೂ.೮೦.೦೦ ಕೂಲಿ ನೀಡಲ್ಪಡುತ್ತಿತ್ತು. ಕೂಲಿ ದರದಲ್ಲಿನ ಈ ಗಮನಾರ್ಹ ಬದಲಾವಣೆಗೆ ಹಣದುಬ್ಬರ, ಬೆಲೆ ಏರಿಕೆ ಮುಂತಾದವು ಪ್ರಮುಖ ಕಾರಣಗಳಾಗಿವೆ. ವಿವರಗಳಿಗೆ ಕೋಷ್ಟಕ ೮.೧೫ನ್ನು ನೋಡಿ.

## ಉದ್ಯೋಗ

ಜಿಲ್ಲೆಯಲ್ಲಿ ೧೯೯೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆಯಲ್ಲಿ ೬,೩೫,೫೯೩ ಮಂದಿ ಮುಖ್ಯ ಕೆಲಸಗಾರರಿದ್ದು, ಇವರಲ್ಲಿ ೪,೯೬,೯೧೭ ಮಂದಿ (ಶೇ.೭೮.೧೮) ಕೃಷಿ ಕ್ಷೇತ್ರದಲ್ಲಿ ಉದ್ಯೋಗಿಗಳಾಗಿದ್ದರೂ, ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ಅರೆ ಉದ್ಯೋಗ (ಅಂಡರ್ ಎಂಪ್ಲಾಯ್ಮೆಂಟ್) ರೂಪದಲ್ಲಿ ನಿರುದ್ಯೋಗವು ಈ ಕ್ಷೇತ್ರದಲ್ಲಿ ಕಾಣಿಸುತ್ತದೆ. ಈ ಅರೆ ಉದ್ಯೋಗದಲ್ಲಿ ಎರಡು ಬಗೆ, ದೃಶ್ಯ ಮತ್ತು ಅದೃಶ್ಯ. ದೃಶ್ಯ ಅಥವಾ ಕಾಣುವಂತಹ ಅರೆ ಉದ್ಯೋಗವನ್ನು ಕಡಿಮೆ ಅವಧಿಯ ಕೆಲಸದ ರೂಪದಲ್ಲಿ ಗುರುತಿಸಬಹುದು. ಆದರೆ ಕಾಣದೇ ಇರುವ ಅರೆ ಉದ್ಯೋಗವು ಕಡಿಮೆ ಆದಾಯ, ಕೌಶಲ್ಯದ ಅಪೂರ್ಣ ಉಪಯೋಗ ಅಥವಾ ಕಡಿಮೆ ಉತ್ಪಾದನಾ ಶಕ್ತಿ ಇರುವ ಘಟಕಗಳಲ್ಲಡಗಿರುವುದು.

ಈಗಾಗಲೇ ತಿಳಿಸಿರುವಂತೆ ಮುಖ್ಯ ಕೆಲಸಗಾರರಲ್ಲಿ ಕೃಷಿಯಲ್ಲಿ ತೊಡಗಿದ ಕೆಲಸಗಾರರ ಪ್ರಮಾಣ ೧೯೯೧ರ ಜನಗಣತಿಯಂತೆ ಶೇ. ೭೮.೧೮ ರಷ್ಟಿದ್ದರೆ, ೧೯೬೧, ೧೯೭೧ ಹಾಗೂ ೧೯೮೧ರಲ್ಲಿ ಅನುಕ್ರಮವಾಗಿ ಶೇ. ೮೩.೮೭, ಶೇ೮೧.೧೧ ಹಾಗೂ ಶೇ.೮೦.೬೦ ರಷ್ಟಿತ್ತು. ಜಿಲ್ಲೆಯಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳೇ ಅಲ್ಲದೇ ಇತರ ಕಸುಬುಗಳಾದ ವ್ಯಾಪಾರ ಮತ್ತು ವಾಣಿಜ್ಯ , ಸಾರಿಗೆ, ವೃತ್ತಿ ಮತ್ತು ಇತರ ಸೇವೆಗಳೂ ಉದ್ಯೋಗವನ್ನೊದಗಿಸಿವೆ. ೧೯೯೧ ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ ೬,೩೫,೫೯೩ (ಶೇ ೩೮.೬೫) ಮುಖ್ಯ ಕೆಲಸಗಾರರು, ೯,೧೨,೬೧೧(ಶೇ ೫೫. ೫೦) ಕೆಲಸಗಾರರಲ್ಲದವರು ಹಾಗೂ ೯೬,೧೭೦ (ಶೇ. ೫.೯೫) ಸೀಮಾಂತ (ಮಾರ್ಜಿನಲ್) ಕೆಲಸಗಾರರಿದ್ದರು. ಜಿಲ್ಲೆಯ ಮುಖ್ಯ ಕೆಲಸಗಾರರ ಪೈಕಿ ೩,೩೮,೨೬೧ (ಶೇ. ೫೩.೨೨) ಜನರು ವ್ಯವಸಾಯಗಾರರಾಗಿಯೂ, ೧,೫೮,೬೫೫ (ಶೇ. ೨೪.೯೬)ಜನರು ವ್ಯವಸಾಯ ಕಾರ್ಮಿಕರಾಗಿಯೂ, ೧೬,೪೪೧(ಶೇ.೨.೬೫)ಜನರು ಜಾನುವಾರು, ಅರಣ್ಯ, ಮೀನುಗಾರಿಕೆ, ಬೇಟೆ, ಪ್ಲಾಂಟೇಶನ್, ಹಣ್ಣಿನತೋಟ ಹಾಗೂ ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲೂ, ೩,೪೩೬ (ಶೇ.೦.೫೪)ಜನರು ಗಣಿಗಾರಿಕೆಯಲ್ಲೂ, ೨೮,೫೦೮ (ಶೇ.೪.೪೮)ಜನರು ಕೈಗಾರಿಕೆಗಳಲ್ಲೂ, ೧೦,೦೭೧ (ಶೇ.೧.೫೮)ಜನರು ನಿರ್ಮಾಣದಲ್ಲೂ, ೩೩,೩೮(ಶೇ. ೫.೩೫) ಜನರು ವ್ಯಾಪಾರ ಹಾಗೂ ವಾಣಿಜ್ಯದಲ್ಲೂ, ೭,೫೨೩ (ಶೇ.೧.೧೮)ಜನರು ಸಾರಿಗೆ, ಸಂಗ್ರಹಣೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲೂ ಹಾಗೂ ೩೮,೯೦೮ (ಶೇ.೬.೧೨)ಜನರು ಇತರೆ ಸೇವೆಗಳಲ್ಲೂ ಕಾರ್ಯನಿರ್ವಹಿಸುತ್ತಿದ್ದರು. (ಆಧಾರ: ಜಿಲ್ಲಾ ಜನಗಣತಿ ಕೈಪಿಡಿ, ಮಂಡ್ಯ ಪುಟ ಸಂ.೪೪.)

ಉದ್ಯೋಗಾವಕಾಶಗಳನ್ನೊದಗಿಸುವುದು ಭಾರತದ ಪಂಚವಾರ್ಷಿಕ ಯೋಜನೆಗಳ ಮುಖ್ಯ ಧ್ಯೇಯಗಳಲ್ಲಿ ಒಂದು. ಈ ದಿಸೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಕೈಗಾರಿಕಾ ತರಬೇತಿ ಸಂಸ್ಥೆಗಳು, ಮುಖ್ಯ ಪಾತ್ರವಹಿಸುತ್ತವೆ. ಉದ್ಯೋಗ ವಿನಿಮಯ ಕೇಂದ್ರಗಳು ನಿರುದ್ಯೋಗಿಗಳಿಗೆ ಉದ್ಯೋಗವನ್ನೂ ಮಾಲೀಕರಿಗೆ ಒಳ್ಳೆಯ

**ಕೋಷ್ಟಕ ೮.೧೫ ೧೯೭೦ ರಿಂದ ೨೦೦೧ರವರೆಗೆ ಜಿಲ್ಲೆಯ ಕುಶಲಕರ್ಮಿಗಳು ಮತ್ತು ಕೃಷಿ ಕಾರ್ಮಿಕರ ದಿನಗೂಲಿಯ ವಿವರ (ರೂ.ಗಳಲ್ಲಿ)**

| ವರ್ಷಗಳು | ಕುಶಲ ಕಾರ್ಮಿಕರು | | | | ಕುಶಲರಹಿತ ಕಾರ್ಮಿಕರು | | | | | | | | | | | |
|---|---|---|---|---|---|---|---|---|---|---|---|---|---|---|---|---|
| | ಬಡಗಿ ಕೆಲಸಗಾರರು | ಕಮ್ಮಾರರು | ಮೋಚಿಗಳು | | ಖುಷ್ಕಿ ಭೂಮಿ ಕಾರ್ಮಿಕರು | | | | ತರಿ ಭೂಮಿ ಕಾರ್ಮಿಕರು | | | | ಬಾಗಾಯ್ತು ಕಾರ್ಮಿಕರು | | | |
| | | | | | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ | ಎ | ಬಿ | ಸಿ | ಡಿ |
| ೧೯೭೦ | ೪.೮೯ | ೫.೦೫ | ೩.೪೬ | | – | – | – | – | – | – | – | – | – | – | – | – |
| ೧೯೮೦ | – | – | – | | ೫.೭೭ | ೫.೨೧ | ೭.೫೦ | ೭.೯೨ | ೬.೦೩ | ೫.೪೮ | – | ೭.೧೭ | ೫.೭೨ | ೫.೫೧ | ೨.೦೦ | ೬.೮೭ |
| ೧೯೯೦ | ೨೯.೦೯ | ೨೫.೦೧ | ೧೩.೨೧ | | ೧೮.೮೧ | ೧೮.೭೯ | ೧೫.೦೫ | ೨೩.೩೫ | ೧೯.೯೩ | ೧೫.೫೨ | ೧೨.೫೦ | ೧೯.೯೪ | ೧೭.೩೩ | ೧೭.೬೭ | ೧೫.೦೦ | ೨೧.೬೧ |
| ೧೯೯೫ | ೪೭.೦೮ | ೩೭.೨೦ | ೩೭.೯೭ | | ೪೦.೧೬ | ೩೪.೮೬ | ೩೮.೫೪ | – | ೪೪.೨೦ | ೪೨.೬೫ | – | – | – | – | – | ೪೯.೦೪ |
| ೧೯೯೯ | ೬೯.೦೫ | ೬೩.೨೧ | ೬೦.೪೨ | ಪು | ೫೭.೮೦ | ೫೧.೧೧ | ೨೦.೦೦ | ೬೦.೦೦ | ೫೫.೨೧ | ೫೫.೫೬ | ೨೨.೦೦ | ೬೦.೦೦ | ೬೦.೦೦ | ೬೦.೦೦ | ೨೫.೦೦ | ೫೫.೪೮ |
| | | | | ಮ | ೩೬.೨೫ | ೩೨.೭೭ | – | ೩೫.೦೦ | ೩೬.೪೩ | ೩೬.೫೮ | – | ೩೬.೨೫ | – | ೩೫.೦೦ | – | ೩೫.೨೫ |
| ೨೦೦೦ | ೮೫.೦೦ | ೭೫.೦೦ | ೭೦.೦೦ | ಪು | ೬೦.೦೦ | ೬೦.೦೦ | – | ೬೦.೦೦ | ೫೯.೫೮ | ೬೦.೦೦ | – | ೬೦.೦೦ | ೬೦.೦೦ | ೬೦.೦೦ | ೬೦.೦೦ | ೫೯.೪೪ |
| | | | | ಮ | ೩೫.೦೦ | ೩೫.೦೦ | – | ೩೫.೦೦ | ೩೫.೦೦ | ೩೮.೬೧ | – | ೩೫.೨೧ | ೩೫.೦೦ | ೩೫.೦೦ | – | ೩೫.೦೦ |
| ೨೦೦೧ | ೧೦೦.೦೦ | ೮೦.೦೦ | ೭೦.೦೦ | ಪು | ೮೩.೭೩ | ೫೩.೯೪ | ೬೦.೦೦ | ೫೭.೫೦ | ೮೧.೧೫ | ೫೫.೬೯ | – | ೫೭.೮೫ | ೮೫.೧೩ | ೫೩.೯೬ | – | ೫೭.೨೫ |
| | | | | ಮ | ೩೮.೩೩ | ೩೩.೩೩ | ೪೦.೦೦ | ೩೩.೩೩ | ೪೦.೦೦ | ೩೬.೧೧ | – | ೩೭.೫೦ | – | ೩೨.೭೩ | – | ೩೭.೫೦ |

ಆಧಾರ : ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು

ಸೂಚನೆ : ಪು : ಪುರುಷ, ಮ: ಮಹಿಳೆ, ೧೯೯೮ರವರೆಗೆ ಪುರುಷರಿಗೆ ನೀಡುತ್ತಿದ್ದ ಕೂಲಿಯನ್ನು ಮಾತ್ರ ನೀಡಲಾಗಿದೆ. ೧೯೯೯ರ ನಂತರ ಕುಶಲರಹಿತ ಕಾರ್ಮಿಕರಿಗೆ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಕೂಲಿ ವಿವರಗಳನ್ನು ನೀಡಲಾಗಿದೆ.

ಎ – ಉಳುಮೆ ಎತ್ತುಗಳ ಸಮೇತ ಆಳು, ಅಗೆಯುವುದು, ಭೂಮಿ ಸಮ ಮಾಡುವುದು, ಬಿತ್ತನೆ, ಒಣ ಬೇಸಾಯ, ನೀರು ಹಾಕುವುದು ಮತ್ತು ಕಳೆ ತೆಗೆಯುವುದು.

ಬಿ – ಗೊಬ್ಬರ ಹಾಕುವುದು, ನಾಟಿ ಹಾಕುವುದು, ಕಳೆ ತೆಗೆಯುವುದು, ಕೊಯ್ಯುವುದು, ತೂರುವುದು, ಕಟಾವು ಕಾಳು ಬಿಡಿಸುವುದು ಮತ್ತು ಹತ್ತಿ ಬಿಡಿಸುವುದು.

ಸಿ – ದನ, ಕುರಿ, ಆಡು ಮೇಯಿಸುವುದು

ಡಿ – ತೆಂಗಿನಕಾಯಿ ಕೀಳುವುದು, ತೆಂಗಿನನಾರು ಬಿಡಿಸುವುದು, ತೆಂಗು ಮತ್ತು ಅಡಿಕೆ ತೋಟದಲ್ಲಿ ಸ್ವಚ್ಛ ಮಾಡುವುದು, ಸರಿಪಡಿಸುವುದು, ತೆಂಗು ಮತ್ತು ಅಡಿಕೆ ತೋಟದಲ್ಲಿ ಇತರೆ ಕೆಲಸಗಳು.

ಕೆಲಸಗಾರರನ್ನೂ ಒದಗಿಸಿಕೊಡುವುದರಲ್ಲಿ ಸಹಕಾರಿಯಾಗಿವೆ. ಈ ಕೇಂದ್ರಗಳು ತಮ್ಮ ಪ್ರದೇಶಗಳಲ್ಲಿ ನಿರುದ್ಯೋಗಿಗಳ ಹೆಸರುಗಳನ್ನು ನೋಂದಣಿ ಮಾಡುವ ಹಾಗೂ ಮಾಲೀಕರಿಗೆ ಸೂಕ್ತ ಅಭ್ಯರ್ಥಿಗಳನ್ನು ಒದಗಿಸುವ ಹೊಣೆಯನ್ನು ಹೊತ್ತಿವೆ.

ಜಿಲ್ಲಾ ಕೇಂದ್ರವಾದ ಮಂಡ್ಯದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವು ಜಿಲ್ಲೆಯಲ್ಲಿರುವ ಉದ್ಯೋಗಾಕಾಂಕ್ಷಿಗಳ ಹೆಸರುಗಳನ್ನು ನೋಂದಣಿ ಮಾಡಿಸಿಕೊಳ್ಳುವ ಮತ್ತು ನೋಂದಣಿಗೊಂಡವರ ಹೆಸರನ್ನು ಸಂಸ್ಥೆಗಳಿಗೆ ಒದಗಿಸುವ ಕಾರ್ಯದಲ್ಲಿ ತೊಡಗಿದ್ದು, ಕಚೇರಿಯ ಚಾಲ್ತಿ ರಿಜಿಸ್ಟರ್ ಪ್ರಕಾರ ಜಿಲ್ಲೆಯಲ್ಲಿ ೧೯೯೯ರ ವೇಳೆಗೆ ಒಟ್ಟು ೫೭,೩೪೩ ಉದ್ಯೋಗಾರ್ಥಿಗಳಿದ್ದರು. ಮಂಡ್ಯ ಜಿಲ್ಲೆಯಲ್ಲಿ ೧೯೮೦-೮೧ ರಲ್ಲಿ ೧೨,೯೦೯, ೧೯೮೪-೮೫ ರಲ್ಲಿ ೧೯,೯೫೩, ೧೯೯೦-೯೧ ರಲ್ಲಿ ೩೩,೭೫೯, ೧೯೯೪-೯೫ರಲ್ಲಿ ೪೪,೩೪೭ ಮತ್ತು ೨೦೦೧-೨೦೦೨ ರಲ್ಲಿ ೬೭,೩೮೪ ಜನರು ಉದ್ಯೋಗಾಕಾಂಕ್ಷಿಗಳಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಅವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಅಧಿಕಗೊಂಡಿರುವ ಅಂಶವನ್ನು ಕೋಷ್ಟಕ ೮.೧೬ ಸ್ಪಷ್ಟಪಡಿಸುತ್ತದೆ. ಇದರಲ್ಲಿ ಮಹಿಳಾ ಉದ್ಯೋಗಾರ್ಥಿಗಳಿಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ನೀಡಲಾಗಿದ್ದು ೨೦೦೧-೨೦೦೨ರ ಅಂತ್ಯಕ್ಕೆ ಜಿಲ್ಲೆಯಲ್ಲಿ ೧೬,೦೧೨ ಮಹಿಳಾ ಉದ್ಯೋಗಾರ್ಥಿಗಳಿದ್ದ ಅಂಶ ವೇದ್ಯವಾಗುತ್ತದೆ.

**ಕೋಷ್ಟಕ ೮.೧೬ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಚಾಲ್ತಿ ದಾಖಲೆ ಪ್ರಕಾರ ೧೯೮೦-೮೧ ರಿಂದ ೨೦೦೧-೦೨ರವರೆಗೆ ನೋಂದಣಿಗೊಂಡ ಉದ್ಯೋಗಾರ್ಥಿಗಳ ವಿವರ**

| ವರ್ಷ | ಪುರುಷರು | | ಮಹಿಳೆಯರು | | ಒಟ್ಟು | |
|---|---|---|---|---|---|---|
| | ಉದ್ಯೋಗಸ್ಥರು | ನಿರುದ್ಯೋಗಸ್ಥರು | ಉದ್ಯೋಗಸ್ಥರು | ನಿರುದ್ಯೋಗ ಸ್ಥರು | ಉದ್ಯೋಗಸ್ಥರು | ನಿರುದ್ಯೋಗಸ್ಥರು |
| ೧೯೮೦-೮೧ | ೧೨೧ | ೧೦,೮೧೭ | ೬ | ೨,೦೯೨ | ೧೨೭ | ೧೨,೯೦೯ |
| ೧೯೮೫-೮೬ | ೧೩೯ | ೨೦,೧೭೦ | ೨೧ | ೩,೯೪೬ | ೧೬೦ | ೨೪,೧೧೬ |
| ೧೯೯೦-೯೧ | ೫೪ | ೨೭,೫೩೯ | ೪೮ | ೬,೨೨೦ | ೧೦೨ | ೩೩,೭೫೯ |
| ೧೯೯೫-೯೬ | ೩೦೩ | ೩೮,೪೧೮ | ೨೧೦ | ೧೦,೨೧೬ | ೫೧೩ | ೪೮,೬೩೪ |
| ೧೯೯೯-೦೦ | ೪೮೨ | ೪೬,೪೭೨ | ೨೬೭ | ೧೩,೦೪೮ | ೭೪೯ | ೫೯,೫೨೦ |
| ೨೦೦೧-೦೨ | ೫೯ | ೫೧,೩೭೨ | ೨೭ | ೧೬,೦೧೨ | ೮೬ | ೬೭,೩೮೪ |

ಆಧಾರ : ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಂಡ್ಯ

೧೯೮೦-೮೧ ರಲ್ಲಿ ಜಿಲ್ಲೆಯ ನಾಲ್ಕು ವಿವಿಧ ವಿಷಯಗಳ ಸ್ನಾತಕೋತ್ತರ ಪದವೀಧರರು(ಕಲೆ, ವಿಜ್ಞಾನ, ವಾಣಿಜ್ಯ ಹಾಗೂ ಶಿಕ್ಷಣ) ಇಂಜಿನಿಯರಿಂಗ್ ಹಾಗೂ ವೈದ್ಯರು (ಮೆಡಿಕಲ್) ವಿಶಿಷ್ಟ ವೃತ್ತಿ ಮತ್ತು ಕಾರ್ಯನಿರ್ವಾಹಕ ಉದ್ಯೋಗ ವಿನಿಮಯ ಕಚೇರಿ, ಬೆಂಗಳೂರು ಇಲ್ಲಿ ನೋಂದಾಯಿಸಿಕೊಂಡಿದ್ದರು. ೧೯೯೦-೯೧ರಲ್ಲಿ ೩೬, ೧೯೯೯-೨೦೦೦ದಲ್ಲಿ ೨೦೮, ೨೦೦೧-೦೨ರಲ್ಲಿ ೧೬೮ ಉದ್ಯೋಗಾರ್ಥಿಗಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೧೭ ಅನ್ನು ನೋಡಿ

**ಕೋಷ್ಟಕ ೮.೧೭ ೧೯೮೦–೮೧ ರಿಂದ ೨೦೦೧–೦೨ರವರೆಗೆ ಜಿಲ್ಲೆಯಲ್ಲಿ ನೋಂದಾಯಿತ ಸ್ನಾತಕೋತ್ತರ ಪದವೀಧರ ವಿವರ**

| ಕ್ರ.ಸ. | ವಿದ್ಯಾರ್ಹತೆ | ೧೯೮೦–೮೧ | | ೧೯೮೫–೮೬ | | ೧೯೯೦–೯೧ | | ೧೯೯೫–೯೬ | | ೧೯೯೯–೦೦ | | ೨೦೦೧–೦೨ | |
|---|---|---|---|---|---|---|---|---|---|---|---|---|---|
| | | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ |
| | | | | | | **ಸ್ನಾತಕೋತ್ತರ** | | | | | | | |
| ೧ | ಕಲೆ | ೩ | – | ೫ | ೧ | ೮ | ೫ | ೨೬ | ೬ | ೪೯ | ೧೪ | ೧೬ | ೧೦ |
| ೨ | ವಿಜ್ಞಾನ | ೧ | – | ೧ | | ೩ | ೧ | ೧೪ | ೫ | ೧೧ | ೬ | ೪ | ೦೧ |
| ೩ | ವಾಣಿಜ್ಯ | – | – | – | | ೧ | – | ೩ | – | ೩ | ೧ | ೨ | ೦೫ |
| ೪ | ಶಿಕ್ಷಣ | – | – | – | – | – | – | ೨ | – | ೨ | ೧ | ೩ | ೧ |
| ೫ | ದೈಹಿಕ ಶಿಕ್ಷಣ | – | – | – | – | – | – | ೧ | – | ೨ | ೧ | ೧ | ೧ |
| | | | | | | **ಇಂಜಿನಿಯರಿಂಗ್** | | | | | | | |
| ೬ | ಸಿವಿಲ್ | – | – | ೪ | – | ೭ | – | ೧೪ | – | ೧೩ | ೩ | ೧೧ | ೬ |
| ೭ | ಮೆಕ್ಯಾನಿಕಲ್ | – | – | – | – | ೧ | – | ೭ | – | ೧೬ | ೩ | ೨ | ೧ |
| ೮ | ಎಲೆಕ್ಟ್ರಿಕಲ್ | – | – | – | – | ೨ | – | ೩ | ೧ | ೧೧ | ೩ | ೧೧ | ೧೬ |
| ೯ | ಇತರೆ | ೧ | – | – | – | ೩ | ೧ | ೧೨ | ೧ | ೩೧ | ೧೦ | ೨೩ | ೨೩ |
| | | | | | | **ಮೆಡಿಕಲ್** | | | | | | | |
| ೧೦ | ಫಾರ್ಮಸಿ | ೧ | – | – | – | ೧ | – | – | ೧ | ೧ | ೧ | ೧ | ೧ |
| ೧೧ | ವ್ಯವಸಾಯ (ಎಂ.ಎಸ್ಸಿ ಅಗ್ರಿ.) | – | – | – | – | ೧ | – | ೩ | – | ೨ | ೧ | ೯ | ೧ |
| ೧೨ | ಪಶುವೈದ್ಯಕೀಯ | – | – | – | – | ೧ | | ೧ | – | – | – | ೧ | ೧ |
| ೧೩ | ಇತರೆ | – | – | | – | ೧ | | ೨ | – | ೧೬ | ೭ | ೧೧ | ೬ |
| | ಒಟ್ಟು | ೬ | – | ೧೦ | ೧ | ೨೯ | ೭ | ೮೮ | ೧೪ | ೧೫೭ | ೫೧ | ೯೫ | ೭೩ |

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ೧೯೮೦–೮೧ ರಿಂದ ೨೦೦೧–೨೦೦೨ನೇ ಇಸವಿಯವರೆಗೆ ನೋಂದಾಯಿಸಲ್ಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಮತ್ತು ಉದ್ಯೋಗ ಪಡೆದವರ ಸಂಖ್ಯೆಯ ವಿವರಗಳನ್ನು ಕೋಷ್ಟಕ ೮.೧೮ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೮ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಾಯಿಸಿಕೊಂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿವರ**

| ವರ್ಷಗಳು | ನೋಂದಾಯಿಸಿಕೊಂಡವರು | | ಉದ್ಯೋಗ ಪಡೆದವರು | |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ೧೯೮೦-೮೧ | ೫೫೯ | ೧೦ | ೪೭ | ೧೧ |
| ೧೯೮೪-೮೫ | ३७४ | ೧३ | ೪೯ | ೧೮ |
| ೧೯೯೦-೯೧ | ೧೨೦೪ | ೧೮ | ೨೪ | ೧ |
| ೧೯೯೫-೯೬ | ೬೩೪ | ೨೯ | ೧೩೦ | ೭ |
| ೧೯೯೯-೨೦೦೦ | ೧,೯೨೭ | ೮೭ | ೮೦ | ೨೪ |
| ೨೦೦೧-೦೨ | ೧೦,೬೫೩ | ೫೫೪ | ೧೯ | - |

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ನೆರವಿನೊಂದಿಗೆ ಕೇಂದ್ರ, ರಾಜ್ಯ, ಅರೆಕೇಂದ್ರ , ಅರೆರಾಜ್ಯ ಸರ್ಕಾರಗಳು ಸ್ಥಳೀಯ ಬೋರ್ಡುಗಳು ಹಾಗೂ ಖಾಸಗಿ ಸಂಸ್ಥೆಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡ ವಿವರಗಳನ್ನು ಕೋಷ್ಟಕ ೮. ೧೯ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೧೯ ೧೯೮೦-೮೧ ರಿಂದ ೨೦೦೧-೦೨ರವರೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸೇವೆಯನ್ನು ಉಪಯೋಗಿಸಿಕೊಂಡ ಘಟಕಗಳು ಮತ್ತು ಭರ್ತಿಗೊಂಡವರ ಸಂಖ್ಯೆಯ ವಿವರ**

| ವರ್ಷಗಳು | ಸೇವೆಯನ್ನು ಉಪಯೋಗಿಸಿಕೊಂಡವರ ಸಂಖ್ಯೆ | | | | | | | ಭರ್ತಿಗೊಂಡವರ ಸಂಖ್ಯೆ | | | | | | |
|---|---|---|---|---|---|---|---|---|---|---|---|---|---|---|
| | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು | ಕೇಂದ್ರ ಸರ್ಕಾರ | ಅರೆ ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ರಾಜ್ಯ ಸರ್ಕಾರ | ಸ್ಥಳೀಯ ಸಂಸ್ಥೆಗಳು | ಖಾಸಗಿ | ಒಟ್ಟು |
| ೧೯೮೦-೮೧ | ೧೫ | ೨೬ | ೭೭ | ೧೫ | ೪ | ೧೧ | ೧೪೮ | ೪ | ೧೯ | ೯೦ | ೯ | ೧ | ೪ | ೧೨೭ |
| ೧೯೮೫-೮೬ | ೯ | ೧೯ | ೪೩ | ೧೦ | - | ೨೬ | ೧೦೭ | ೬ | ೧೬ | ೧೨೪ | ೧೨ | - | ೨ | ೧೬೦ |
| ೧೯೯೦-೯೧ | ೩೭ | ೧೭ | ೨೯ | ೫ | ೧ | ೧೫ | ೧೦೪ | ೨೮ | ೨೧ | ೫೦ | ೧ | - | ೨ | ೧೦೨ |
| ೧೯೯೫-೯೬ | ೧೬ | ೮ | ೨೬ | ೪ | - | ೬ | ೬೦ | ೨೯ | ೯ | ೪೨೫ | ೫೦ | - | - | ೫೧೩ |
| ೧೯೯೯-೦೦ | ೧೩ | ೧೫ | ೪೦ | ೦೫ | - | ೦೫ | ೭೮ | ೧೦ | ೦೨ | ೭೧೮ | ೦೨ | ೪ | ೧೩ | ೭೪೯ |
| ೨೦೦೧-೦೨ | ೧೧ | ೦೮ | ೩೭ | ೦೨ | - | ೦೧ | ೫೯ | ೦೧ | - | ೮೩ | ೦೫ | - | - | ೮೯ |

ವಿದ್ಯಾರ್ಹತೆಗೆ ಅನುಗುಣವಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿಕೊಂಡವರು ೧೯೮೦-೮೧ರಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ಸೇರಿದಂತೆ ಕೇವಲ ೨೮೯ ಪದವೀಧರರಿದ್ದರೆ, ೧೯೯೦-೯೧ ರಲ್ಲಿ ೩೪೪ ಪದವೀಧರರಿದ್ದರು. ಇದು ೨೦೦೧-೦೨ರಲ್ಲಿ ೫೨೦ಕ್ಕೆ ಹೆಚ್ಚಳಗೊಂಡಿತು. ಆ ಪ್ರಕಾರ ಕಲಾ ಪದವೀಧರರು ಅಧಿಕ ಸಂಖ್ಯೆಯಲ್ಲಿ ನಿರಂತರವಾಗಿ ನೋಂದಣಿಗೊಂಡಿದ್ದು ಬಿ.ಎಡ್ ಪದವೀಧರರು ಎರಡನೇ ಸ್ಥಾನದಲ್ಲಿದ್ದಾರೆ.

ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ನಿರ್ವಾಹಕ ಪರೀಕ್ಷೆಗಳಲ್ಲಿ ಪಾಸಾದವರು ಗಣನೀಯ ಸಂಖ್ಯೆಯಲ್ಲಿರುವ ಅಂಶ ಇಲ್ಲಿ ವ್ಯಕ್ತವಾಗುತ್ತದೆ.

**ಕೋಷ್ಟಕ ೮.೨೦ ವಿದ್ಯಾರ್ಹತೆ ಹಾಗೂ ಲಿಂಗ ಪ್ರಭೇಧಕ್ಕನುಗುಣವಾಗಿ ಪ್ರತಿ ವರ್ಷ ನೋಂದಾಯಿಸಿಕೊಂಡವರ ವಿವರ**

| ಕ್ರ.ಸಂ. | ವಿದ್ಯಾರ್ಹತೆ | ನೋಂದಣಿಗೊಂಡ ವರ್ಷ | | | | | | | | | |
|---|---|---|---|---|---|---|---|---|---|---|---|
| | | ೧೯೮೦-೮೧ | | ೧೯೯೦-೯೧ | | ೧೯೯೫-೯೬ | | ೧೯೯೯-೨೦೦೦ | | ೨೦೦೧-೦೨ | |
| | | ಪು | ಮ | ಪು | ಮ | ಪು | ಮ | ಪು | ಮ | ಪು | ಮ |
| ೧ | ಪದವೀಧರರು | | | | | | | | | | |
| | ಕಲೆ | ೧೮೭ | ೧೭ | ೧೪೫ | ೩೭ | ೧೮೧ | ೫೭ | ೧೮೯ | ೧೧೨ | ೧೯೦ | ೧೨೮ |
| | ವಿಜ್ಞಾನ | ೪೧ | ೬ | ೬೦ | ೨೩ | ೧೧೨ | ೩೬ | ೯೨ | ೪೨ | ೧೦೦ | ೪೩ |
| | ವಾಣಿಜ್ಯ | ೩೮ | – | ೬೧ | ೧೮ | ೫೮ | ೨೭ | ೩೧ | ೩೩ | ೩೮ | ೨೧ |
| ೨ | ಬಿ.ಎಡ್ | – | – | – | – | ೧೮೬ | ೪೧ | ೧೪೨ | ೬೬ | ೧೧೮ | ೭೪ |
| ೩ | ಬಿ.ಪಿ.ಎಡ್ | – | – | – | – | ೯ | – | ೧೩ | ೦೨ | ೧೩ | ೦೧ |
| ೪ | ಡಿಪ್ಲೊಮೋದಾರರು | ೨೦ | – | ೪೯ | ೧ | ೬೧ | – | ೭೫ | ೧೨ | ೭೮ | ೦೪ |
| ೫ | ಐಟಿಐ ಉತ್ತೀರ್ಣ | ೨೮ | – | ೧೨೩ | – | ೧೧೫ | ೧ | ೨೦೫ | ೦೭ | ೨೩೨ | ೨೨ |
| ೬ | ಬೆರಳಚ್ಚುಗಾರರು | ೨ | – | ೧೫ | – | ೧೦೩ | ೧೪೬ | ೬೨ | ೧೦೬ | ೪೭ | ೯೬ |
| ೭ | ಶೀಘ್ರಲಿಪಿಗಾರರು | – | – | ೬ | – | ೧೧ | – | ೦೫ | ೧೧ | ೪ | ೭ |
| ೮ | ಪ್ರಾಥಮಿಕ ಶಾಲಾ ಶಿಕ್ಷಕರು | – | ೧ | ೬೮ | ೨೯ | ೨೬೪ | ೧೬೭ | ೮೩ | ೬೦ | – | – |
| ೯ | ನರ್ಸರಿ ಶಿಕ್ಷಕರು | – | ೧೦ | – | – | – | ೧೪೭ | – | ೪೧ | – | ೮೬ |
| ೧೦ | ದೈಹಿಕ ಶಿಕ್ಷಕರು | – | – | – | – | ೧೨೩ | ೩ | ೨೪ | ೧೪ | ೨೬ | ೧೩ |
| ೧೧ | ನಿರ್ವಾಹಕರು | – | – | ೯೯ | – | ೬೬೫ | – | ೫೬೮ | ೧೮೬ | ೩೫೦ | ೮೩ |
| ೧೨ | ಎಸ್.ಎಸ್.ಎಲ್.ಸಿ. ಉತ್ತೀರ್ಣ | ೨೪೦೮ | ೪೮೮ | ೪೫೮೬ | ೧೩೭೦ | ೩೭೨೪ | ೯೭೪ | ೩೨೫೧ | ೧೧೩೬ | ೩೭೦೯ | ೧೫೫೧ |
| ೧೩ | ಪಿ.ಯು.ಸಿ. ಉತ್ತೀರ್ಣ | ೪೭೮ | ೯೬ | ೫೮೬ | ೨೫೯ | ೧೫೦೨ | ೪೭೮ | ೯೯೯ | ೫೧೪ | ೧೧೫೩ | ೬೭೫ |
| ೧೪ | ಮಾಧ್ಯಮಿಕ ಶಾಲೆ | ೮೯೦ | ೫೨ | ೫೩೨ | ೧೦೯ | ೮೨೧ | ೧೫೫ | ೭೩೫ | ೨೨೭ | ೪೨೨ | ೧೧೧ |
| ೧೫ | ಅಕ್ಷರಸ್ಥರು | ೨೯೦ | ೨೯ | ೧೧೭ | ೪೨ | ೯೧ | ೨೭ | ೬೨ | ೩೭ | ೨೭ | ೧೯ |
| ೧೬ | ಅನಕ್ಷರಸ್ಥರು | ೧೮೦ | ೧೧೮ | ೬೫ | ೬೫ | ೨೩ | ೨೪ | ೧೬ | ೪೦ | ೦೩ | ೧೧ |

**ಕೋಷ್ಟಕ ೮.೨೧ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ೧೯೮೦–೮೧ ರಿಂದ ೨೦೦೧–೦೨ರವರೆಗೆ ನೋಂದಾಯಿಸಿಕೊಂಡ ಉದ್ಯೋಗಾಕಾಂಕ್ಷಿಗಳ ಸಂಖ್ಯೆ, ಪ್ರಕಟಿತ ಖಾಲಿ ಹುದ್ದೆಗಳು, ಭರ್ತಿಗೊಂಡ ಹುದ್ದೆಗಳ ಮಾಹಿತಿಯ ವಿವರ**

| ವರ್ಷ | ನೋಂದಾಯಿಸಿ ಕೊಂಡವರ ಸಂಖ್ಯೆ | ಪ್ರಕಟಿತ ಹುದ್ದೆಗಳು | ಭರ್ತಿಗೊಂಡ ಹುದ್ದೆಗಳ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|
| ೧೯೮೦–೮೧ | ೫,೫೭೭ | ೫೩೨ | ೧೨೭ | ೪೦೫ |
| ೧೯೮೫–೮೬ | ೫,೩೧೪ | ೩೧೦ | ೧೬೦ | ೧೫೦ |
| ೧೯೯೦–೯೧ | ೮,೮೪೦ | ೯೦೧ | ೧೦೨ | ೭೯೯ |
| ೧೯೯೫–೯೬ | ೧೦,೭೩೨ | ೭೮೪ | ೫೧೩ | ೨೭೧ |
| ೧೯೯೯–೨೦೦೦ | ೧೦,೬೩೩ | ೯೪೯ | ೭೪೯ | ೨೦೦ |
| ೨೦೦೧–೦೨ | ೧೦೬೯೩ | ೧೬೫ | ೮೭ | ೯೦ |

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯು ಮೂರು ತಿಂಗಳಿಗೊಮ್ಮೆ ಜಿಲ್ಲೆಯಲ್ಲಿನ ಕೇಂದ್ರ, ರಾಜ್ಯ, ಅರೆಸರ್ಕಾರ (ಕೇಂದ್ರ ಮತ್ತು ರಾಜ್ಯ), ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ವಲಯಗಳಲ್ಲಿನ ನಿಯೋಜಕರಿಂದ ಅವರ ಅಧೀನದಲ್ಲಿರುವ ಒಟ್ಟು ಉದ್ಯೋಗಿಗಳ ಸಂಖ್ಯೆಯ ಮಾಹಿತಿಯನ್ನು ಸಂಗ್ರಹಿಸುತ್ತದೆ. ಪ್ರತಿ ಮೂರು ತಿಂಗಳು, ಆರು ತಿಂಗಳು ಹಾಗೂ ವಾರ್ಷಿಕ ಮಾಹಿತಿಯನ್ನು ಕ್ರೋಢೀಕರಿಸಿ, ಪಟ್ಟಿಯನ್ನು ತಯಾರಿಸಿ, ನವದೆಹಲಿಯಲ್ಲಿರುವ ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯಕ್ಕೆ ಕಳುಹಿಸಿಕೊಡುತ್ತದೆ. ಈ ಮಾಹಿತಿ ಜಿಲ್ಲೆಯಲ್ಲಿನ ವಿವಿಧ ಉದ್ಯೋಗ ಕ್ಷೇತ್ರಗಳ ಸ್ವರೂಪ ಮತ್ತು ಉದ್ಯೋಗ ಬೇಡಿಕೆ ಪೂರೈಕೆಗಳ ಸಮತೋಲನ ಮತ್ತು ಅಸಮತೋಲನ ಮುಂತಾದ ವಿಶ್ಲೇಷಣೆಗಳನ್ನೊಳಗೊಂಡಿರುತ್ತದೆ. ಇದು ಮಾನವಶಕ್ತಿ ಸಂಪನ್ಮೂಲಗಳ ವಿಭಾಗದಲ್ಲಿ ಉದ್ಯೋಗ ಮತ್ತು ತರಬೇತಿ ಹಾಗೂ ಉದ್ಯೋಗ ಪ್ರವೃತ್ತಿಗಳ ಬಗ್ಗೆ ಅಧ್ಯಯನ ನಡೆಸಲು ಉಪಯುಕ್ತವಾಗಿರುತ್ತವೆ. ಜಿಲ್ಲೆಯಲ್ಲಿ ಕೇಂದ್ರ, ರಾಜ್ಯ, ಅರೆಸರ್ಕಾರ (ಕೇಂದ್ರ ಮತ್ತು ರಾಜ್ಯ), ಸ್ಥಳೀಯ ಹಾಗೂ ಖಾಸಗಿ ವಲಯಗಳಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಿಗಳ ವಿವರಗಳನ್ನು ಕೋಷ್ಟಕ ೮.೨೨ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೨೨ ೧೯೮೦–೮೧ ರಿಂದ ೨೦೦೧–೦೨ರವರೆಗೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದ ಉದ್ಯೋಗಸ್ಥರ ವಿವರ**

| ವರ್ಷಗಳು | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಅರೆ ಸರ್ಕಾರ (ರಾಜ್ಯ ಹಾಗೂ ಕೇಂದ್ರ) | ಸ್ಥಳೀಯ ಸಂಸ್ಥೆಗಳು | ಖಾಸಗಿ ವಲಯ |
|---|---|---|---|---|---|
| ೧೯೮೦–೮೧ | ೧,೦೩೧ | ೧೨,೫೫೨ | ೬,೨೫೦ | ೭೪೦ | ೪,೨೭೧ |
| ೧೯೮೪–೮೫ | ೧,೧೨೦ | ೧೪,೨೮೦ | ೬,೯೨೩ | ೬೩೯ | ೩,೭೯೧ |
| ೧೯೯೦–೯೧ | ೧,೪೯೧ | ೧೮,೬೯೩ | ೭,೮೪೨ | ೫೪೪ | ೩,೮೬೧ |
| ೧೯೯೪–೯೫ | ೧,೫೦೦ | ೨೧,೬೨೯ | ೭,೫೪೪ | ೬೦೬ | ೪,೫೯೬ |
| ೧೯೯೯–೦೦ | ೧,೫೫೯ | ೨೩,೫೪೯ | ೭,೦೫೪ | ೨,೫೮೭ | ೪,೧೬೯ |
| ೨೦೦೧–೦೨ | ೧,೪೯೭ | ೨೮,೩೨೪ | ೫,೯೦೯ | ೩,೨೧೬ | ೪,೧೫೨ |

## ಭೂ ಬಳಕೆ

ನೈಸರ್ಗಿಕ ಸಂಪನ್ಮೂಲಗಳಲ್ಲಿ ಭೂ ಸಂಪನ್ಮೂಲ ಅತ್ಯಂತ ಪ್ರಮುಖವಾದುದು. ಕೃಷಿ, ಕೈಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ, ಮುಂತಾದ ಎಲ್ಲಾ ಆರ್ಥಿಕ ಚಟುವಟಿಕೆಗಳು ನಡೆಯುವುದು ಭೂಮಿಯ ಮೇಲೆ. ೧೯೫೫–೫೬ರಲ್ಲಿ ಜಿಲ್ಲೆಯ ಅರಣ್ಯ ಪ್ರದೇಶವು ಒಟ್ಟು ಭೌಗೋಳಿಕ ಪ್ರದೇಶದ ಶೇ.೩.೮ರಷ್ಟಿದ್ದರೆ, ೧೯೬೦–೬೧ರಲ್ಲಿ ಅದು ಶೇ.೩.೦೬ರಷ್ಟಿದ್ದು, ಶೇ.೦.೭೪ರಷ್ಟು ಕಡಿಮೆಯಾಗಿ, ೧೯೭೦–೭೧ರಲ್ಲಿ ಶೇ.೪.೮೬ರಷ್ಟು ಹೆಚ್ಚಳಗೊಂಡಿತ್ತು. ವ್ಯವಸಾಯೇತರ ಭೂಮಿಯು ೧೯೫೫–೫೬ರಲ್ಲಿ ಶೇ.೮.೧ ಇದ್ದು, ೧೯೬೦–೬೧ರಲ್ಲಿ ಶೇ.೭.೧ ಹಾಗೂ ೧೯೭೦–೭೧ರಲ್ಲಿ ಶೇ.೧೦.೭೪ರಷ್ಟಿತ್ತು. ಬಂಜರು ಭೂಮಿ ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶ ೧೯೫೫–೫೬ರಲ್ಲಿ ಶೇ.೪.೬ರಷ್ಟಿದ್ದರೆ, ೧೯೬೦–೬೧ರಲ್ಲಿ ಅದು ಶೇ.೪.೦, ೧೯೭೦–೭೧ರಲ್ಲಿ ಶೇ.೨.೯ ಆಗಿದ್ದು, ಅದು ಅಧಿಕ ಪ್ರಮಾಣದಲ್ಲಿ ಕಡಿಮೆಯಾಗಿರುವುದನ್ನು ಕಾಣಬಹುದು. ಖಾಯಂ ಗೋಮಾಳ ಮತ್ತು ಹುಲ್ಲುಗಾವಲು ೧೯೫೫–೫೬ರಲ್ಲಿ ಶೇ.೨೪.೦, ೧೯೬೦–೬೧ರಲ್ಲಿ ಶೇ.೧೫.೬, ೧೯೭೦–೭೧ರಲ್ಲಿ ಶೇ.೧೧.೯ ಆಗಿದ್ದಿತು. ನಿವ್ವಳ ಬಿತ್ತನೆಯಾದ ಪ್ರದೇಶವು ೧೯೫೫–೫೬ರಲ್ಲಿ ಶೇ.೪೭.೮ ಹೆಕ್ಟೇರುಗಳಾಗಿದ್ದರೆ, ೧೯೬೦–೬೧ ರಲ್ಲಿ ಶೇ.೫೦.೭, ೧೯೭೦–೭೧ ರಲ್ಲಿ ಶೇ ೫೪.೨೭ ಆಗಿದ್ದು, ಅದು ನಿವ್ವಳ ಬಿತ್ತನೆ ಪ್ರದೇಶದ ಹೆಚ್ಚಳವನ್ನು ಸೂಚಿಸುತ್ತದೆ. ೧೯೮೦–೮೧ರಲ್ಲಿ ಅರಣ್ಯ ಪ್ರದೇಶ ೨೩,೭೦೨ ಹೆಕ್ಟೇರುಗಳಾಗಿದ್ದರೆ, ೧೯೯೯–೦೦ರಲ್ಲಿ ೨೩,೭೬೫ ಹೆಕ್ಟೇರುಗಳಿಗೆ ಹೆಚ್ಚಳಗೊಂಡಿತು. ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಿಲ್ಲದ ಪ್ರದೇಶವು ೧೯೮೦–೮೧ರಲ್ಲಿ ೨೧,೬೮೩ ಹೆ.ಗಳಾಗಿದ್ದು, ೧೯೯೦–೯೧ರಲ್ಲಿಯೂ ಸಹ ಯಾವುದೇ ಬದಲಾವಣೆಗೆ ಒಳಪಡಲಿಲ್ಲ. ಆದರೆ ೧೯೯೯–೦೦ದಲ್ಲಿ ಅದು ೨೧,೫೮೪ ಹೆ.ಗಳಿಗೆ ಕುಸಿಯಿತು. ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶ ೧೯೯೯–೦೦ದಲ್ಲಿ ೪,೯೮,೨೪೪ ಹೆ.ಗಳು. ಆ ಪೈಕಿ ಅರಣ್ಯ ೨೪,೭೬೫ ಹೆ., ಬಂಜರು ಪ್ರದೇಶ ೨೧,೫೮೪ ಹೆ., ವ್ಯವಸಾಯೇತರ ೬೦೭೭೯ ಹೆ., ಸಾಗುವಳಿಗೆ ಯೋಗ್ಯವಾದ ಬಂಜರು ೪೧,೯೭೩ ಹೆ., ಖಾಯಂ ಗೋಮಾಳ ೩೮,೧೯೬ ಹೆ., ವೃಕ್ಷ ಮತ್ತು ತೋಪುಗಳು ೩,೧೭೭ ಹೆ., ಬೀಳುಭೂಮಿ ೬೧,೧೦೮ ಹೆ., ನಿವ್ವಳ ಬಿತ್ತನೆಯಾಗಿರುವ ಪ್ರದೇಶ ೨,೪೬,೬೬೨ ಹೆಕ್ಟೇರುಗಳಾಗಿತ್ತು. ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾಗಿರುವ ಪ್ರದೇಶ ೩೮,೭೨೫ ಹೆ. ಮತ್ತು ಒಟ್ಟು ಬಿತ್ತನೆಯಾದ ಭೂಮಿಯ ವಿಸ್ತೀರ್ಣವು ೨,೮೬,೫೯೦ ಹೆ. ಮತ್ತು ಜಿಲ್ಲೆಯ ಬಿತ್ತನೆಯಾದ ಒಟ್ಟು ಪ್ರದೇಶದಲ್ಲಿ ಒಟ್ಟು ಆಹಾರಧಾನ್ಯಗಳನ್ನು ಬೆಳೆಯುವ ಪ್ರದೇಶದ ವಿಸ್ತೀರ್ಣ ೧,೯೯,೦೧೪ ಹೆ.ಗಳಷ್ಟಿತ್ತು. ವಿವರಗಳಿಗೆ ಕೋಷ್ಟಕ ೮.೨೩ ಅನ್ನು ನೋಡಿ.

### ಭೂಸಾರ ಸಂರಕ್ಷಣೆ

ಜಿಲ್ಲೆಯಲ್ಲಿ ಅರಣ್ಯಗಳ ರಕ್ಷಣೆ, ಹೊಸ ಅರಣ್ಯಗಳ ನಿರ್ಮಾಣ, ಒಡ್ಡು ನಿರ್ಮಾಣ, ಒಣಭೂಮಿ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳ ಮೂಲಕ ಭೂಸವೆತವನ್ನು ತಡೆಗಟ್ಟುವ ಪ್ರಯತ್ನ ನಿರಂತರವಾಗಿ ನಡೆದಿದೆ. ಇದಕ್ಕಾಗಿ ಜಿಲ್ಲೆಯಲ್ಲಿ ಎರಡು ಉಪವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. ಮಂಡ್ಯ ಉಪವಿಭಾಗದಲ್ಲಿ ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ಹಾಗೂ ಪಾಂಡವಪುರ ಉಪವಿಭಾಗದಲ್ಲಿ ಪಾಂಡವಪುರ, ಕೆ.ಆರ್.ಪೇಟೆ, ಶ್ರೀರಂಗಪಟ್ಟಣ ಮತ್ತು ನಾಗಮಂಗಲ ತಾಲೂಕುಗಳು ಒಳಪಡುತ್ತವೆ. ೧೯೯೩–೯೪ರಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯು ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ವಿಶೇಷ ಘಟಕ ಯೋಜನೆ, ಪ್ರಾಯೋಗಿಕ ಭೂಸಾರ ಸಂರಕ್ಷಣೆ ಯೋಜನೆ, ಖುಷ್ಕಿ ಬೇಸಾಯ ತಂತ್ರಜ್ಞಾನ ಯೋಜನೆ ಹಾಗೂ ಅಭಾವ ಪರಿಹಾರ ಯೋಜನೆಗಳ ಮೂಲಕ ಭೂಸಾರ

ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಂಡಿದೆ. ೧೯೯೪-೯೫ರಲ್ಲಿ ಜಿಲ್ಲೆಯ ಭೂಸಾರ ಸಂರಕ್ಷಣಾ ಕಾಮಗಾರಿಗಳಾದ ತಡೆಆಣೆ, ನಾಲಾಬದು, ರ್‍ಯಾವಿನ್ ರಿಕ್ಲಮೇಷನ್ ಸ್ಟ್ರಕ್ಚರ್ (ಆರ್.ಆರ್.ಎಸ್.), ನೀರುದಾರಿ, ತಿರುವುಗಾಲುವೆ, ಬದುನಿರ್ಮಾಣ ಮುಂತಾದ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಕೈಗೊಂಡಿದೆ. ೧೯೯೬-೯೭ರಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದಡಿ ಭೂಸಾರ ಸಂರಕ್ಷಣಾ ಕಾರ್ಯವನ್ನು ಕೈಗೊಂಡು ೯೬ ಅಣೆಕಟ್ಟುಗಳು, ೮೬ ನಾಲಾಬದುಗಳು, ೩ ಆರ್.ಆರ್.ಎಸ್. ಮತ್ತು ೪೩ ಕೊರಕಲು ತಡೆಗಳನ್ನು ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ.

**ಕೋಷ್ಟಕ ೮.೨೩ ೧೯೬೦-೬೧ ರಿಂದ ೧೯೯೯-೨೦೦೦ದವರೆಗಿನ ಜಿಲ್ಲೆಯ ಭೂಬಳಕೆಯ ವಿವರ (ಹೆಕ್ಟೇರುಗಳಲ್ಲಿ)**

| ವರ್ಷ | ಭೌಗೋಳಿಕ ವಿಸ್ತೀರ್ಣ | ಅರಣ್ಯ | ಇತರೆ ಉದ್ದೇಶಗಳಿಗೆ ಉಪಯೋಗಿಸಿಕೊಂಡ ಪ್ರದೇಶ | ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಲ್ಲದ ಪ್ರದೇಶ | ಸಾಗುವಳಿ ಮಾಡದಿರುವ ಇತರೆ ಭೂಮಿ | ಬೀಳು ಭೂಮಿ | ಬಿತ್ತನೆಯಾದ ಪ್ರದೇಶ |
|---|---|---|---|---|---|---|---|
| ೧೯೬೦-೬೧ | ೪,೭೪,೯೩೫ | ೧೬,೯೬೫ | ೩೩,೯೫೪ | ೧೮,೮೯೯ | ೧,೨೯,೮೦೯ | ೩೪,೫೦೮ | ೨,೪೦,೮೦೦ |
| ೧೯೭೦-೭೧ | ೪,೮೭,೩೯೬ | ೨೩,೭೦೨ | ೫೨,೩೩೬ | ೧೪,೫೭೩ | ೧,೦೬,೭೦೬ | ೨೫,೫೨೦ | ೨,೬೪,೫೫೯ |
| ೧೯೮೦-೮೧ | ೪,೯೮,೨೪೪ | ೨೩,೭೦೨ | ೫೯,೮೬೯ | ೨೧,೬೮೩ | ೯೦,೪೯೭ | ೬೦,೨೩೦ | ೨,೪೨,೨೬೩ |
| ೧೯೯೦-೯೧ | ೪,೯೮,೨೪೪ | ೨೩,೭೬೫ | ೬೦,೬೦೧ | ೨೧,೬೮೩ | ೮೪,೨೦೦ | ೬೭,೨೧೬ | ೨,೪೦,೭೭೯ |
| ೧೯೯೫-೯೬ | ೪,೯೮,೨೪೪ | ೨೩,೭೬೫ | ೬೦,೬೯೮ | ೨೧,೬೩೮ | ೮೦,೨೩೧ | ೫೯,೦೦೪ | ೨,೫೨,೯೦೮ |
| ೧೯೯೮-೯೯ | ೪,೯೮,೨೪೪ | ೨೪,೭೬೫ | ೬೦,೭೫೧ | ೨೧,೬೦೨ | ೮೩,೭೭೬ | ೫೮,೫೨೫ | ೨,೪೮,೮೨೫ |
| ೧೯೯೯-೦೦ | ೪,೯೮,೨೪೪ | ೨೪,೭೬೫ | ೬೦,೭೭೯ | ೨೧,೫೮೪ | ೮೩,೩೪೬ | ೬೧,೧೦೮ | ೨,೪೬,೬೬೨ |

### ಭೂಹಿಡುವಳಿ

ಜಿಲ್ಲೆಯಲ್ಲಿ ೧೯೮೦-೮೧ರಲ್ಲಿ ಒಟ್ಟು ೨,೪೮,೧೫೯ ಭೂ ಹಿಡುವಳಿದಾರರಿದ್ದು, ಅವರು ಒಟ್ಟು ೩,೧೨,೩೭೩ಹೆ. ಭೂಮಿ ಹೊಂದಿದ್ದರು. ೧೯೯೫-೯೬ರಲ್ಲಿ ಒಟ್ಟು ೪,೩೬,೬೫೬ ಭೂಹಿಡುವಳಿದಾರರು ಇದ್ದು ಒಟ್ಟು ೩,೩೪,೨೧೨ ಹೆ.ಭೂಮಿ ಹೊಂದಿದ್ದರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೮.೨೪ಅನ್ನು ನೋಡಿ.

## ನೀರಾವರಿ

ಮಂಡ್ಯ ಜಿಲ್ಲೆಯು ೧೯೩೨ರವರೆಗೆ ಪ್ರಧಾನವಾಗಿ ಮಳೆಯಾಧಾರಿತವಾಗಿದ್ದರಿಂದ ಆರ್ಥಿಕವಾಗಿ ಹಿಂದುಳಿದ ಜಿಲ್ಲೆಯಾಗಿದ್ದು, ಕ್ಷಾಮ, ಅತಿವೃಷ್ಟಿ, ಅನಾವೃಷ್ಟಿಗಳನ್ನೂ ಕಂಡಿದೆ. ತಮ್ಮ ಜೀವನೋಪಾಯಕ್ಕಾಗಿ ಬಹುಪಾಲು ಜನ ಬೇಸಾಯವನ್ನೇ ಅವಲಂಬಿಸಿದ್ದರಿಂದ ಆಹಾರಧಾನ್ಯಗಳ ಉತ್ಪನ್ನವನ್ನು ಹೆಚ್ಚಿಸಲು ಜಲಸಂಪನ್ಮೂಲದ ಸಮಗ್ರ ನಿರ್ವಹಣೆ ಅತ್ಯವಶ್ಯಕವಾಗಿದ್ದಿತು. ಪ್ರಸ್ತುತ ನಾಗಮಂಗಲ, ಕೆ.ಆರ್.ಪೇಟೆ, ಹೊರತುಪಡಿಸಿದಂತೆ ಉಳಿದ ೫ ತಾಲೂಕುಗಳು ಕಾವೇರಿ ನದಿಯಿಂದ ಕೃಷಿಗೆ ನೀರಾವರಿ ಸೌಲಭ್ಯ ಪಡೆದಿದ್ದು ಜಿಲ್ಲೆಯ ಹಸಿರು ಕ್ರಾಂತಿಗೆ ಕಾರಣವಾಗಿದೆ.

ಜಿಲ್ಲೆಯ ಎರಡನೇ ಪ್ರಮುಖ ನದಿಯಾದ ಹೇಮಾವತಿ ಕೃಷ್ಣರಾಜಪೇಟೆ, ಪಾಂಡವಪುರ, ನಾಗಮಂಗಲ ಮತ್ತು ಮಂಡ್ಯ ತಾಲೂಕುಗಳಿಗೆ ನೀರಾವರಿ ಸೌಲಭ್ಯ ಒದಗಿಸಿದೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ ನಾಲ್ಕನ್ನು ನೋಡಿ)

**ಕೋಷ್ಟಕ ೮.೨೪ ಜಿಲ್ಲೆಯಲ್ಲಿ ೧೯೮೦–೮೧ ರಿಂದ ೧೯೯೫–೯೬ರವರೆಗೆ ಇದ್ದ ಕೃಷಿ ಭೂಹಿಡುವಳಿಯ ವಿವರ**

| ಕ್ರ.ಸಂ. | ಭೂ ಹಿಡುವಳಿಗಳು | ೧೯೮೦–೮೧ | | ೧೯೮೫–೮೬ | | ೧೯೯೦–೯೧ | | ೧೯೯೫–೯೬ | |
|---|---|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) | ಸಂಖ್ಯೆ | ವಿಸ್ತೀರ್ಣ (ಹೆ.ಗಳಲ್ಲಿ) |
| ೧ | ಅತಿ ಸಣ್ಣ (೦–೧ ಹೆ. ಗಿಂತ ಕಡಿಮೆ) | ೧,೮೬,೦೧೦ | ೭೪,೯೪೫ | ೨,೨೦,೪೬೦ | ೮೫,೦೮೩ | ೨,೮೭,೯೯೦ | ೧,೦೬,೪೪೫ | ೩,೩೩,೭೧೧ | ೧,೨೭,೦೪೬ |
| ೨ | ಸಣ್ಣ (೧ ರಿಂದ ೨ ಹೆ.) | ೬೦,೦೪೨ | ೮೪,೩೭೬ | ೬೨,೧೮೭ | ೮೬,೯೯೫ | ೬೭,೮೦೯ | ೯೪,೪೪೦ | ೬೯,೪೨೨ | ೯೬,೪೪೨ |
| ೩ | ಅರೆ ಮದ್ಯಮ (೨–೪ ಹೆ.) | ೩೨,೫೦೯ | ೮೭,೮೮೩ | ೩೦,೨೯೦ | ೮೧,೩೩೬ | ೨೯,೮೨೫ | ೮೦,೨೩೭ | ೨೭,೩೪೫ | ೭೨,೯೧೮ |
| ೪ | ಮದ್ಯಮ (೪ ರಿಂದ ೧೦ ಹೆ.) | ೯,೯೬೮ | ೫೪,೬೦೫ | ೮,೫೦೮ | ೪೬,೪೨೦ | ೭೨೩೪ | ೩೯,೩೦೦ | ೫,೮೫೭ | ೩೧,೭೮೪ |
| ೫ | ದೊಡ್ಡ (೧೦ ಹೆ. ಮತ್ತು ಮೇಲ್ಪಟ್ಟು) | ೬೩೦ | ೧೦,೫೬೪ | ೬೨೭ | ೧೦,೭೩೬ | ೩೮೩ | ೫೬೭೮ | ೩೨೧ | ೬,೦೨೨ |
| | ಒಟ್ಟು ಹಿಡುವಳಿ ದಾರರು | ೨,೮೯,೧೫೯ | ೩,೧೨,೩೭೩ | ೩,೨೨,೦೭೨ | ೩,೧೦,೫೭೦ | ೩,೯೩,೨೪೧ | ೩,೨೬,೧೦೦ | ೪,೩೬,೬೫೬ | ೩,೩೪,೨೧೨ |

**ಕೋಷ್ಟಕ ೮.೨೫ ಜಿಲ್ಲೆಯಲ್ಲಿ ೧೯೮೫–೮೬ ರಿಂದ ೧೯೯೯–೦೦ ರವರೆಗೆ ವಿವಿಧ ಮೂಲಗಳಿಂದ ನೀರಾವರಿ ಸೌಲಭ್ಯ ಪಡೆದ ಪ್ರದೇಶ (ಹೆಕ್ಟೇರುಗಳಲ್ಲಿ)**

| | ೧೯೮೫–೮೬ | ೧೯೮೯–೯೦ | ೧೯೯೫–೯೬ | ೧೯೯೮–೯೯ | ೧೯೯೯–೦೦ |
|---|---|---|---|---|---|
| ಕಾಲುವೆಗಳಿಂದ | ೮೪,೧೩೩ | ೧,೦೫,೦೦೦ | ೯೨,೯೫೫ | ೯೭,೮೬೯ | ೮೬,೩೪೯ |
| ಕೆರೆಗಳಿಂದ | ೬,೬೫೭ | ೧೨,೯೫೬ | ೮,೩೦೭ | ೭,೯೩೦ | ೮,೧೫೮ |
| ಬಾವಿಗಳಿಂದ | ೭,೨೪೭ | ೯,೯೮೪ | ೭,೯೦೬ | ೭,೩೫೮ | ೧೦,೨೯೦ |
| ಕೊಳವೆ ಬಾವಿಗಳಿಂದ | – | ೩೦೬ | ೧,೯೪೫ | ೨,೩೮೪ | ೨,೨೭೫ |
| ಏತ ನೀರಾವರಿಯಿಂದ | – | ೩೭೬ | ೩೮೫ | ೩೮೩ | ೫೭೫ |
| ಇತರೆ ಜಲ ಮೂಲಗಳಿಂದ | ೧,೩೭೧ | ೧,೫೭೯ | ೮೬೬ | ೯೭೭ | ೩೭೫ |
| ಒಟ್ಟು | ೯೯,೪೦೮ | ೧,೩೦,೨೦೧ | ೧,೧೨,೩೬೪ | ೧,೧೬,೯೦೧ | ೧,೦೮,೦೨೨ |

**ಕೋಷ್ಟಕ ೮.೨೬ ೧೯೮೦–೮೧ ರಿಂದ ೧೯೯೯–೨೦೦೦ ರವರೆಗಿನ ಜಿಲ್ಲೆಯ ಪ್ರಮುಖ ಆಹಾರಧಾನ್ಯಗಳ ವಿವರ**

| ವರ್ಷಗಳು | | ೧೯೮೦–೮೧ | ೧೯೮೫–೮೬ | ೧೯೮೭–೮೮ | ೧೯೮೯–೯೦ | ೧೯೯೩–೯೪ | ೧೯೯೪–೯೫ | ೧೯೯೬–೯೭ | ೧೯೯೯–೨೦೦೦ |
|---|---|---|---|---|---|---|---|---|---|
| ೧. ಏಕದಳ ಮತ್ತು | ವಿ | ೧,೪೨,೩೬೦ | ೧,೫೨,೧೯೬ | ೧,೬೮,೩೨೯ | ೧,೮೩,೮೫೩ | ೧,೫೪,೪೩೩ | ೧,೩೬,೩೫೬ | ೧,೮೧,೫೬೭ | ೧,೪೯,೧೨೧ |
| ತೃಣ ಧಾನ್ಯಗಳು | ಉ | ೨,೮೬,೬೯೮ | ೨,೭೬,೮೭೦ | ೨,೮೭,೫೦೫ | ೩,೪೦,೧೮೮ | ೩,೨೨,೭೩೬ | ೩,೨೨,೧೯೨ | ೩,೭೫,೦೩೧ | ೩,೬೦,೩೨೭ |
| | ಇ | ೨,೧೨೦ | ೧,೯೧೫ | ೧,೭೯೮ | ೧,೯೮೨ | ೨,೨೦೦ | ೨,೪೮೭ | ೨,೧೭೪ | ೨,೫೪೪ |
| ೨. ದ್ವಿದಳ ಧಾನ್ಯಗಳು | ವಿ | ೮೯,೩೦೭ | ೮೦,೨೭೫ | ೭೫,೦೮೯ | ೫೭,೬೦೩ | ೬೬,೯೯೬ | ೯೨,೮೯೮ | ೩೬,೬೭೨ | ೫೧,೨೬೦ |
| | ಉ | ೨೧,೮೮೬ | ೧೭,೨೦೨ | ೨೨,೮೩೪ | ೧೪,೯೦೩ | ೨೫,೭೪೨ | ೨೬,೮೬೫ | ೧೫,೬೦೩ | ೨೪,೧೫೭ |
| | ಇ | ೨೫೮ | ೨೨೦ | ೩೨೦ | ೨೭೨ | ೪೦೪ | ೩೦೪ | ೪೪೮ | ೪೯೬ |
| ೩. ಒಟ್ಟು ಆಹಾರ ಧಾನ್ಯಗಳು | ವಿ | ೨,೩೧,೬೬೭ | ೨,೩೨,೪೭೧ | ೨,೪೩,೪೧೮ | ೨,೪೧,೫೧೬ | ೨,೨೧,೪೨೯ | ೨,೨೯,೨೫೪ | ೨,೧೮,೨೩೯ | ೨,೦೦,೩೮೧ |
| | ಉ | ೩,೦೮,೫೮೪ | ೨,೯೪,೦೭೨ | ೩,೧೦,೩೨೯ | ೩,೬೧,೦೯೧ | ೩,೪೮,೪೭೮ | ೩,೪೯,೦೫೭ | ೩,೯೦,೬೩೪ | ೩,೮೪,೪೮೪ |
| | ಇ | ೧,೪೦೨ | ೧,೩೩೨ | ೧,೩೪೨ | ೧,೫೭೪ | ೧,೬೫೭ | ೧೬೦೩ | ೧,೮೮೪ | – |
| ೪. ಎಣ್ಣೆ ಬೀಜಗಳು (ತೆಂಗು ಹೊರತು ಪಡಿಸಿದಂತೆ) | ವಿ | ೧೦,೯೩೬ | ೧೭,೫೩೫ | ೧೯,೧೮೧ | ೨೪,೯೭೪ | ೨೬,೬೬೬ | ೧೭,೦೩೦ | ೧೯,೯೭೧ | ೧೩,೯೧೬ |
| | ಉ | ೬,೬೯೯ | ೧೨,೭೧೦ | ೧೩,೯೫೯ | ೧೮,೪೬೦ | ೨೩,೨೧೬ | ೯,೬೭೫ | ೫೩,೭೧೬ | ೮,೨೬೪ |
| | ಇ | ೬೪೫ | ೭೬೩ | ೭೬೬ | ೭೭೮ | ೯೧೬ | ೫೯೮ | ೬೧೯ | ೬೨೫ |

ವಿವರಣೆ : ವಿ.: ವಿಸ್ತೀರ್ಣ (ಹೆಕ್ಟೇರುಗಳಲ್ಲಿ), ಉ.: ಉತ್ಪನ್ನ (ಟನ್ನುಗಳಲ್ಲಿ), ಇ.:ಇಳುವರಿ (ಹೆಕ್ಟೇರಿಗೆ ಕಿಲೋಗ್ರಾಂಗಳಲ್ಲಿ)

ಆಧಾರ: ಬ್ರೋಚರ್ ಆನ್ ಫುಲೀ ರಿವೈಸ್ಡ್ ಎಸ್ಟಿಮೇಟ್ಸ್ ಆಫ್ ಏರಿಯಾ ಪ್ರೊಡಕ್ಷನ್ ಅಂಡ್ ಯೀಲ್ಡ್ ಆಫ್ ಪ್ರಿನ್ಸಿಪಲ್ ಕ್ರಾಪ್ಸ್ ಇನ್ ಕರ್ನಾಟಕ ಫ್ರಮ್ ೧೯೮೦–೮೧ ರಿಂದ ೧೯೯೯–೨೦೦೦ (ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು)

ಜಿಲ್ಲೆಯಲ್ಲಿ ೧೯೫೯-೬೦ರಲ್ಲಿ ಎಲ್ಲಾ ಮೂಲಗಳಿಂದ ಒಟ್ಟು ನೀರಾವರಿಯಾದ ಪ್ರದೇಶ ೮೮,೬೨೪ ಹೆ.ಆಗಿದ್ದು, ಇದರಲ್ಲಿ ಕಾಲುವೆಗಳಿಂದ ೫೩,೯೪೫.೬ ಹೆ.(ಶೇ.೮೧.೮) ನೀರಾವರಿಯಾಗಿದೆ. ಖಾಸಗಿ ಕಾಲುವೆಗಳಿಂದ ೫೫.೦೫ ಹೆ. (ಶೇ.೦.೧ರಷ್ಟು); ಕೆರೆಗಳಿಂದ ೧೦,೯೧೦ ಹೆ.(೧೬.೫ರಷ್ಟು); ಬಾವಿಗಳಿಂದ ೨೧೭.೫ ಹೆ.(ಶೇ.೦.೩); ಇತರೆ ೭೯೭ ಹೆ. (ಶೇ.೧.೨ ರಷ್ಟು) ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಜಿಲ್ಲೆಯಲ್ಲಿ ೧೯೯೯-೦೦ದಲ್ಲಿ ಕಾಲುವೆಗಳಿಂದ ೮೯,೨೪೯ ಹೆ.ಪ್ರದೇಶ ನೀರಾವರಿ ಸೌಲಭ್ಯ ಪಡೆದಿದ್ದರೆ, ಕೆರೆಗಳಿಂದ ೮,೧೫೮ ಹೆ., ಬಾವಿಗಳಿಂದ ೧೦,೨೯೦ ಹೆ., ಇತರೆ ಜಲಮೂಲಗಳಿಂದ ೩೭೫ ಹೆ. ಹೀಗೆ, ಎಲ್ಲಾ ಮೂಲಗಳಿಂದ ಒಟ್ಟು ೧,೦೮,೦೨೨ ಹೆ.ಗಳಷ್ಟು ಭೂಮಿ ನೀರಾವರಿ ಸೌಲಭ್ಯ ಪಡೆದಿತ್ತು. ವಿವರಗಳಿಗೆ ಕೋಷ್ಟಕ ೮.೨೫ ಅನ್ನು ನೋಡಿ.

**ಬೆಳೆಗಳು**

ಏಕದಳ ಮತ್ತು ತೃಣ ಧಾನ್ಯಗಳ ವಿಸ್ತೀರ್ಣ ೧೯೮೦-೮೧ರಲ್ಲಿ ೧,೪೨,೩೬೦ ಹೆ.ಗಳಾಗಿತ್ತು. ಇದು ೧೯೯೯-೨೦೦೦ದಲ್ಲಿ ೧,೪೯,೧೨೧ ಹೆ.ಗಳಿಗೆ ಹೆಚ್ಚಿತು. ಇದೇ ಅವಧಿಯಲ್ಲಿ ದ್ವಿದಳ ಧಾನ್ಯಗಳ ವಿಸ್ತೀರ್ಣ ೮೯,೩೦೭ ಹೆ.ಗಳಿಂದ ೫೧,೨೬೦ ಹೆ.ಗಳಿಗೆ ಕುಸಿದಿದ್ದರೆ, ಎಣ್ಣೆಬೀಜಗಳ ವಿಸ್ತೀರ್ಣ ೧೦,೯೩೬ ಹೆ.ಗಳಿಂದ ೧೩,೯೧೬ ಹೆ.ಗಳಿಗೆ ಹೆಚ್ಚಾಗಿದೆ. ವಿವರಗಳಿಗೆ ಕೋಷ್ಟಕ ೮.೨೬ ಅನ್ನು ನೋಡಿ.

## ಪಶುಸಂಪತ್ತು

ಪಶುಪಾಲನೆ ಮಾನವನ ಅತ್ಯಂತ ಪುರಾತನ ಚಟುವಟಿಕೆಗಳಲ್ಲಿ ಒಂದು. ಕೃಷಿಯ ಅಭಿವೃದ್ಧಿಗೆ ಪೂರಕವಾದ ಈ ಚಟುವಟಿಕೆಯಿಂದ ಗ್ರಾಮೀಣ ಪ್ರದೇಶದ ಜನರಿಗೆ ಉಂಟಾಗುವ ಲಾಭ ಅಪರಿಮಿತ. ಪಶುಪಾಲನೆ ಇಂದು ಒಂದು ಲಾಭದಾಯಕವಾದ ಉದ್ಯಮವಾಗಿರುವುದರ ಜೊತೆಗೆ ವಿವಿಧ ಬಗೆಯ ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿದೆ. ೧೯೮೩ರ ಜಾನುವಾರು ಗಣತಿ ಪ್ರಕಾರ ಜಿಲ್ಲೆಯಲ್ಲಿ ೧೨.೦೭ ಲಕ್ಷ ಜಾನುವಾರುಗಳಿದ್ದವು. ಇವುಗಳಲ್ಲಿ ೪.೧೧ ಲಕ್ಷ ದನಕರುಗಳು, ೧.೯೬ ಲಕ್ಷ ಎಮ್ಮೆಗಳು, ೩.೩೩ ಲಕ್ಷ ಕುರಿಗಳು, ೨.೧೨ ಲಕ್ಷ ಆಡುಗಳು ಹಾಗೂ ೮,೧೨೧ ಹಂದಿಗಳು, ೪೪ ಸಾವಿರ ಶ್ವಾನಗಳು ಮತ್ತು ೨,೭೬೭ ಇತರೆ ಜಾನುವಾರುಗಳಿದ್ದವು. ೧೯೯೭-೯೮ರ ಜಾನುವಾರು ಗಣತಿಯಂತೆ ೧೨.೪೬ ಲಕ್ಷ ಜಾನುವಾರುಗಳಿದ್ದು, ಇವುಗಳಲ್ಲಿ ೩.೪೦ ಲಕ್ಷ ದನಕರುಗಳು, ೨.೧೩ ಲಕ್ಷ ಎಮ್ಮೆಗಳು, ೩.೮೭ ಲಕ್ಷ ಕುರಿಗಳು, ೨.೪೧ ಲಕ್ಷ ಆಡುಗಳು, ೦.೧೧ ಲಕ್ಷ ಹಂದಿಗಳು, ೦.೫೨ ಲಕ್ಷ ಶ್ವಾನಗಳು, ೩೮೦ ಇತರೆ ಜಾನುವಾರುಗಳು ಮತ್ತು ೧೦.೭೮ ಲಕ್ಷ ಕೋಳಿಗಳು ಇದ್ದವು.

ಜಿಲ್ಲೆಯಲ್ಲಿ ೧೯೮೯-೯೦ರಲ್ಲಿ ೫೮ ಪಶುವೈದ್ಯ ಕೇಂದ್ರಗಳಿದ್ದವು. ೨೦೦೧ರ ಮಾರ್ಚ್ ಅಂತ್ಯದಲ್ಲಿ ೩೫೩ ಪಶುವೈದ್ಯ ಶಾಲೆಗಳಿದ್ದು, ಅವುಗಳಲ್ಲಿ ೨೧ ಆಸ್ಪತ್ರೆಗಳು, ೭೪ ಚಿಕಿತ್ಸಾಲಯಗಳು, ೮೮ ಪ್ರಾಥಮಿಕ ಪಶುಕೇಂದ್ರಗಳು, ೭ ಸಂಚಾರಿ ಚಿಕಿತ್ಸಾಲಯಗಳು ಹಾಗೂ ೧೬೩ ಕೃತಕ ಗರ್ಭಧಾರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು.

**ಹೈನುಗಾರಿಕೆ**

ಮೈಸೂರು ಹಾಲು ಒಕ್ಕೂಟದಿಂದ ವಿಭಜನೆಗೊಂಡ ಮಂಡ್ಯ ಹಾಲು ಒಕ್ಕೂಟವು ೧೯೮೭ರಲ್ಲಿ ಅಸ್ತಿತ್ವಕ್ಕೆ ಬಂದಿತು. ಸೆಪ್ಟೆಂಬರ್ ಒಂದು, ೧೯೮೮ರಲ್ಲಿ ಈ ಹಾಲು ಉತ್ಪನ್ನ ಘಟಕವನ್ನು ಕರ್ನಾಟಕ ಹಾಲು ಮಹಾಮಂಡಳಿಯ

ಆಡಳಿತದಿಂದ ಮಂಡ್ಯ ಹಾಲು ಒಕ್ಕೂಟಕ್ಕೆ ಹಸ್ತಾಂತರಿಸಲಾಯಿತು. ಒಕ್ಕೂಟವು ಅಸ್ತಿತ್ವಕ್ಕೆ ಬಂದಾಗ ೪೬೪ ಹಾಲು ಉತ್ಪಾದಕರ ಸಹಕಾರ ಸಂಘಗಳು ಕೆಲಸ ನಿರ್ವಹಿಸುತ್ತಿದ್ದವು. ೧೯೯೯ರಲ್ಲಿ ೬೫೦ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದವು. ಇವುಗಳಲ್ಲಿ ೩೯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿದ್ದು, ಇವುಗಳಲ್ಲಿ ಒಟ್ಟು ೧,೯೭,೭೬೬ ಸದಸ್ಯರಿದ್ದರು. ಇವರಲ್ಲಿ ಪರಿಶಿಷ್ಟ ಜಾತಿಯವರು ೧೧,೧೭೪, ಪರಿಶಿಷ್ಟ ಪಂಗಡದವರು ೩,೨೭೭ ಮತ್ತು ಮಹಿಳೆಯರು ೩೬,೬೨೭ ಸೇರಿದ್ದರು.

ಒಕ್ಕೂಟ ಪ್ರಾರಂಭವಾದ ದಿನಗಳಲ್ಲಿ ೪೬೪ ಹಾಲು ಉತ್ಪಾದಕ ಸಹಕಾರ ಸಂಘಗಳಿಂದ ದಿನವೊಂದಕ್ಕೆ ೧ ಲಕ್ಷ ಕೆ.ಜಿ. ಹಾಲು ಶೇಖರಿಸಲಾಗುತ್ತಿತ್ತು. ೨೦೦೧-೦೨ರಲ್ಲಿದ್ದ ೭೧೯ ಸಂಘಗಳಿಂದ ಸರಾಸರಿ ದಿನವೊಂದಕ್ಕೆ ೧.೩೯ ಲಕ್ಷ ಕೆ. ಜಿ. ಶೇಖರಣೆಯಾಗಿತ್ತು. ೧೯೯೮-೯೯ರಲ್ಲಿ ಒಕ್ಕೂಟದ ಇತಿಹಾಸದಲ್ಲೇ ದಾಖಲೆಯೆನ್ನಬಹುದಾದ ದಿನವೊಂದಕ್ಕೆ ೨.೦೭ ಲಕ್ಷ ಕೆ.ಜಿ. ಹಾಲು ಶೇಖರಣೆಯಾಗಿತ್ತು. ಹಾಲು ಉತ್ಪಾದಕರಿಗೆ ಪ್ರತೀವಾರವೂ ಸರಾಸರಿ ಒಂದು ಕೋಟಿ ರೂಪಾಯಿಗಳನ್ನು ಪಾವತಿಸಲಾಗುತ್ತಿತ್ತು. ಕರ್ನಾಟಕ ಹಾಲು ಮಹಾಮಂಡಳಿಯಿಂದ ಹಸ್ತಾಂತರಗೊಂಡಾಗ ಒಂದು ಲಕ್ಷ ಲೀಟರ್ ಸಾಮರ್ಥ್ಯದ ಮುಖ್ಯ ಡೇರಿಯನ್ನು ೧೯೯೩-೯೪ರಲ್ಲಿ ಎರಡು ಲಕ್ಷ ಲೀಟರ್ ಸಾಮರ್ಥ್ಯಕ್ಕೆ ವಿಸ್ತರಿಸಿದ್ದಲ್ಲದೇ, ನಾಗಮಂಗಲ ಮತ್ತು ಕೆ.ಆರ್.ಪೇಟೆ ಶೀತಲ ಕೇಂದ್ರಗಳ ಸಾಮರ್ಥ್ಯವನ್ನು ೧೯೯೨-೯೩ರಲ್ಲಿ ವಿಸ್ತರಿಸಿ ನವೀಕರಿಸಲಾಗಿದೆ. ರೂ.೬೫ ಲಕ್ಷ ವೆಚ್ಚದಲ್ಲಿ ಮಳವಳ್ಳಿಯಲ್ಲಿ ಶೀತಲ ಕೇಂದ್ರವನ್ನು ೧೯೯೮ರಲ್ಲಿ ಸ್ಥಾಪಿಸಲಾಗಿದೆ. ಮಂಡ್ಯ ಹಾಲು ಒಕ್ಕೂಟ ಸ್ವೀಕರಿಸಿದ ಹಾಲು ೧೯೮೮-೮೯ರಲ್ಲಿ ೩೭೮.೭೦ ಲಕ್ಷ ಕೆ.ಜಿ.ಗಳಾಗಿದ್ದರೆ, ೧೯೮೯-೯೦- ೩೭೯.೦೦ ಲಕ್ಷ ಕೆ.ಜಿ., ೧೯೯೬-೯೭- ೪೩೨.೯೪ ಲಕ್ಷ ಕೆ.ಜಿ., ೧೯೯೭-೯೮ರಲ್ಲಿ ೪೫೩.೫೩ ಲಕ್ಷ ಕೆ.ಜಿ., ೨೦೦೧-೦೨ ರಲ್ಲಿ ೬೦೭.೪೮ ಲಕ್ಷ ಕೆ.ಜಿ. ಆಗಿರುವುದು. ಒಕ್ಕೂಟ ಮಾರಾಟ ಮಾಡಿದ ಹಾಲಿನ ಪ್ರಮಾಣವು ಲಕ್ಷ ಲೀಟರುಗಳಲ್ಲಿ ಹೀಗಿದೆ. ೧೯೮೮-೮೯ ೦.೬೫, ೧೯೮೯-೯೦ ೦.೬೫, ೧೯೯೦-೯೧ ೩೫.೨೬, ೧೯೯೧-೯೨ ೧೦೮.೯೦, ೧೯೯೪-೯೫ ೨೪೨.೬೫, ೧೯೯೭-೯೮ ೨೬೬.೩೮, ಮತ್ತು ೧೯೯೮-೯೯ ೩೧೦.೫೩ ಲಕ್ಷ ಲೀಟರ್ ಆಗಿರುವುದು. ೨೦೦೧-೦೨ರಲ್ಲಿ ೪೫೪ ಮೆಟ್ರಿಕ್ ಟನ್ ತುಪ್ಪ, ೧,೩೪೦ ಮೆಟ್ರಿಕ್ ಟನ್ ಬೆಣ್ಣೆ ಹಾಗೂ ೧,೬೩೨ ಮೆಟ್ರಿಕ್ ಟನ್ ಹಾಲಿನ ಪುಡಿಯನ್ನು ಮಾರಾಟ ಮಾಡಲಾಗಿದೆ. ಜೊತೆಗೆ ನಂದಿನಿ ಉತ್ಪನ್ನಗಳಲ್ಲಿ ೧೩ ಒಕ್ಕೂಟಗಳ ಪೈಕಿ ಮಂಡ್ಯ ಹಾಲು ಒಕ್ಕೂಟವು ರಾಜ್ಯದಲ್ಲೇ ಬರ್ಫಿ ತಯಾರು ಮಾಡುವ ಏಕೈಕ ಒಕ್ಕೂಟವಾಗಿದೆ. ಕರ್ನಾಟಕದಲ್ಲಿನ ಮೂರು ಹಾಲಿನ ಪುಡಿ ಘಟಕಗಳಲ್ಲಿ ಮಂಡ್ಯ ಒಂದಾಗಿದ್ದು, ಒಂದು ಲಕ್ಷ ಲೀಟರ್ ಹಾಲಿನ ಪುಡಿ ಮಾಡುವ ಸಾಮರ್ಥ್ಯ ಹೊಂದಿದೆ. ಇನ್ನೆರಡು ಹಾಲಿನ ಪುಡಿ ಮಾಡುವ ಘಟಕಗಳು ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿವೆ. ಮಂಡ್ಯ ಜಿಲ್ಲಾ ಹಾಲು ಒಕ್ಕೂಟವು (ಮನ್‌ಮುಲ್) ಪ್ರಾರಂಭದಲ್ಲಿ ರೂ.೭೭೧ ಲಕ್ಷಗಳ ವಹಿವಾಟನ್ನು ಹೊಂದಿತ್ತು. ೧೯೯೮-೯೯ರಲ್ಲಿ ರೂ.೫೦೦೦ ಲಕ್ಷ ವಾರ್ಷಿಕ ವಹಿವಾಟು ನಡೆಸಿತ್ತು. ಒಕ್ಕೂಟವು ೧೯೯೩-೯೪ರವರೆಗೆ ಅನುಭವಿಸಿದ್ದ ಕ್ರೋಢೀಕೃತ ನಷ್ಟ ರೂ.೭.೮೭ ಕೋಟಿ ಆಗಿತ್ತು. ಈ ನಷ್ಟವನ್ನು ೨೦೦೧-೦೨ರಲ್ಲಿ ರೂ.೩.೨೧ ಕೋಟಿಗೆ ಇಳಿಸಲಾಗಿದೆ.

## ಖನಿಜ ಸಂಪತ್ತು

ಮಂಡ್ಯ ಜಿಲ್ಲೆಯಲ್ಲಿ ಗ್ರಾನೈಟ್, ಕಲ್ನಾರು, ಕ್ರೊಮೈಟ್, ಸುಣ್ಣಕಲ್ಲು, ಚೌಳುಪ್ಪು, ಮೈಕಾ ಮತ್ತು ಕೋರಂಡಮ್ ಅಲ್ಪಪ್ರಮಾಣದಲ್ಲಿ ದೊರೆಯುತ್ತವೆ. ಇವುಗಳಲ್ಲಿ ೧೯೭೫ರಲ್ಲಿ ೩೪೦ ಟನ್ (ರೂ.೪೨ ಸಾವಿರ), ೧೯೭೬ರಲ್ಲಿ ೪೭೮ ಟನ್ (ರೂ. ೬೦ ಸಾವಿರ), ೧೯೭೭ರಲ್ಲಿ ೪೦೭ ಟನ್ (ರೂ.೫೧ ಸಾವಿರ), ೧೯೭೮ರಲ್ಲಿ ೮೯೪ ಟನ್ (ರೂ.೧೧೯ ಸಾವಿರ), ೧೯೭೯ರಲ್ಲಿ ೪೩೫ ಟನ್ (ರೂ.೫೨ ಸಾವಿರ), ೧೯೮೮-೮೯ರಲ್ಲಿ ಜಿಲ್ಲೆಯಲ್ಲಿ ಒಟ್ಟು

೧೩,೮೦೩ ಟನ್ ಖನಿಜ ಉತ್ಪತ್ತಿಯಾಗಿದ್ದು, ಅದರ ಮೌಲ್ಯ ೩.೬೨ ಲಕ್ಷವಾಗಿರುವುದು. ೧೯೯೩ರಲ್ಲಿ ೫೬ ಟನ್, ೧೯೯೪ರಲ್ಲಿ ೪೯೬ ಟನ್ (ರೂ.೧,೪೯,೦೦೦) ಉತ್ಪಾದಿಸಲಾಗಿದ್ದು ಆವರಣದಲ್ಲಿ ಕೊಟ್ಟಿರುವ ಅಂಕಿಗಳು ಅದರ ಮೌಲ್ಯವನ್ನು ಸೂಚಿಸುತ್ತದೆ.

## ಕೈಗಾರಿಕೆ

ಜಿಲ್ಲೆಯಲ್ಲಿ ೧೯೭೯-೮೦ರಲ್ಲಿ ೧೦೪ ಕೈಗಾರಿಕೆಗಳು ನೋಂದಣಿಯಾಗಿದ್ದವು. ೧೯೮೦-೮೧ರಲ್ಲಿ ೧೧೬, ೧೯೮೧-೮೨ರಲ್ಲಿ ೧೫೬, ೧೯೮೨-೮೩ರಲ್ಲಿ ೧೫೯, ೧೯೮೩-೮೪ರಲ್ಲಿ ೧೬೩, ೧೯೮೯-೯೦ರಲ್ಲಿ ೨೧೪, ೧೯೯೦-೯೧ರಲ್ಲಿ ೨೪೮, ೧೯೯೧-೯೨ರಲ್ಲಿ ೧೮೧, ೧೯೯೨-೯೩ರಲ್ಲಿ ೨೦೧, ೧೯೯೩-೯೪ರಲ್ಲಿ ೨೮೮, ೧೯೯೭-೯೮ರಲ್ಲಿ ೩೧೮, ೧೯೯೮-೯೯ರಲ್ಲಿ ೪೬೦, ೧೯೯೯-೨೦೦೦ರಲ್ಲಿ ೪೨೪ ಹಾಗೂ ೨೦೦೧-೦೨ರಲ್ಲಿ ೪೭೦ ಕೈಗಾರಿಕೆಗಳು ನೋಂದಣಿಗೊಂಡಿದ್ದವು. ಈ ಮೇಲಿನ ಅಂಶಗಳು ಜಿಲ್ಲೆಯ ಆರ್ಥಿಕ ಚಟುವಟಿಕೆ ಕೈಗಾರಿಕೆಯತ್ತ ವಾಲಿರುವುದನ್ನು ಸೂಚಿಸುತ್ತದೆ. ಜಿಲ್ಲೆಯಲ್ಲಿ ಕೃಷಿ ಆಧಾರಿತ ಕೈಗಾರಿಕೆಗಳಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳಾದ ಮೈಸೂರು ಸಕ್ಕರೆ ಕಾರ್ಖಾನೆ (ಮೈಸೂರು ಷುಗರ್ ಕಂಪನಿ ಲಿ.) (೧೯೩೩), ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ (೧೯೫೯), ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ ಕಾಳಮುದ್ದನದೊಡ್ಡಿ (೧೯೭೪) ಹಾಗೂ ಐ.ಸಿ.ಎಲ್ ಸಕ್ಕರೆ ಕಾರ್ಖಾನೆ ಮಾಕವಳ್ಳಿ (೧೯೯೯) ಹಾಗೂ ೧,೭೨೮ ಆಲೆಮನೆಗಳು ಕಾರ್ಯನಿರ್ವಹಿಸುತ್ತಿದ್ದವು. ಹೆಚ್ಚಿನ ವಿವರಗಳಿಗೆ ಅಧ್ಯಾಯ ೫ಅನ್ನು ನೋಡಿ.

## ವಿದ್ಯುತ್

ಜಿಲ್ಲೆಯ ಶಿವಸಮುದ್ರದಲ್ಲಿ ೧೯೦೨ರಲ್ಲೇ ವಿದ್ಯುತ್ ಉತ್ಪಾದನೆ ಪ್ರಾರಂಭಗೊಂಡು ವಿದ್ಯುತ್ತನ್ನು ದೂರದ ಕೋಲಾರ, ಬೆಂಗಳೂರುಗಳಿಗೆ ಒದಗಿಸಲಾಗುತ್ತಿದ್ದರೂ, ಜಿಲ್ಲೆಯಲ್ಲಿ ವಿದ್ಯುತ್ ಬಳಕೆ ಆರಂಭವಾದುದು ೧೯೨೮ರ ನಂತರವೇ. ೧೯೩೩ರ ವೇಳೆಗೆ ಜಿಲ್ಲೆಯ ಶ್ರೀರಂಗಪಟ್ಟಣ (೨೬-೧೦-೧೯೨೮), ಮಂಡ್ಯ (೧೪-೯-೧೯೩೦), ಫ್ರೆಂಚ್‌ರಾಕ್ಸ್(ಪಾಂಡವಪುರ), ಮೇಲುಕೋಟೆ, ಮತ್ತು ಕೊಡಿಯಾಲ (೧೭-೫-೧೯೩೧), ಪಾಲಹಳ್ಳಿ (೧೬-೬-೧೯೩೩) ಮತ್ತು ಬೆಳಗೊಳ (೧-೧೨-೧೯೩೩), ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. ೧೯೪೬ರಲ್ಲಿ ಅಂದಿನ ಮೈಸೂರು ಸಂಸ್ಥಾನದಲ್ಲಿ ೨೫೫ ಗ್ರಾಮ ಹಾಗೂ ಪಟ್ಟಣಗಳಿಗೆ ವಿದ್ಯುತ್ ಒದಗಿಸಲಾಗಿದ್ದು, ಅವುಗಳಲ್ಲಿ ಮಂಡ್ಯ ಜಿಲ್ಲೆಯ ೧೭ ಪಟ್ಟಣ ಹಾಗೂ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದ್ದು, ಅದರ ತಾಲೂಕುವಾರು ವಿವರ ಮುಂದೆ ತೋರಿಸಿದಂತಿದೆ. ಮಂಡ್ಯ(೦೩), ಮದ್ದೂರು (೦೪), ಮಳವಳ್ಳಿ (೦೧), ಶ್ರೀರಂಗಪಟ್ಟಣ (೦೫), ಪಾಂಡವಪುರ ಹಾಗೂ ಕೃಷ್ಣರಾಜಪೇಟೆಗಳಲ್ಲಿ ತಲಾ ೨ ಹಳ್ಳಿಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲಾಗಿತ್ತು. ಮಂಡ್ಯ ಜಿಲ್ಲೆಯಲ್ಲಿ ವಿದ್ಯುತ್ ಪಡೆದ ಹಳ್ಳಿಗಳ ಸಂಖ್ಯೆ ಹಾಗೂ ಆವರಣದಲ್ಲಿ ವಿದ್ಯುದೀಕರಣಗೊಂಡಿರುವ ನೀರಾವರಿ ಪಂಪುಸೆಟ್ಟುಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ. ೧೯೬೫-೬೬ರಲ್ಲಿ ಕೇವಲ ೩೧೧ ಪಟ್ಟಣ ಹಾಗೂ ಗ್ರಾಮಗಳಿಗೆ (೮೭೧) ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. ೧೯೭೦-೭೧ರಲ್ಲಿ ೫೪೩ ಹಳ್ಳಿಗಳಿಗೂ (೩,೮೮೭), ೧೯೭೪-೭೫ರಲ್ಲಿ ೮೭೬ (೫,೯೭೫), ೧೯೭೯-೮೦ರಲ್ಲಿ ೧,೦೬೧ (೮,೨೫೮), ೧೯೯೦-೯೧ರಲ್ಲಿ ೧,೩೫೦ (೧೬,೮೦೦), ೧೯೯೪-೯೫ರಲ್ಲಿ ೧೩೭೯ (೨೪,೧೬೬), ೨೦೦೧-೦೨ರಲ್ಲಿ ಒಟ್ಟು ೧,೩೫೧ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕಗಳನ್ನು ಕಲ್ಪಿಸಿಕೊಡಲಾಯಿತು. ಜೊತೆಗೆ ೪೬೮ ಉಪ ಗ್ರಾಮಗಳಿಗೂ (ಹ್ಯಾಮ್ಲೆಟ್‌ಗಳು) ವಿದ್ಯುತ್ (೪೧,೭೦೯) ಸೌಲಭ್ಯ ಕಲ್ಪಿಸಿಕೊಡಲಾಯಿತು. ಹೆಚ್ಚಿನ ವಿವರಗಳಿಗೆ ಮುಂದಿನ ಕೋಷ್ಟಕ ೮.೨೭ ಅನ್ನು ನೋಡಿ.

**ಕೋಷ್ಟಕ ೮.೨೭ ಜಿಲ್ಲೆಯಲ್ಲಿ ವಿದ್ಯುತ್ ಬಳಕೆಯ ವಿವರ (ಯೂನಿಟ್ಟುಗಳಲ್ಲಿ)**

| ವರ್ಷಗಳು | ಗೃಹಬಳಕೆ | ವಾಣಿಜ್ಯ | ಕೈಗಾರಿಕೆ ಶಕ್ತಿ | ದಾರಿದೀಪ | ನೀರಾವರಿ | ಒಟ್ಟು |
|---|---|---|---|---|---|---|
| ೧೯೬೦-೬೧ | ೭೮,೯೨,೮೮೮ | ೨೯,೫೮,೧೧೫ | ೧,೨೬,೫೮,೪೧೯ | ೬೯,೩೬೫ | ೨೨,೧೦,೩೬೫ | ೧,೮೬,೮೫,೫೫೨ |
| ೧೯೭೦-೭೧ | ೧,೦೮,೬೧,೯೯೮ | ೩೧,೦೪,೧೧೨ | ೧,೮೮,೧೨,೩೧೩ | ೧,೧೦,೧೫೨ | ೨,೩೧,೮೫೪ | ೩,೫೨,೦೬,೯೨೯ |
| ೧೯೮೦-೮೧ | ೧,೫೮,೪೧,೧೦೬ | ೩೨,೯೮,೧೦೯ | ೨,೦೦,೧೫,೪೧೫ | ೨,೫೪,೨೪೩ | ೩೯,೬೫,೪೦೧ | ೪,೩೩,೭೨,೨೭೪ |
| ೧೯೯೦-೯೧ | ೧,೯೮,೦೨,೪೦೨ | ೩೩,೦೧,೬೦೦ | ೨,೪೨,೨೨,೧೦೬ | ೩,೦೧,೩೧೪ | ೪೨,೭೩,೪೦೪ | ೫,೧೯,೦೦,೮೨೬ |
| ೧೯೯೫-೯೬ | ೪,೧೧,೪೭,೬೭೩ | ೫೦,೭೯,೯೨೩ | ೩,೬೧,೦೩,೧೨೭ | ೫೧,೬೦,೬೭೮ | ೮೦,೫೬,೬೮೯ | ೯,೫೫,೪೮,೦೯೬ |
| ೧೯೯೯-೨೦೦೦ | ೫,೨೧,೧೭,೦೦೩ | ೬೨,೯೩,೪೦೫ | ೩,೨೫,೯೯,೫೬೯ | ೫೮,೮೮,೩೬೫ | ೯೦,೧೪,೧೧೬ | ೧೦,೫೯,೧೨,೪೫೮ |
| ೨೦೦೧-೦೨ | ೪,೨೭,೩೭,೫೪೩ | ೬೯,೨೫,೯೨೫, | ೧೬,೨೮,೪೬,೨೬೨ | – | – | ೨೧,೨೫,೦೯,೭೩೦ |

ಆಧಾರ : ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಮಂಡ್ಯ ಮತ್ತು ಪಾಂಡವಪುರ ಉಪವಿಭಾಗಗಳ ಕಚೇರಿ

## ಸಾರಿಗೆ ಮತ್ತು ಸಂಪರ್ಕ

ಮಂಡ್ಯ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ ಕೇವಲ ೭೩ ಕಿ.ಮೀ ಇದೆ. ಜಿಲ್ಲೆಯಲ್ಲಿ ೧೯೮೫ರಲ್ಲಿ ೧೬೮ ಕಿ.ಮೀ ರಾಜ್ಯಹೆದ್ದಾರಿಗಳಿತ್ತು. ೧೯೮೮ರಲ್ಲಿ ೨೮೮ ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳಿದ್ದವು. ೨೦೦೦ದವರೆವಿಗೂ ಈ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಜಿಲ್ಲೆಯಲ್ಲಿ ೧೯೮೫ರಲ್ಲಿ ೫೯೯ ಕಿ.ಮೀ ಉದ್ದದ ಜಿಲ್ಲಾ ರಸ್ತೆಗಳಿದ್ದು, ಇವುಗಳ ಉದ್ದ ೧೯೮೮ರಲ್ಲಿ ೯೦೬ ಕಿ.ಮೀ., ೧೯೮೯ ರಿಂದ ೧೯೯೨ರವರೆಗೆ ೯೦೩ ಕಿ.ಮೀ.; ೧೯೯೩ರಲ್ಲಿ ೧೩೪೦ ಕಿ.ಮೀ; ಮತ್ತು ೨೦೦೦ದಲ್ಲಿ ೧೩೪೦ ಕಿ.ಮೀಗಳಷ್ಟಿತ್ತು. ಇವಲ್ಲದೇ ಇತರ ಜಿಲ್ಲಾ ರಸ್ತೆಗಳು, ಹಳ್ಳಿ ರಸ್ತೆಗಳು, ನೀರಾವರಿ ಇಲಾಖೆಯ ರಸ್ತೆಗಳು, ತಾಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳು ಮತ್ತು ಅರಣ್ಯ ರಸ್ತೆಗಳು ಸೇರಿ ೧೯೮೫ರಲ್ಲಿ ೮೧೦೪ ಕಿ.ಮೀ; ೧೯೯೦ರಲ್ಲಿ ೮೦೭೮ ಕಿ.ಮೀ; ಮತ್ತು ೨೦೦೨ರಲ್ಲಿ ೮,೩೦೯ ಕಿ.ಮೀ ನಷ್ಟು ಇದ್ದು, ಅದರಲ್ಲಿ ೭೩ ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಹಾಗೂ ೨೪೪ ಕಿ.ಮೀ. ರಾಜ್ಯ ಹೆದ್ದಾರಿಗಳಿದ್ದವು.

ಜಿಲ್ಲೆಯಲ್ಲಿ ೧೯೯೪-೯೫ರಲ್ಲಿ ೮೩.೧೫ ಕಿ.ಮೀ. ಉದ್ದದ ರೈಲು ಮಾರ್ಗವಿದ್ದು, ಇದರಲ್ಲಿ ೬೧ ಕಿ.ಮೀ ಬ್ರಾಡ್ ಗೇಜ್ ಮತ್ತು ೨೨.೧೫ ಕಿ.ಮೀ. ಮೀಟರ್‌ಗೇಜ್ ಇತ್ತು. ಜಿಲ್ಲೆಯ ಐದು ತಾಲೂಕುಗಳಿಗೆ ಮಾತ್ರ ರೈಲು ಸಂಪರ್ಕ (ಮಂಡ್ಯ , ಶ್ರೀರಂಗಪಟ್ಟಣ, ಪಾಂಡವಪುರ, ಮದ್ದೂರುಮತ್ತು ಕೃಷ್ಣರಾಜಪೇಟೆ)ವಿರುವುದು. ಮೈಸೂರು-ಬೆಂಗಳೂರು ಮಾರ್ಗವನ್ನು ಬ್ರಾಡ್‌ಗೇಜಿಗೆ ಪರಿವರ್ತಿಸಲಾಗಿದ್ದು, ಈ ಮಾರ್ಗದಲ್ಲಿ ೬೧ ಕಿ.ಮೀ.; ಮೈಸೂರು-ಅರಸೀಕೆರೆ ರೈಲು ಮಾರ್ಗದ ಬ್ರಾಡ್‌ಗೇಜ್ ಪರಿವರ್ತನಾ ಕಾರ್ಯವನ್ನು ದಕ್ಷಿಣ ರೈಲ್ವೆಯು ೧೯೯೨ರಲ್ಲಿ ಕೈಗೆತ್ತಿಕೊಂಡಿತ್ತು. ಈ ಕಾರ್ಯ ೧೯೯೮ರ ವೇಳೆಗೆ ಪೂರ್ಣಗೊಂಡಿತು. ಇದರಲ್ಲಿ ೨೨.೧೫ ಕಿ.ಮೀ. ರೈಲುಮಾರ್ಗ ಜಿಲ್ಲೆಯಲ್ಲಿ ಹಾದುಹೋಗುತ್ತಿದೆ. ಜಿಲ್ಲೆಯಲ್ಲಿ ೧೪ ರೈಲು ನಿಲ್ದಾಣಗಳಿವೆ. ಅವುಗಳಲ್ಲಿ ಬೆಂಗಳೂರು-ಮೈಸೂರು ರೈಲು ಮಾರ್ಗದಲ್ಲಿ ಶ್ರೀರಂಗಪಟ್ಟಣ, ಪಾಂಡವಪುರ ರೈಲ್ವೆ ನಿಲ್ದಾಣ, ಚಂದಗಿರಿ ಕೊಪ್ಪಲು, ಬ್ಯಾಡರಹಳ್ಳಿ, ಎಲಿಯೂರು, ಮಂಡ್ಯ, ಹನಕೆರೆ, ಮದ್ದೂರು,ಮತ್ತು ನಿಡಘಟ್ಟಗಳಲ್ಲಿ ಹಾಗೂ ಮೈಸೂರು-ಅರಸೀಕೆರೆ ಮಾರ್ಗದಲ್ಲಿ ಬೆಳಗೊಳ, ಕೆ.ಆರ್.ಎಸ್. , ಅಕ್ಕಿ ಹೆಬ್ಬಾಳ, ಬೀರವಳ್ಳಿ ಹಾಗೂ ಮಂದಗೆರೆಗಳಲ್ಲಿ ರೈಲು ನಿಲ್ದಾಣಗಳಿವೆ. ಹೆಚ್ಚಿನ ವಿವರಗಳಿಗೆ ಅಧ್ಯಾಯ ಏಳನ್ನು ನೋಡಿ.

**ಅಂಚೆ ಕಚೇರಿಗಳು**

೧೯೭೩-೭೪ ರಿಂದ ೧೯೭೬-೭೭ ರವರೆಗೆ ಜಿಲ್ಲೆಯಲ್ಲಿ ೩೨೭ ಅಂಚೆ ಕಚೇರಿಗಳಿದ್ದರೆ, ೧೯೭೭-೭೮ ರಲ್ಲಿ ೩೨೮, ೧೯೭೮-೭೯ರಲ್ಲಿ ೩೪೬, ಅಂಚೆಕಚೇರಿಗಳಿದ್ದವು. ೧೯೮೩-೮೪ರಲ್ಲಿ ೩೬೨ ಅಂಚೆ ಕಚೇರಿಗಳಿದ್ದರೆ, ೧೯೮೪-೮೫ರಲ್ಲಿ ೩೬೧, ೧೯೮೫-೮೬ ರಲ್ಲಿ ೩೬೦, ೧೯೮೮-೮೯ರಲ್ಲಿಯೂ ಸಹ ೩೬೦ ಅಂಚೆಕಚೇರಿಗಳಿದ್ದವು. ೧೯೯೪-೯೫ ರಿಂದ ೧೯೯೮ ಮಾರ್ಚಿ ಅಂತ್ಯಕ್ಕೆ ೩೬೪ ಅಂಚೆಕಚೇರಿಗಳಿದ್ದವು. ೨೦೦೨ರ ಮಾರ್ಚ್ ಅಂತ್ಯಕ್ಕೆ ಎರಡು ಪ್ರಧಾನ ಅಂಚೆಕಚೇರಿಗಳು (ಮಂಡ್ಯ, ಶ್ರೀರಂಗಪಟ್ಟಣ) ೫೪ ಉಪ ಅಂಚೆಕಚೇರಿಗಳು ಹಾಗೂ ೩೦೮ ಶಾಖಾ ಅಂಚೆ ಕಚೇರಿಗಳಿದ್ದು, ಒಟ್ಟು ೩೬೫ ಅಂಚೆಕಚೇರಿಗಳು ಕಾರ್ಯನಿರ್ವಹಿಸುತ್ತಿದ್ದವು. ೧೯೭೩ರಲ್ಲಿ ೮೧೦ ದೂರವಾಣಿಗಳಿದ್ದರೆ, ೧೯೭೫-೭೬ರಲ್ಲಿ ೧,೦೫೩, ೧೯೭೬-೭೭ರಲ್ಲಿ ೧,೧೨೪, ೧೯೭೭-೭೮ ರಲ್ಲಿ ೧,೩೦೫, ೧೯೭೮-೭೯ರಲ್ಲಿ ೧,೪೬೧, ೧೯೮೮-೮೯ರಲ್ಲಿ ೩,೫೭೫, ೧೯೯೪-೯೫ರಲ್ಲಿ ೯,೨೧೭ ಮತ್ತು ೧೯೯೭-೯೮ರಲ್ಲಿ ೧೭,೬೬೪ ದೂರವಾಣಿ ಸಂಪರ್ಕಗಳಿದ್ದವು. ೨೦೦೨ರ ಮಾರ್ಚಿ ಅಂತ್ಯಕ್ಕೆ ೩೬೫ ಅಂಚೆ ಕಛೇರಿಗಳು, ೧೩೭ ಟೆಲಿಗ್ರಾಫಿಕ್ ಕಛೇರಿಗಳು, ೬೫ ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ೪೧,೫೦೦ ದೂರವಾಣಿ ಸಂಪರ್ಕ ಸೌಲಭ್ಯವನ್ನೊದಗಿಸಿವೆ. (ಹೆಚ್ಚಿನ ವಿವರಗಳಿಗೆ ಅಧ್ಯಾಯ ಏಳು ನೋಡಿ)

## ಜೈವಿಕ ಅನಿಲ ಸ್ಥಾವರ

೧೯೯೦-೯೧ ರಲ್ಲಿ ೩೮೦ ಜೈವಿಕ ಅನಿಲ ಸ್ಥಾವರಗಳ ಸ್ಥಾಪನೆಯ ಗುರಿ ಹೊಂದಿದ್ದು, ಈ ಪೈಕಿ ೧೫೦ ಜೈವಿಕ ಅನಿಲ ಸ್ಥಾವರಗಳನ್ನು ಸ್ಥಾಪಿಸಲಾಯಿತು. ೧೯೯೫-೯೬ರ ವಾರ್ಷಿಕ ಭೌತಿಕ ಗುರಿಯು ೫೦೦ ಆಗಿದ್ದು, ೩೧.೩.೧೯೯೬ ರವರೆಗೆ ೪೮೮ ಜೈವಿಕ ಅನಿಲಯಂತ್ರಗಳನ್ನು ಸ್ಥಾಪಿಸಲಾಯಿತು. ಒಟ್ಟು ರೂ. ೨೫.೦೩೧ ಲಕ್ಷ ಅನುದಾನವನ್ನು ಸಹಾಯಧನವನ್ನಾಗಿ ವೆಚ್ಚ ಮಾಡಲಾಯಿತು. ೧೯೯೬-೯೭ ರಲ್ಲಿ ಜಿಲ್ಲೆಗೆ ೪೦೦ ಭೌತಿಕ ಗುರಿ ಹಾಗೂ ರೂ. ೧೯.೩೦ ಲಕ್ಷ ಆರ್ಥಿಕ ಗುರಿ ನಿಗದಿಪಡಿಸಿದ್ದು, ೩೧.೩.೯೭ರವರೆಗೆ ೨೮೧ ಜೈವಿಕ ಅನಿಲ ಯಂತ್ರಗಳನ್ನು ಸ್ಥಾಪಿಸಿ ಶೇ.೭೦.೨೫ ಭೌತಿಕ ಪ್ರಗತಿಯನ್ನು ಸಾಧಿಸಲಾಗಿದೆ. ರೂ.೧೬.೨೬ ಲಕ್ಷ ಅನುದಾನವನ್ನು ಸಹಾಯಧನ ರೂಪದಲ್ಲಿ ವೆಚ್ಚ ಮಾಡಿ ಶೇ.೮೪.೨೫ರಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಕಳೆದ ವರ್ಷಗಳಿಗೆ ಹೋಲಿಸಿದರೆ, ೨೦೦೦-೦೧ರಲ್ಲಿ ಗಮನಾರ್ಹ ಪ್ರಗತಿಯ ಸಾಧನೆಯಾಗಿರುವುದನ್ನು ಗಮನಿಸಬಹುದಾಗಿದೆ. ಕೋಷ್ಟಕ ೮.೨೮ರಲ್ಲಿ ನೀಡಿರುವ ಮಾಹಿತಿಯನ್ನು ಗಮನಿಸಿದಲ್ಲಿ ಸದರಿ ಸಾಲಿಗೆ ನಿಗಧಿಪಡಿಸಿದ ಗುರಿಯು ೮೦೦ ಘಟಕಗಳಾಗಿದ್ದು, ಸಾಧಿತ ಗುರಿಯು ೮೯೩ ಆಗಿದ್ದವು.

**ಕೋಷ್ಟಕ ೮.೨೮**

| | | ಜೈವಿಕ ಅನಿಲಯಂತ್ರಗಳ ಸಂಖ್ಯೆ | | | |
|---|---|---|---|---|---|
| | ತಾಲೂಕುಗಳು | ಗುರಿ | | ಸಾಧನೆ | |
| | | ೧೯೯೫-೯೬ | ೨೦೦೦-೦೧ | ೧೯೯೫-೯೬ | ೨೦೦೦-೦೧ |
| ೧ | ೨ | ೩ | ೪ | ೫ | ೬ |
| ೧ | ಕೆ.ಆರ್.ಪೇಟೆ | ೮೦ | ೧೦೫ | ೬೨ | ೧೩೬ |
| ೨ | ಮದ್ದೂರು | ೫೫ | ೧೩೭ | ೪೮ | ೨೧೦ |
| ೩ | ಮಳವಳ್ಳಿ | ೬೦ | ೬೦ | ೫೫ | ೩೨ |
| ೪ | ಮಂಡ್ಯ | ೫೦ | ೩೪೮ | ೨೮ | ೪೫೦ |

| ೧ | ೨ | ೩ | ೪ | ೫ | ೬ |
|---|---|---|---|---|---|
| ೫ | ನಾಗಮಂಗಲ | ೫೦ | ೬೦ | ೨೮ | ೨೧ |
| ೬ | ಪಾಚಿಡವಪುರ | ೫೫ | ೪೫ | ೪೦ | ೨೩ |
| ೭ | ಶ್ರೀರಂಗಪಟ್ಟಣ | ೫೦ | ೪೫ | ೨೦ | ೨೧ |
| | ಒಟ್ಟು | ೪೦೦ | ೮೦೦ | ೨೮೧ | ೮೯೩ |

## ಅಸ್ತ್ರ ಒಲೆ

ಅಸ್ತ್ರ ಒಲೆಯನ್ನು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್) ಅಸ್ತ್ರ ತಂಡ ವಿನ್ಯಾಸಗೊಳಿಸಿದೆ. ಅಸ್ತ್ರ ಒಲೆಯು ಹೊಗೆ ರಹಿತ ಸೌಲಭ್ಯವನ್ನು ಕಲ್ಪಿಸಿಕೊಡುವುದರ ಜೊತೆಗೆ ಶೇ.೬೦ ರಷ್ಟು ಉರುವಲನ್ನು ಉಳಿತಾಯ ಮಾಡುತ್ತದೆ. ಸರ್ಕಾರವು ೧೯೯೦–೯೧ ನೇ ಸಾಲಿಗೆ ೪೦೦೦ ಸುಧಾರಿತ ಒಲೆಗಳ ಭೌತಿಕ ಗುರಿಯನ್ನು ನಿಗಧಿಗೊಳಿಸಿ, ಈ ಪೈಕಿ ೩,೮೭೮ ಒಲೆಗಳನ್ನು ಒದಗಿಸಿದೆ. ೧೯೯೫–೯೬ರಲ್ಲಿ ೬,೪೦೦ ಸುಧಾರಿತ ಒಲೆಗಳ ಭೌತಿಕ ಗುರಿಯನ್ನು ನಿಗಧಿ ಪಡಿಸಿ, ಸಹಾಯ ಧನವನ್ನು ಫಲಾನುಭವಿಗಳಿಗೆ ಒದಗಿಸುವುದರ ಮೂಲಕ ಶೇ.೧೦೦ ಕ್ಕೆ ನೂರರಷ್ಟು ಗುರಿ ಸಾಧಿಸಿದೆ.

## ಮಾನವ ಸಂಪತ್ತು

ಜಿಲ್ಲೆಯ ಜನಸಂಖ್ಯೆ ೧೯೦೧ ರಲ್ಲಿ ೪,೮೨,೫೮೧ ಆಗಿದ್ದು, ಇತರೆಡೆಗಳಂತೆ ಕಾಲಕ್ರಮದಲ್ಲಿ ಬೆಳೆದು ೨೦೦೧ರ ಜನಗಣತಿಯ (ತಾತ್ಕಾಲಿಕ) ಪ್ರಕಾರ ೧೭,೬೧,೭೧೮ ಆಗಿದ್ದಿತು. ಮುಂದಿನ ಕೋಷ್ಟಕ ೮.೨೯ರಲ್ಲಿ ಜಿಲ್ಲೆಯ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯ ವಿವರಗಳನ್ನು ನೀಡಲಾಗಿದೆ

**ಕೋಷ್ಟಕ ೮.೨೯ ಜಿಲ್ಲೆಯ ದಶವಾರ್ಷಿಕ ಜನಸಂಖ್ಯಾ ಬೆಳವಣಿಗೆಯ ವಿವರ**

| ವರ್ಷ | ಜನಸಂಖ್ಯೆ | ದಶವಾರ್ಷಿಕ ವ್ಯತ್ಯಾಸ | ದಶವಾರ್ಷಿಕ ಶೇ. ವ್ಯತ್ಯಾಸ | ಪುರುಷರು | ಮಹಿಳೆಯರು | ಸ್ತ್ರೀ–ಪುರುಷರ ಪ್ರಮಾಣ | ಜನಸಾಂದ್ರತೆ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧೯೦೧ | ೪,೮೨,೫೮೧ | – | – | ೨,೩೭,೪೭೧ | ೨,೪೫,೧೧೦ | ೧,೦೩೨ | – |
| ೧೯೧೧ | ೫,೦೪,೧೫೭ | +೨೧,೫೭೬ | +೪.೪೭ | ೨,೪೮,೫೭೪ | ೨,೫೫,೫೮೩ | ೧,೦೨೮ | – |
| ೧೯೨೧ | ೫,೪೨,೪೨೧ | +೩೮,೨೬೪ | +೭.೫೯ | ೨,೭೧,೩೩೧ | ೨,೭೧,೦೯೦ | ೯೯೯ | – |
| ೧೯೩೧ | ೫,೮೧,೮೩೬ | +೩೯,೪೧೫ | +೭.೨೭ | ೨,೯೧,೬೮೬ | ೨,೯೦,೧೫೦ | ೯೯೫ | – |
| ೧೯೪೧ | ೬,೩೪,೭೨೭ | +೫೨,೮೯೧ | +೯.೦೯ | ೩,೨೦,೩೨೩ | ೩,೧೪,೪೦೪ | ೯೮೨ | – |
| ೧೯೫೧ | ೭,೧೬,೫೮೩ | +೮೧,೮೫೬ | +೧೨.೯೦ | ೩,೬೦,೦೧೪ | ೩,೫೬,೫೬೯ | ೯೯೦ | – |
| ೧೯೬೧ | ೮,೯೯,೨೧೦ | +೧,೮೩,೬೨೭ | +೨೫.೪೯ | ೪,೫೭,೧೪೩ | ೪,೪೨,೦೬೭ | ೯೬೭ | ೧೮೧ |
| ೧೯೭೧ | ೧೧,೫೪,೩೭೪ | +೨,೫೫,೧೬೪ | +೨೮.೩೮ | ೫,೮೮,೯೧೪ | ೫,೬೫,೪೬೦ | ೯೬೦ | ೨೩೩ |
| ೧೯೮೧ | ೧೪,೧೮,೧೦೯ | +೨,೬೩,೭೩೫ | +೨೨.೮೫ | ೭,೨೩,೬೭೪ | ೬,೯೪,೪೩೫ | ೯೬೦ | ೨೮೬ |
| ೧೯೯೧ | ೧೬,೪೪,೩೭೪ | +೨,೨೬,೨೬೫ | +೧೫.೯೬ | ೮೩,೫೯೭ | ೮,೦೬,೭೭೭ | ೯೬೩ | ೩೩೧ |
| ೨೦೦೧ | ೧೭,೬೧,೭೧೮ | +೧,೧೭,೩೪೪ | +೭.೧೪ | ೮,೮೭,೩೦೭ | ೮,೭೪,೪೧೧ | ೯೮೫ | ೩೫೫ |

ಸೂಚನೆ : ೨೦೦೧ರ ಜನಗಣತಿಯ ಅಂಕಿಅಂಶಗಳು ತಾತ್ಕಾಲಿಕ ಅಂಕಿಅಂಶಗಳಾಗಿವೆ.

ಆಧಾರ : ೧೯೯೧ರ ಜನಗಣತಿ ಭಾಗ ೨ ಬಿ (೧)

**ಮಾನವ ಶಕ್ತಿ ಯೋಜನೆ :** ವಿವಿಧ ವಲಯ ಮತ್ತು ಕಸುಬುಗಳ ಶ್ರಮದ ಬೇಡಿಕೆ ಮತ್ತು ಪೂರೈಕೆಯನ್ನು ಸರಿದೂಗಿಸಿ ಶ್ರಮವನ್ನು ದಕ್ಷವಾಗಿ ಬಳಸಿಕೊಳ್ಳುವುದೇ ಮಾನವ ಶಕ್ತಿಯ ಯೋಜನೆಯಾಗಿದೆ. ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಈ ಯೋಜನೆ ಸೂಕ್ತ ಪರಿಹಾರವಾಗಬಲ್ಲದು. ಮಂಡ್ಯ ಜಿಲ್ಲೆ ಕೃಷಿ ಪ್ರಧಾನವಾಗಿದ್ದು, ೧೯೬೧ರಲ್ಲಿ ಕೃಷಿಯನ್ನು ಅವಲಂಬಿಸಿದವರ ಪ್ರಮಾಣ ಶೇ.೮೩.೮೭ ಆಗಿದ್ದರೆ, ೧೯೭೧ರಲ್ಲಿ ಶೇ.೮೧.೧೧, ೧೯೮೧ರಲ್ಲಿ ಶೇ.೮೦.೬೦ ಮತ್ತು ೧೯೯೧ ರಲ್ಲಿ ಶೇ.೭೮.೧೮ ರಷ್ಟು ಆಗಿದ್ದಿತು. ಮಾನವ ಶಕ್ತಿ ಯೋಜನೆ ಫಲಕಾರಿಯಾಗಲು ಜನ ಸಾಕ್ಷರತೆ ಹೊಂದುವುದು ಅವಶ್ಯಕ. ಜಿಲ್ಲೆಯಲ್ಲಿ ಸಾಕ್ಷರತೆಯ ಪ್ರಮಾಣ ೧೯೬೧ರಲ್ಲಿ ಕೇವಲ ಶೇ.೧೭.೩೧ ರಷ್ಟಿತ್ತು. ಆದರೆ ೧೯೭೧ರಲ್ಲಿ ಇದು ಶೇ.೨೨.೫೧ಕ್ಕೆ ೧೯೮೧ರಲ್ಲಿ ಶೇ.೩೦.೪೦ಕ್ಕೆ, ೧೯೯೧ರಲ್ಲಿ ಶೇ.೪೮.೧೫ಕ್ಕೆ ೨೦೦೧ರಲ್ಲಿ ೬೧.೨೧ಕ್ಕೆ ಹೆಚ್ಚಳಗೊಂಡಿರುವುದು ಕಂಡು ಬರುತ್ತದೆ. ೧೯೬೧ರ ನಂತರದ ದಶಕಗಳಲ್ಲಿ ಮಂಡ್ಯ ಜಿಲ್ಲೆಯ ಕೆಲಸಗಾರರಲ್ಲಿ ೧೯೬೧ರಲ್ಲಿ ೩,೧೧,೬೪೫, ೧೯೭೧ರಲ್ಲಿ ೨,೨೩,೧೪೩ ಮತ್ತು ೧೯೯೧ರಲ್ಲಿ ೩,೩೮,೨೬೧ ವ್ಯವಸಾಯಗಾರರಿದ್ದರು. ೧೯೬೧ರಲ್ಲಿ ೪೬,೨೧೯ ಮಂದಿ ವ್ಯವಸಾಯ ಕಾರ್ಮಿಕರಿದ್ದರೆ, ೧೯೭೧ರಲ್ಲಿ ಇವರು ೮೧,೭೨೪ಕ್ಕೆ ಮತ್ತು ೧೯೯೧ರಲ್ಲಿ ೧,೫೮,೬೫೬ಕ್ಕೆ ಹೆಚ್ಚಳಗೊಂಡಿದೆ. ವಿವಿರಗಳಿಗೆ ಕೋಷ್ಟಕ ೮.೩೦ಅನ್ನು ನೋಡಿ.

**ಕೋಷ್ಟಕ ೮.೩೦ ೧೯೬೧, ೧೯೭೧ ಮತ್ತು ೧೯೯೧ರಲ್ಲಿದ್ದ ವಿವಿಧ ಕಸುಬಿನ ಕಾರ್ಮಿಕರ ಸಂಖ್ಯೆಯ ವಿವರ**

| | ೧೯೬೧ | ೧೯೭೧ | ೧೯೯೧ |
|---|---|---|---|
| ೧. ವ್ಯವಸಾಯಗಾರರು | ೩,೧೧,೬೪೫ | ೨,೨೩,೧೪೩ | ೩,೩೮,೨೬೧ |
| ೨. ವ್ಯವಸಾಯ ಕಾರ್ಮಿಕರು | ೪೬,೨೧೯ | ೮೧,೭೨೪ | ೧,೫೮,೬೫೬ |
| ೩. ಪಶುಪಾಲನೆ ಅರಣ್ಯ ಮುಂತಾದವು | ೨,೫೮೪ | ೫,೪೯೧ | ೧೬,೮೪೧ |
| ೪. ಗಣಿ ಮತ್ತುಕಲ್ಲುಗಣಿ | | ೪೮೯ | ೩,೪೩೬ |
| ೫. ತಯಾರಿಕೆ ಎ. ಗೃಹ ಕೈಗಾರಿಕೆ | ೧೯,೦೩೧ | ೮,೬೩೭ | ೭,೧೩೪ |
| ಬಿ. ಗೃಹ ಕೈಗಾರಿಕೆ ಬಿಟ್ಟು | ೯,೫೦೨ | ೧೧,೦೭೮ | ೨೧,೩೭೪ |
| ೬. ನಿರ್ಮಾಣ | ೪,೭೨೩ | ೩,೩೦೩ | ೧೦,೦೭೧ |
| ೭. ವ್ಯಾಪಾರ ಮತ್ತು ವಾಣಿಜ್ಯ | ೭,೬೬೬ | ೧೩,೯೩೦ | ೩೩,೩೮೯ |
| ೮. ಸಾರಿಗೆ, ಸಂಗ್ರಹಣೆ ಮತ್ತು ಸಂಪರ್ಕ | ೧,೪೭೦ | ೪,೫೭೦ | ೭,೫೨೩ |
| ೯. ಇತರೆ ಸೇವೆಗಳು | ೨೩,೮೬೫ | ೨೩,೪೮೦ | ೩೮,೯೦೮ |

ಆಧಾರ : ಎಕನಾಮಿಕ್ಸ್ ಟೇಬಲ್ಸ್, ಜನಗಣತಿ ೧೯೬೧, ೧೯೭೧, ಮತ್ತು ೧೯೯೧ ಭಾಗ ೨ ಬಿ (೧)

**ಸಹಕಾರಿ ಚಳವಳಿ**

ತಮ್ಮ ಆರ್ಥಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಜನರು ಸಮಾನತೆಯ ಆಧಾರದ ಮೇಲೆ ಸ್ವಇಚ್ಛೆಯಿಂದ ಸಂಘಟಿತರಾಗಿ, ಗುಂಪುಗೊಂಡು, ನೋಂದಾಯಿಸಿಕೊಂಡು ಆರಂಭಿಸುವ ಸಂಘವನ್ನು ಸಹಕಾರಿ ಸಂಘವೆಂದು ಪರಿಗಣಿಸಲಾಗುವುದು. ಒಬ್ಬನು ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ (each for all and all for each) ಎಂಬುದು ಸಹಕಾರದ ಮೂಲ ತತ್ವವಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ೧೯೬೨ರಲ್ಲಿ ಸಹಕಾರಿ ಉಪನಿಬಂಧಕರ ಕಚೇರಿ ಸ್ಥಾಪನೆಯಾಯಿತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಟ್ಟಣ ಸಹಕಾರ ಸಂಘಗಳು, ವಿವಿದೋದ್ದೇಶ ಸಹಕಾರ ಸಂಘಗಳು, ಹಾಲು ಉತ್ಪಾದಕರ

ಸಹಕಾರಿ ಸಂಘಗಳು, ಗೃಹ ನಿರ್ಮಾಣ ಸಹಕಾರ ಸಂಘಗಳು, ಮಹಿಳಾ ಸಹಕಾರ ಸಂಘಗಳು ಮುಂತಾದವು ಜಿಲ್ಲೆಯಲ್ಲಿದ್ದು, ಅವುಗಳ ಸಂಖ್ಯೆ ಹಾಗೂ ಸದಸ್ಯತ್ವ ಸಂಖ್ಯೆಯನ್ನು ಸಾವಿರದಲ್ಲಿ (ಆವರಣದಲ್ಲಿ) ನೀಡಲಾಗಿದೆ. ೧೯೮೦– ೮೧ರಲ್ಲಿ ೬೬೯ (೫೦೫), ೧೯೮೫–೮೬ ರಲ್ಲಿ ೮೩೯ (೫೮೪), ೧೯೯೦–೯೧ ರಲ್ಲಿ ೧,೧೬೫ (೬೨೫), ೧೯೯೫–೯೬ ರಲ್ಲಿ ೧,೨೧೫ (೬೩೪) ಮತ್ತು ೨೦೦೧–೦೨ರಲ್ಲಿ ೧,೪೪೯ (೬೨೨). ಇದೇ ಅವಧಿಯಲ್ಲಿ ಒಟ್ಟು ಷೇರು ಬಂಡವಾಳ ಮತ್ತು ಸರ್ಕಾರದ ಪಾಲು (ಆವರಣದಲ್ಲಿ ಸಾವಿರ ರೂ.ಗಳಲ್ಲಿ) ಅನುಕ್ರಮವಾಗಿ ರೂ. ೧,೩೬,೮೯೯ (೬೭,೬೪೩), ರೂ. ೧,೫೬,೩೬೭ (೬೯,೦೯೯), ರೂ. ೨,೦೭,೬೨೦ (೭೧,೦೭೯), ರೂ. ೨,೧೦,೧೫೬ (೭೧,೮೯೬) ಮತ್ತು ರೂ. ೪,೧೭,೯೦೧ (೧,೦೮,೪೯೯) ಆಗಿದ್ದಿತು. ಕಾಯ್ದಿಟ್ಟ ನಿಧಿ ಹಾಗೂ ಇತರ ನಿಧಿಗಳು (ಆವರಣದಲ್ಲಿ ಕೊಟ್ಟಿರುವುದು ಪಡೆದ ಸಾಲ ಸಾವಿರಗಳಲ್ಲಿ) ೧೯೮೦–೮೧ ರಲ್ಲಿ ರೂ. ೨,೧೩,೩೬೨ (೪,೧೯,೪೮೭), ೧೯೮೫–೮೬ರಲ್ಲಿ ರೂ. ೨,೭೦,೭೪೨ (೫,೬೩,೮೨೪), ೧೯೯೦–೯೧ ರಲ್ಲಿ ರೂ. ೨,೯೬,೪೧೮ (೭,೭೫,೫೮೨), ೧೯೯೫–೯೬ರಲ್ಲಿ ರೂ. ೩,೫೦,೩೦೨ (೯,೭೬,೮೦೧) ಮತ್ತು ೨೦೦೧–೦೨ರಲ್ಲಿ ರೂ. ೬,೦೬,೯೩೫, (೧೨,೬೨,೬೩೦) ಆಗಿದ್ದಿತು. ಜಿಲ್ಲೆಯಲ್ಲಿ ಏಳು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳಿವೆ. ಒಟ್ಟು ಕೃಷಿ ಪತ್ತಿನ ಸಹಕಾರ ಸಂಘಗಳು ೧೯೮೦–೮೧ ರಲ್ಲಿ ೨೨೧, ೨೦೦೧–೦೨ರಲ್ಲಿ ೨೨೫ ಇದ್ದವು. ಹಾಲು ಉತ್ಪಾದಕ ಸಹಕಾರ ಸಂಘಗಳ ಸಂಖ್ಯೆ ೧೯೮೦–೮೧ ರಲ್ಲಿ ೨೧೬, ೧೯೯೦–೯೧ ರಲ್ಲಿ ೫೨೪ ಮತ್ತು ೨೦೦೧–೦೨ ರಲ್ಲಿ ೭೧೯ ಇದ್ದವು. ಹೆಚ್ಚಿನ ವಿವರಗಳಿಗೆ ಅಧ್ಯಾಯ ೬ಅನ್ನು ನೋಡಿ.

## ಪಂಚವಾರ್ಷಿಕ ಯೋಜನೆಗಳು

ನಾಡಿನ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಪಶುಸಂಗೋಪನೆ, ಸಹಕಾರ ಸಂಘ, ಅರಣ್ಯ, ಶಿಕ್ಷಣ, ಪಂಚಾಯತ್ ರಾಜ್, ಸಮಾಜಕಲ್ಯಾಣ, ಕಾರ್ಮಿಕ ಕಲ್ಯಾಣ, ಮುಂತಾದವುಗಳನ್ನು ಪ್ರಗತಿಯತ್ತ ಮುನ್ನುಗುವಂತೆ ಮಾಡುವುದೇ ಪಂಚವಾರ್ಷಿಕ ಯೋಜನೆಗಳ ಪ್ರಧಾನ ಉದ್ದೇಶಗಳಾಗಿವೆ. ದೇಶದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ಕರ್ನಾಟಕವು ಇಂತಹ ಯೋಜನೆಯ ಅವಶ್ಯಕತೆಯನ್ನು ಮನಗಂಡಿತ್ತು. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಯೋಜಿತ ಆರ್ಥಿಕಾಭಿವೃದ್ಧಿ ೧೯೧೦ರಲ್ಲೇ ಪ್ರಾರಂಭವಾಯಿತು. ಈ ಯೋಜನೆಗಳ ಮಹತ್ವದ ಉದ್ದೇಶ ಬಡತನ ನಿರ್ಮೂಲನೆ, ಆರ್ಥಿಕ ಸ್ವಾವಲಂಬನೆಗಳನ್ನು ಸಾಧಿಸುವುದು ಮುಂತಾದುವೇ ಆಗಿದ್ದವು.

### ಮೊದಲನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಗಳು : (೧೯೫೧–೧೯೫೬ ; ೧೯೫೬–೧೯೬೧)

ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಸಾರಿಗೆ, ಸಂಪರ್ಕ, ಸಾಮಾಜಿಕ ಸೇವಾಕಾರ್ಯಗಳ ಅಭಿವೃದ್ಧಿ, ತಲಾ ಆದಾಯದಲ್ಲಿ ಗಣನೀಯ ಹೆಚ್ಚಳ ಹಾಗೂ ಜೀವನಮಟ್ಟದಲ್ಲಿ ಸುಧಾರಣೆ ಮುಂತಾದವು ಈ ಯೋಜನೆಗಳ ಉದ್ದೇಶವಾಗಿತ್ತು. ಅದರಂತೆ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಸಲುವಾಗಿ ಸುಧಾರಿತ ಬಿತ್ತನೆ ಬೀಜಗಳ ವಿತರಣೆ, ರಸಗೊಬ್ಬರ ಹಾಗೂ ಭತ್ತದ ಬೆಳೆಯಲ್ಲಿ ಜಪಾನೀ ಮಾದರಿಯ ಅನುಕರಣೆ ಹಾಗೂ ತಾಂತ್ರಿಕ ವ್ಯವಸಾಯೋಪಕರಣಗಳ ಬಳಕೆಯಿಂದಾಗಿ ಒಂದನೇ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಆಹಾರ ಪದಾರ್ಥಗಳ ಉತ್ಪಾದನೆ ೫,೬೧,೨೮೮ ಟನ್ ಆಗಿದ್ದಿತು. ಎರಡನೇ ಪಂಚವಾರ್ಷಿಕ ಯೋಜನೆಯು ಮುಕ್ತಾಯಗೊಂಡಾಗ ಇದು ೧೧,೧೦,೩೬೩ ಟನ್ ಗಳಿಗೇರಿತು. ಇದೇ ಅವಧಿಯಲ್ಲಿ ಬಿತ್ತನೆ ಪ್ರದೇಶವು ೩,೬೯,೯೧೮ ಎಕರೆಗಳಿಂದ ೪,೧೩,೭೩೨ ಎಕರೆಗಳಿಗೆ ಹೆಚ್ಚಾಯಿತು. ಮೊದಲೆರಡು ಪಂಚವಾರ್ಷಿಕ ಯೋಜನೆಗಳಲ್ಲಿ ನೀರಾವರಿಗಾಗಿ ಕೊಡಲ್ಪಟ್ಟಿದ್ದ ಒಟ್ಟು ೩೫.೫೩ ಲಕ್ಷ ರೂ.ಗಳಲ್ಲಿ ೩೨.೩೩ ಲಕ್ಷ ರೂ. ವೆಚ್ಚ ಮಾಡಿ ೪೮ ಕೆರೆ, ೧೪೯ ಪಿಕಪ್‌ಗಳು ಹಾಗೂ ಅಣೆಕಟ್ಟುಗಳನ್ನು ನಿರ್ಮಿಸಿ ಅಭಿವೃದ್ಧಿ ಪಡಿಸಲಾಯಿತು. ಈ ಅವಧಿಯಲ್ಲಿ ದನಕರುಗಳ ಆರೋಗ್ಯಕ್ಕೆ ಹೆಚ್ಚು ಗಮನ

ನೀಡಲಾಗಿದ್ದು, ಒಂದನೇ ಯೋಜನೆಯ ಕೊನೆಯಲ್ಲಿ ಕೇವಲ ೧೨ ಪಶು ಆಸ್ಪತ್ರೆಗಳಿದ್ದರೆ, ಎರಡನೇ ಯೋಜನೆಯಲ್ಲಿ ಅವುಗಳ ಸಂಖ್ಯೆ ೨೨ ಕ್ಕೇರಿ, ೨,೧೪೧ ಹಸುಗಳು ಕೃತಕ ಗರ್ಭಧಾರಣೆ ಸೇವೆ ಪಡೆದವು. ಜಿಲ್ಲೆಯಲ್ಲಿದ್ದ ೨೦ ಗ್ರಾಮೀಣ ಪಶುವೈದ್ಯ ಆಸ್ಪತ್ರೆಗಳಲ್ಲಿ ಒಂದು ಗ್ರಾಮೀಣ ಪಶುವೈದ್ಯ ಆಸ್ಪತ್ರೆಯನ್ನು ಉನ್ನತೀಕರಿಸಲಾಯಿತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿಗಾಗಿ ಯಾವುದೇ ಯೋಜನೆಗಳಿರಲಿಲ್ಲ. ಆದರೆ ೧೯೬೦ರಲ್ಲಿ ಮಂಡ್ಯದಲ್ಲಿ ಸಹಾಯಕ ನಿರ್ದೇಶಕರ (ಮೀನುಗಾರಿಕೆ) ಕಚೇರಿಯನ್ನು ತೆರೆದು, ಕಾವೇರಿ ಕಣಿವೆಯಲ್ಲಿ ಮತ್ಸ್ಯ ಸಂಪತ್ತಿನ ಸಮೀಕ್ಷೆ ನಡೆಸಿ, ಮಂಡ್ಯ ತಾಲೂಕಿನಲ್ಲಿ ೪ ಮೀನುಗಾರಿಕೆಯ ಕೇಂದ್ರಗಳನ್ನು ತೆರೆದು ಮೀನು ಸಾಕಾಣಿಕೆ ಪ್ರದರ್ಶನಕ್ಕಿಡಲಾಯಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಮೀನುಗಾರರ ಸಹಕಾರಿ ಸಂಘ ಮತ್ತು ೨೦ ಮೀನು ನರ್ಸರಿಗಳನ್ನು ತೆರೆಯಲಾಯಿತು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅರಣ್ಯದ ಅಭಿವೃದ್ಧಿಗಾಗಿ ನೀಡಲಾದ ಹಣ ೨.೩೩ ಲಕ್ಷ ರೂ.ಗಳಾಗಿದ್ದು, ೨.೨೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಸಹಕಾರಿ ಸಂಘಗಳ ಕ್ಷೇತ್ರದಲ್ಲಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಿಸಿದ ಪ್ರಗತಿ ಅಪಾರವಾಗಿತ್ತು. ಈ ಯೋಜನೆಯ ಅವಧಿಯಲ್ಲಿ ಮಂಡ್ಯ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು (ಡಿ.ಸಿ.ಸಿ. ಬ್ಯಾಂಕ್), ಏಳು ಪ್ರಾಥಮಿಕ ಮಾರ್ಕೆಟಿಂಗ್ ಸಹಕಾರಿ ಸಂಘಗಳು ಹಾಗೂ ನಲವತ್ತು ಪ್ರಾಥಮಿಕ ದೊಡ್ಡ ಸಹಕಾರಿ ಸಂಘಗಳನ್ನು ಸಂಘಟಿಸಲಾಯಿತು. ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯು ೪,೦೦೦ ಸದಸ್ಯರೊಂದಿಗೆ ೧೧೦ ಲಕ್ಷ ರೂ.ಗಳ ಬಂಡವಾಳ ಹೂಡಿಕೆಯೊಂದಿಗೆ ಈ ಯೋಜನಾ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿತು. ಸಾರಿಗೆ ಸಂಪರ್ಕದ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ರೂ. ೧೬,೮೭,೫೨೨ ಗಳ ವೆಚ್ಚವಾಯಿತು. ಕಡಿಮೆ ಆದಾಯ ವರ್ಗದ ಜನರಿಗೆ ಗೃಹ ನಿರ್ಮಾಣಕ್ಕಾಗಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ೧.೦೩ ಲಕ್ಷ ರೂ.ಗಳು ಮಂಜೂರಾಗಿದ್ದು, ಅದರಲ್ಲಿ ೫೨ ಸಾವಿರ ರೂ.ಗಳ ವೆಚ್ಚದಲ್ಲಿ ೨೨ ಮನೆಗಳನ್ನು ನಿರ್ಮಿಸಿಕೊಡಲಾಯಿತು. ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಮೊದಲೆರಡು ಪಂಚವಾರ್ಷಿಕ ಯೋಜನೆಗಳಲ್ಲಿ ಕ್ರಮವಾಗಿ ೫.೨೫ ಲಕ್ಷ ರೂ.ಗಳು ಹಾಗೂ ೬.೭೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು.

**ಮೂರನೆಯ ಪಂಚವಾರ್ಷಿಕ ಯೋಜನೆ : (೧೯೬೧-೬೬)**

ಇದೊಂದು ವ್ಯಾಪಕ ಯೋಜನೆಯಾಗಿದ್ದು, ಕೃಷಿ ಉತ್ಪನ್ನಗಳ ಹೆಚ್ಚು ಉತ್ಪಾದನೆ, ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಸಹಕಾರಿ ಕ್ಷೇತ್ರಗಳ ಅಭಿವೃದ್ಧಿ, ಮಾನವ ಶಕ್ತಿ ಹಾಗೂ ಇತರೆ ಸಂಪತ್ತುಗಳ ಪೂರ್ಣ ಬಳಕೆ, ಶಿಕ್ಷಣ ಹಾಗೂ ವಯಸ್ಕರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವುದೇ ಇದರ ಉದ್ದೇಶವಾಗಿತ್ತು. ಈ ಯೋಜನೆಯಲ್ಲಿ ದೀರ್ಘಕಾಲಿಕ ಕಾರ್ಯಕ್ರಮಗಳಿಗೆ, ಅಪೂರ್ಣವಾಗಿರುವ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು. ಇದರಡಿ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ೧೭೭.೮೪ ಲಕ್ಷ ರೂ.ಗಳನ್ನು ಸಣ್ಣ ನೀರಾವರಿಗೆ ೩೦ ಲಕ್ಷ ರೂ.ಗಳನ್ನು ನೀಡಲಾಗಿದ್ದು, ೪,೪೦೦ ಎಕರೆಗಳಿಗೆ ನೀರು ಒದಗಿಸುವ ಗುರಿ ಹೊಂದಲಾಗಿತ್ತು. ಭೂಸಾರ ಸಂರಕ್ಷಣೆಗೆ ೪.೫೭ ಲಕ್ಷ ರೂ.ಗಳು, ಪಶು ಸಂಗೋಪನೆಗಾಗಿ ೧೬.೩೨ ಲಕ್ಷ ರೂ.ಗಳು, ಮೀನು ಅಭಿವೃದ್ಧಿಗಾಗಿ ೨.೭೫ ಲಕ್ಷ ರೂ.ಗಳು, ಅರಣ್ಯಕ್ಕಾಗಿ ೪.೮೪ ಲಕ್ಷ ರೂ.ಗಳು, ಸಹಕಾರಿ ಕ್ಷೇತ್ರಕ್ಕೆ ೧೬.೯೩ ಲಕ್ಷ ರೂ.ಗಳು, ಗ್ರಾಮ ಕೈಗಾರಿಕೆಗೆ ಮತ್ತು ರೇಷ್ಮೆಗೆ ೧೯.೮೧ ಲಕ್ಷ ರೂ.ಗಳು, ಶಿಕ್ಷಣಕ್ಕೆ ೩೬.೯೫ ಲಕ್ಷ ರೂ.ಗಳು, ಗ್ರಾಮೀಣ ಸೌಲಭ್ಯಗಳಿಗಾಗಿ ೨೩.೯೪ ಲಕ್ಷ ರೂ.ಗಳು ಗ್ರಾಮೀಣ ನೀರು ಸರಬರಾಜಿಗಾಗಿ ೨೦.೧೬ ಲಕ್ಷ ರೂ.ಗಳು, ಆರೋಗ್ಯಕ್ಕೆ ೦.೯೫ ಲಕ್ಷ ರೂ.ಗಳು, ವೈದ್ಯಕೀಯಕ್ಕೆ ೧.೩೩ ಲಕ್ಷ ರೂ.ಗಳು, ಸಾರಿಗೆ ಸಂಪರ್ಕದ ಅಭಿವೃದ್ಧಿಗಾಗಿ ೧.೫೦ ಲಕ್ಷ ರೂ.ಗಳು, ಗ್ರಾಮೀಣ ಮನೆಗಳ ನಿರ್ಮಾಣಕ್ಕೆ ೨.೯೪ ಲಕ್ಷ ರೂ.ಗಳು,ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ೧೧.೯೦ ಲಕ್ಷ ರೂ.ಗಳು, ಸಾಮಾಜಿಕ ಕಲ್ಯಾಣಕ್ಕಾಗಿ ೦.೯೬ ಲಕ್ಷ ರೂ.ಗಳು, ಕಾರ್ಮಿಕರ ಕಲ್ಯಾಣಕ್ಕಾಗಿ ೨.೯೮ ಲಕ್ಷ ರೂ.ಗಳು,

ವಿದ್ಯುತ್ ಕ್ಷೇತ್ರಕ್ಕೆ ೫೯.೯೦ ಲಕ್ಷ ರೂ.ಗಳು ಹಾಗೂ ಅಂಕಿಅಂಶಗಳ ಸಂಗ್ರಹಣೆಗಾಗಿ ೦.೦೭ ಲಕ್ಷ ರೂ.ಗಳು ಹೀಗೆ ಒಟ್ಟು ೪೧೨.೭೦ ಲಕ್ಷ ರೂ.ಗಳನ್ನು ವ್ಯಯಿಸಲಾಯಿತು. ಜಿಲ್ಲೆಯಲ್ಲಿ ಸಮಗ್ರ ಜಿಲ್ಲಾ ಕೃಷಿ ಅಭಿವೃದ್ಧಿ ಕಾರ್ಯಕ್ರಮವನ್ನು ೧೯೬೦–೬೧ ರಲ್ಲಿ ಜಾರಿಗೆ ತರಲಾಯಿತು. ಮೂರನೆಯ ಯೋಜನೆಯ ಅಂತ್ಯಕ್ಕೆ ಜಿಲ್ಲೆಯ ಶೇ.೮೬ ರಷ್ಟು ಜನರು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದರು. ಈ ಅವಧಿಯಲ್ಲಿ ಜಿಲ್ಲೆಯ ಸಾಂಪ್ರದಾಯಿಕ ಬೆಳೆಗಳಾದ ಬತ್ತ, ರಾಗಿ, ಮತ್ತು ಕಬ್ಬುಗಳ ಇಳುವರಿ ಗಮನಾರ್ಹವಾಗಿ ಹೆಚ್ಚಳಗೊಂಡಿತು. ನಂತರದ ೧೯೬೬–೬೯ರವರೆಗಿನ ಮೂರು ವಾರ್ಷಿಕ ಯೋಜನೆಗಳಲ್ಲೂ, ನಾಲ್ಕು ಹಾಗೂ ಐದನೆಯ ಪಂಚವಾರ್ಷಿಕ ಯೋಜನೆಗಳಲ್ಲೂ ಸಹ ಜಿಲ್ಲೆಯ ಅಭಿವೃದ್ಧಿಗಳಾಗಿವೆ.

**ಆರನೆಯ ಪಂಚವಾರ್ಷಿಕ ಯೋಜನೆ : (೧೯೮೦–೮೫)**

ಈ ಯೋಜನೆಯಲ್ಲಿ ಲಾಭದಾಯಕ ಉದ್ಯೋಗಾವಕಾಶಗಳ ನಿರ್ಮಾಣ, ಆದಾಯದ ಅಸಮಾನತೆಯನ್ನು ಕಡಿಮೆ ಮಾಡುವುದು ಮತ್ತು ೧೯೭೯–೮೦ರ ಬೆಲೆಯಲ್ಲಿ ಕನಿಷ್ಟ ರೂ. ೫೦ ಗ್ರಾಮೀಣ ಪ್ರದೇಶದಲ್ಲಿಯೂ ಹಾಗೂ ರೂ.೭೫ ನಗರ ಪ್ರದೇಶದಲ್ಲಿಯೂ ತಲಾ ಬಳಕೆಯ ವೆಚ್ಚಕ್ಕೆ ದೊರಕುವಷ್ಟು ಆದಾಯವಿರುವಂತೆ ನೋಡಿಕೊಂಡು ಶೇ.೫೧ ರಷ್ಟು ಬಡಜನರ ಜೀವನಮಟ್ಟ ಏರುವಂತೆ ನೋಡಿಕೊಳ್ಳುವುದು, ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು, ದ್ವಿದಳ ಧಾನ್ಯಗಳ ಸ್ವಯಂ ಪೂರ್ಣತೆಯನ್ನು ಸಾಧಿಸುವುದು, ಎಲ್ಲಾ ಹಳ್ಳಿಗಳಿಗೂ ವಿದ್ಯುತ್ ಒದಗಿಸುವುದು, ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಸರಬರಾಜು, ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಹಾಗೂ ವಯಸ್ಕರ ಶಿಕ್ಷಣ ಮುಂತಾದ ಸಾಮಾಜಿಕ ಸೌಲಭ್ಯಗಳ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶಗಳನ್ನು ಹೊಂದಲಾಗಿತ್ತು. ಈ ಅವಧಿಯ ಮೊದಲನೇ ವರ್ಷದಲ್ಲಿ ಜಿಲ್ಲೆಯ ಪ್ರಗತಿಗಾಗಿ ಮೀಸಲಾಗಿಟ್ಟ ಹಣ ೪೩೬.೫೫ ಲಕ್ಷ ರೂ., ಆದರೆ, ವೆಚ್ಚ ಮಾಡಿದ ಹಣ ೩೪೦.೯೦ ಲಕ್ಷ ರೂ.ಗಳಾಗಿತ್ತು. ೧೯೮೩–೮೪ರಲ್ಲಿ ಮೀಸಲಾಗಿಟ್ಟ ಹಣ ೮೯೫.೫೦ ಲಕ್ಷ ರೂ.ಗಳು, ವೆಚ್ಚ ಮಾಡಿದ ಹಣ ೭೦೪.೪೭ ಲಕ್ಷ ರೂ.ಗಳು, ೧೯೮೪–೮೫ ರಲ್ಲಿ ಮೀಸಲಾಗಿಟ್ಟ ಹಣ ೧,೦೮೬.೭೭ ಲಕ್ಷ ರೂ.ಗಳು, ವೆಚ್ಚ ೧,೧೧೧.೩೪ ಲಕ್ಷ ರೂ.ಗಳಾಗಿತ್ತು. ಈ ಯೋಜನೆಯ ಅವಧಿಯಲ್ಲಿ ತಲಾ ಆದಾಯ ಚಾಲ್ತಿ ಬೆಲೆಯಲ್ಲಿ ೧೯೮೦–೮೧ರಲ್ಲಿ ೧,೫೧೩.೬೮ ರೂ.ಗಳಾಗಿದ್ದರೆ, ೧೯೮೪–೮೫ರಲ್ಲಿ ೧,೭೯೭ ರೂ.ಗಳಿಗೆ ಹೆಚ್ಚಾಯಿತು. ೧೯೮೩–೮೪ರಲ್ಲಿ ಪ್ರತೀ ತಾಲೂಕಿಗೆ ೧೦೦ ಬಾವಿಗಳು ಕಾರ್ಯಕ್ರಮದಡಿ ವಾರ್ಷಿಕ ಗುರಿ ೭೦೦ ಆಗಿದ್ದು, ೪೪೨ ಬಾವಿಗಳನ್ನು ತೋಡಿಸಿ, ಶೇ.೮೧.೪೩ರಷ್ಟು ಪ್ರಗತಿ ಸಾಧಿಸಲಾಗಿದೆ. ಅಂತ್ಯೋದಯದಡಿಯಲ್ಲಿ ಗುರುತಿಸಲಾದ ಫಲಾನುಭವಿಗಳಲ್ಲಿ ೪೭೭ ಜನರಿಗೆ ಸೌಲಭ್ಯ ಕಲ್ಪಿಸಿ ಶೇ.೪೫ರಷ್ಟು ಪ್ರಗತಿ ಸಾದಿಸಲಾಗಿದೆ. ಇದಕ್ಕಾಗಿ ಮಂಜೂರಾದ ಸಹಾಯ ಧನ ೧,೬೪,೧೦೦ ರೂ.ಗಳಾಗಿದ್ದು, ಗ್ರಾಮೀಣ ವಸತಿ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳ ಸಂಖ್ಯೆ ೨೪,೧೮೦ ಆಗಿದ್ದಿತು. ಅವುಗಳ ಪೈಕಿ ೨೧,೯೫೩ ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ಶೇ.೯೦.೭೯ ರಷ್ಟು ಪ್ರಗತಿ ಸಾಧಿಸಲಾಗಿದೆ.

**ಏಳನೆಯ ಪಂಚವಾರ್ಷಿಕ ಯೋಜನೆ : (೧೯೮೫–೯೦)**

ಈ ಯೋಜನೆಯಲ್ಲಿ ಬಡತನ ನಿರ್ಮೂಲನಾ ಕಾರ್ಯಕ್ರಮದಡಿ ಬಡತನವನ್ನು ಕಡಿಮೆಗೊಳಿಸುವುದು, ಕನಿಷ್ಟ ಅಗತ್ಯಗಳ ಕಾರ್ಯಕ್ರಮದ ವಿಸ್ತರಣೆಯ ಮೂಲಕ ಸಾಧಿಸಲಾಗುವ ಸಾಮಾಜಿಕ ಒಳಿತು ಹಾಗೂ ಸೇವೆಗಳಿಗೆ ಅವಕಾಶ ಕಲ್ಪಿಸುವುದು, ರಸ್ತೆ, ಸಾರಿಗೆ, ಕೃಷಿ ಮತ್ತು ಇತರ ಸಂಬಂಧಪಟ್ಟ ಸೇವೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು ಇವುಗಳಿಗೆ ಒತ್ತು ನೀಡಲಾಗಿತ್ತು. ಈ ಯೋಜನೆಯಲ್ಲಿ ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಒಟ್ಟು ೮,೦೫೯.೧೦ ಲಕ್ಷ ಮೀಸಲಾಗಿರಿಸಿದ್ದು, ಅದರಲ್ಲಿ ೬,೯೩೬.೫೯ ಲಕ್ಷ

ರೂ.ಗಳನ್ನು ವೆಚ್ಚ ಮಾಡಲಾಯಿತು. ೧೯೮೫–೮೬ ಹಾಗೂ ೧೯೮೮–೮೯ರಲ್ಲಿ ವಿವಿಧ ವಲಯವಾರು ಹಣ ಒದಗಿಸಿದ್ದು, ಹಾಗೂ ಭರಿಸಿದ ವೆಚ್ಚದ ವಿವರಗಳನ್ನು ಈ ಮುಂದಿನ ಕೋಷ್ಟಕ ೮.೩೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೧**

| ಕ್ರಮಸಂಖ್ಯೆ | ವಲಯಗಳು | ಮೀಸಲಾಗಿಟ್ಟ ಹಣ (ಲಕ್ಷ ರೂ.ಗಳಲ್ಲಿ) | ವೆಚ್ಚ ಮಾಡಿದ ಹಣ (ಲಕ್ಷ ರೂ.ಗಳಲ್ಲಿ) |
|---|---|---|---|
| ೧ | ವ್ಯವಸಾಯ | ೮೯.೦೦ | ೬೬.೭೧ |
| ೨ | ತೋಟಗಾರಿಕೆ | ೨೭.೬೫ | ೨೪.೯೧ |
| ೩ | ಪಶುಸಂಗೋಪನೆ | ೧೩.೮೫ | ೧೭.೧೬ |
| ೪ | ವಸತಿ | ೨೪೬.೩೦ | ೫೫.೫೪ |
| ೫ | ಅರಣ್ಯ | ೧೮೪.೦೧ | ೧೬೮.೭೭ |
| ೬ | ಹಿಂದುಳಿದ ವರ್ಗಗಳ ಮತ್ತು ಪಂಗಡಗಳ ಕಲ್ಯಾಣ | ೧೯.೯೪ | ೧೯.೩೮ |
| ೭ | ಮೀನುಗಾರಿಕೆ | ೧೧.೦೨ | ೧೦.೬೭ |
| ೮ | ರೇಷ್ಮೆ | ೨೪೩.೬೮ | ೨೩೮.೯೯ |
| ೯ | ರಸ್ತೆ ಮತ್ತು ಸೇತುವೆ | ೨೭೬.೨೮ | ೩೩೧.೮೩ |
| ೧೦ | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | ೧೯೪.೯ | ೬೩.೦೪ |
| ೧೧ | ಸಾರ್ವಜನಿಕ ಆರೋಗ್ಯ | ೩೨೧.೪೯ | ೧೯೯.೬೬ |
| ೧೨ | ಕುಡಿಯುವ ನೀರು ಸರಬರಾಜು | ೫೫೩.೧೬ | ೫೧೫.೮೭ |
| ೧೩ | ಗ್ರಾಮೀಣ ಸಣ್ಣ ಕೈಗಾರಿಕೆ | ೮೧.೦೨ | ೬೫.೧೦ |

ಸೂಚನೆ : ಮೇಲೆ ಸೂಚಿಸಲಾಗಿರುವ ಹಣವು ೧೯೮೫–೮೬, ೧೯೮೬–೮೭ ಹಾಗೂ ೧೯೮೮–೮೯ರ ಮೂರು ವರ್ಷಗಳಲ್ಲಿ ಮೀಸಲಾಗಿಟ್ಟ ಒಟ್ಟು ಹಣವನ್ನು ಒಳಗೊಂಡಿರುತ್ತದೆ.

ಈ ಯೋಜನೆಯು ಪ್ರಾರಂಭವಾಗುವುದಕ್ಕೆ ಹಿಂದಿನ ವರ್ಷ ತಲಾವರಮಾನ ಚಾಲ್ತಿ ಬೆಲೆಯಲ್ಲಿ ಕೇವಲ ರೂ. ೧೯೦೫.೭೭ ಗಳಾಗಿತ್ತು. ಇದು ಯೋಜನಾ ಆವಧಿಯ ಕೊನೆಯ ಹೊತ್ತಿಗೆ ರೂ. ೨೫೫೬.೭೪ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯ ಅಭಿವೃದ್ಧಿಯ ಸಂಕೇತವಾಗಿದೆ. ಸಾರಿಗೆ ಕ್ಷೇತ್ರದಲ್ಲಿ ೧೯೮೬–೮೭ರಲ್ಲಿ ಒಟ್ಟು ೮೧೧೪ ಕಿ.ಮೀ. ಉದ್ದದ ರಸ್ತೆಗಳಿದ್ದು, ೧೯೮೮–೮೯ರ ಅಂತ್ಯಕ್ಕೆ ೮೧೮೧ ಕಿ.ಮೀ. ಆಗಿತ್ತು. ಕೊಳವೆ ಬಾವಿಗಳ ಸಂಖ್ಯೆ ೫೦೮೧ ರಿಂದ ೫೬೭೦ ಕ್ಕೆ ಹೆಚ್ಚಳಗೊಂಡಿತ್ತು. ೧೧,೬೮೦ ನೀರಾವರಿ ಪಂಪುಸೆಟ್ಟುಗಳು ವಿದ್ಯುದ್ದೀಕರಣಗೊಂಡಿದ್ದರೆ, ೧೯೮೭ರ ಮಾರ್ಚ್ ಅಂತ್ಯಕ್ಕೆ ೧೩,೪೩೦ ಪಂಪುಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಒದಗಿಸಲಾಗಿತ್ತು.

ನಂತರದ ಎರಡು ವಾರ್ಷಿಕ ಯೋಜನೆಗಳಲ್ಲಿ ಜಿಲ್ಲೆಯ ಪ್ರಗತಿಗಾಗಿ ೧೯೯೦–೯೧ ರಲ್ಲಿ ಮೀಸಲಿಟ್ಟಿದ್ದ ಹಣ ೨,೧೫೨.೫೨ ಲಕ್ಷ ರೂ.ಗಳಾಗಿದ್ದರೆ, ನೈಜ ವೆಚ್ಚ ೧,೯೪೫.೩೯ ಲಕ್ಷ ರೂ.ಗಳಾಗಿತ್ತು. ೧೯೯೧–೯೨ರ ವಾರ್ಷಿಕ ಯೋಜನೆಯ ಅವಧಿಯಲ್ಲಿ ಕೊಡಲ್ಪಟ್ಟ ಹಣ ೨,೨೯೪.೦೭ ಲಕ್ಷ ರೂ.ಗಳಾಗಿದ್ದರೆ, ವಾಸ್ತವ ವೆಚ್ಚ ೨,೨೯೪.೩೯ ಲಕ್ಷ ರೂ.ಗಳಾಗಿತ್ತು. ಈ ಅವಧಿಗಳಲ್ಲಿ ವಲಯವಾರು ಮೀಸಲಿಟ್ಟಿದ್ದ ಹಣವನ್ನು ಹಾಗೂ ಕಂಸದಲ್ಲಿ ವಾಸ್ತವವಾಗಿ

ವೆಚ್ಚ ಮಾಡಿರುವ ಹಣವನ್ನು ಲಕ್ಷ ರೂ.ಗಳಲ್ಲಿ ನೀಡಲಾಗಿದೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ೪೯೩.೭೧ (೪೪೫.೧೩) ಲಕ್ಷ ರೂ.ಗಳಾಗಿತ್ತು. ವಯಸ್ಕರ ಶಿಕ್ಷಣಕ್ಕೆ ೧೦೫.೩ (೫೨.೨೫) ಲಕ್ಷ ರೂ.ಗಳು, ಯುವಜನ ಸೇವೆ ಹಾಗೂ ಕ್ರೀಡೆಗೆ ೧೧.೩೦ (೧೧.೨೦) ಲಕ್ಷ ರೂ., ಗ್ರಾಮೀಣ ಆರೋಗ್ಯಕ್ಕೆ ೨೦೬.೯೬ (೧೮೩.೦೬) ಲಕ್ಷ ರೂ.ಗಳು, ಕುಟುಂಬ ಕಲ್ಯಾಣಕ್ಕೆ ೨೭೦.೪೨ (೨೪೭.೬೦) ಲಕ್ಷ ರೂ., ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯಕ್ಕೆ ೪೫೬.೮೪ (೩೯೨.೭೩) ಲಕ್ಷ ರೂ.ಗಳು, ಗೃಹ ನಿರ್ಮಾಣಕ್ಕೆ ೪೧.೨೩ (೨೫.೬೮) ಲಕ್ಷ ರೂ.ಗಳು, ಸಮಾಜ ಕಲ್ಯಾಣ ೯೩.೬೧ (೧೦೪.೬೭) ಲಕ್ಷ ರೂ.ಗಳು, ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ೩೪.೦೪ (೩೪.೨೫) ಲಕ್ಷ ರೂ.ಗಳು, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಹಾಯ ಧನ ೨೯೭.೦೩ (೨೬೫.೬೪) ಲಕ್ಷ ರೂ.ಗಳು, ಜವಾಹರ್ ರೋಜ್ ಗಾರ್ ಯೋಜನೆ ೮೭೭.೧೦ (೭೪೪.೮೫) ಲಕ್ಷ ರೂ.ಗಳು, ರೇಷ್ಮೆ ೧೭೩.೧೫ (೧೭೪.೧೨) ಲಕ್ಷ ರೂ.ಗಳು ಹಾಗೂ ರಸ್ತೆ ಮತ್ತು ಸೇತುವೆ ನಿರ್ಮಾಣ ೨೧೪.೭೩ (೧೧೮.೯೯) ಲಕ್ಷ ರೂ.ಗಳನ್ನು ಜಿಲ್ಲೆಯ ಅಭಿವೃದ್ಧಿಗಾಗಿ ನೀಡಲಾಗಿತ್ತು. ತತ್ಪರಿಣಾಮವಾಗಿ ೧೯೯೦–೯೧ರಲ್ಲಿ ಜಿಲ್ಲೆಯಲ್ಲಿದ್ದ ತಲಾ ವರಮಾನ ೩,೯೨೪ ರೂ.ಗಳಿಂದ ೧೯೯೧–೯೨ರಲ್ಲಿ ೪,೮೨೭ ರೂ.ಗಳಿಗೆ ಹೆಚ್ಚಳಗೊಂಡಿರುವುದು ಜಿಲ್ಲೆಯು ಸಾಧಿಸಿರುವ ಪ್ರಗತಿಯನ್ನು ಸೂಚಿಸುತ್ತದೆ.

### ೮ನೇ ಪಂಚವಾರ್ಷಿಕ ಯೋಜನೆ : (೧೯೯೨–೯೭)

ಈ ಯೋಜನೆಯು ಬಡತನ ನಿರ್ಮೂಲನೆ, ಉದ್ಯೋಗ ನಿರ್ಮಾಣ, ಜನರ ಮೂಲಭೂತ ಅವಶ್ಯಕತೆಗಳ ಪೂರೈಕೆ, ಸಮರ್ಪಕ ಆರ್ಥಿಕ ಬೆಳವಣಿಗೆ, ಅದರಲ್ಲೂ ಪ್ರಮುಖವಾಗಿ ನೀರಾವರಿ, ವಿದ್ಯುತ್, ಕೃಷಿ ಹಾಗೂ ಕೈಗಾರಿಕೆಗಳಂತಹ ಮುಖ್ಯ ಘಟಕಗಳ ಅಭಿವೃದ್ಧಿ ಮುಂತಾದ ಉದ್ದೇಶಗಳನ್ನು ಹೊಂದಿದ್ದು, ಅದಕ್ಕಾಗಿ ಕಾಯ್ದಿರಿಸಿದ ಒಟ್ಟು ಮೊತ್ತ ೧೭,೮೮೦.೧೬ ಲಕ್ಷ ರೂ.ಗಳಿದ್ದು, ನೈಜ ವೆಚ್ಚ ೧೮,೬೬೨.೯೦ ಲಕ್ಷ ರೂ.ಗಳಾಗಿವೆ. ಈ ಯೋಜನಾ ಅವಧಿಯಲ್ಲಿ ಪ್ರಮುಖ ವಲಯಗಳಿಗೆ ವೆಚ್ಚ ಮಾಡಿರುವ ಮಾಹಿತಿಯನ್ನು ಈ ಮುಂದಿನ ಕೋಷ್ಟಕ ೮.೩೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೨**

(ಲಕ್ಷ ರೂ.ಗಳಲ್ಲಿ)

| ಕ್ರ.ಸಂ. | ವಿವರ | ಮೀಸಲಾಗಿಟ್ಟ ಹಣ (ಲಕ್ಷ ರೂ.ಗಳಲ್ಲಿ) | ವೆಚ್ಚ ಮಾಡಿದ ಹಣ (ಲಕ್ಷ ರೂ.ಗಳಲ್ಲಿ) |
|---|---|---|---|
| ೧ | ೨ | ೩ | ೪ |
| ೧ | ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ | ೨೨೪೯.೮೩ | ೨೩೨೦.೯೮ |
| ೨ | ವಯಸ್ಕರ ಶಿಕ್ಷಣ | ೮೫.೩೬ | ೭೦.೦೫ |
| ೩ | ಯುವಜನ ಸೇವೆ ಮತ್ತು ಕ್ರೀಡೆ | ೮೧.೯೫ | ೮೦.೦೩ |
| ೪ | ಗ್ರಾಮೀಣ ಆರೋಗ್ಯ | ೯೦೦.೫೦ | ೭೧೩.೨೬ |
| ೫ | ಕುಟುಂಬ ಕಲ್ಯಾಣ | ೧,೦೨೨.೩೪ | ೮೯೦.೧೪ |
| ೬ | ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ | ೨,೨೩೧.೫೩ | ೨,೮೩೮.೬೦ |
| ೭ | ಗೃಹ ನಿರ್ಮಾಣ | – | – |

| ೧ | ೨ | ೩ | ೪ |
|---|---|---|---|
| ೮ | ಸಮಾಜ ಕಲ್ಯಾಣ | ೫೪೩.೮೮ | ೭೪೭.೧೮ |
| ೯ | ಹಿಂದುಳಿದ ವರ್ಗಗಳ ಕಲ್ಯಾಣ | ೨೩.೨.೯೪ | ೨೩೪.೪೩ |
| ೧೦ | ವಿಶೇಷ ಘಟಕ ಯೋಜನೆ | ೩೯೨.೨೧ | ೩೮೩.೯೦ |
| ೧೧ | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ೬೪೩.೮೯ | ೬೨೦.೫೯ |
| ೧೨ | ವ್ಯವಸಾಯ | ೩೦೬.೮೪ | ೨೮೯.೮೯ |
| ೧೩ | ಭೂಸಾರ ಸಂರಕ್ಷಣೆ | ೬.೧೫ | ೫.೦೨ |
| ೧೪ | ಸಮಗ್ರ ಗ್ರಾಮೀಣ ಅಭಿವೃದ್ಧಿ ಉಸ್ತುವಾರಿ ಘಟಕ | ೩.೨೪.೩೦ | ೩೦೦.೩೦ |
| ೧೫ | ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಹಾಯ ಧನ | ೯೨೫.೨೦ | ೯೨೮.೫೩ |
| ೧೬ | ಜವಾಹರ್ ರೋಜ್‌ಗಾರ್ ಯೋಜನೆ, | ೨,೮೧೧.೭೯ | ೩೧೦೬.೯೮ |
| ೧೭ | ರೇಷ್ಮೆ | ೧೭೦.೦೨ | ೧೫೬.೫೧ |
| ೧೮ | ರಸ್ತೆ ಮತ್ತು ಸೇತುವೆ | ೭೫೦.೧೭ | ೮೪೪.೦೫ |

ಈ ಯೋಜನೆಯ ಪ್ರಾರಂಭದಲ್ಲಿ ಒಟ್ಟು ಕೃಷಿ ಉತ್ಪಾದನೆಯಲ್ಲಿ ೪.೩೪ ಲಕ್ಷ ಟನ್ ಏಕದಳ ಧಾನ್ಯ, ೩೦,೭೦೧ ಟನ್ ದ್ವಿದಳ ಧಾನ್ಯ, ೨೫,೯೧ ಟನ್ ವಿವಿಧ ಎಣ್ಣೆಕಾಳುಗಳಿದ್ದು, ಹಾಗೂ ಜಿಲ್ಲೆಯು 'ಮಧುರ ಮಂಡ್ಯ' ಎಂಬ ಖ್ಯಾತಿಗೆ ಕಾರಣವಾಗಿರುವ ಕಬ್ಬಿನ ಉತ್ಪಾದನೆ ೩೦,೯೮,೨೪೬ ಟನ್ ಆಗಿತ್ತು. ಜಿಲ್ಲೆಯ ಗ್ರಾಮಾಂತರ ಪ್ರದೇಶಗಳ ರಸ್ತೆ ಹಾಗೂ ಸೇತುವೆಗಳ ದುರಸ್ತಿಗಾಗಿ ೧.೨೧ ಕೋಟಿ ರೂ.ಗಳನ್ನು ಪೂರ್ಣವಾಗಿ ವೆಚ್ಚ ಮಾಡಿ ೨೨೦ ಕಿ.ಮೀ. ಡಾಂಬರ್, ೨೭.೮೦ ಕಿ.ಮೀ. ರಸ್ತೆಯ ನಿರ್ಮಾಣ ಹಾಗೂ ದುರಸ್ತಿ ಕಾಮಗಾರಿಯನ್ನು ಮಾಡಲಾಗಿದೆ. ಸಣ್ಣ ನೀರಾವರಿಗಾಗಿ ೪೧.೦೯ ಲಕ್ಷ ರೂ.ಗಳನ್ನು ವೆಚ್ಚ ಮಾಡಿ ಬಾವಿ, ಕೆರೆಗಳ ಹೂಳು ತೆಗೆಯುವುದು, ಹೊಸ ಕೆರೆಗಳ ನಿರ್ಮಾಣ, ಅಣೆಕಟ್ಟು, ಪಿಕಪ್ ಮತ್ತು ಫೀಡರ್ ಚಾನಲ್‌ಗಳ ನಿರ್ಮಾಣ ಮಾಡಲಾಗಿದೆ. ಸ್ವಯಂ ಉದ್ಯೋಗ ಯೋಜನೆಯಡಿ ಒಟ್ಟು ೬೫೩ ಫಲಾನುಭವಿಗಳಿಗೆ ೫೩.೨೧ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಪರಿಶಿಷ್ಟ ವರ್ಗದ ೫೦ ಫಲಾನುಭವಿಗಳಿಗೆ ೧,೩೦,೫೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಗ್ರಾಮೀಣ ಪ್ರದೇಶದ ಜನರಿಗೆ ಸುರಕ್ಷಿತ ಕುಡಿಯುವ ನೀರು ಪೂರೈಸಲು ರೂ.೨.೮೫ ಕೋಟಿ ರೂ.ಗಳನ್ನು ವೆಚ್ಚ ಮಾಡಿ ೧೬೨ ಕೈ ಪಂಪಿನ ಕೊಳವೆ ಬಾವಿಗಳು, ೩೫ ಕಿರುನೀರು ಸರಬರಾಜು ಯೋಜನೆಗಳು ಮತ್ತು ೫೧ ಕೊಳವೆ(ನಲ್ಲಿ) ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಿ ೧೯೯೩-೯೪ರಲ್ಲಿ ಪೂರ್ಣಗೊಳಿಸಲಾಯಿತು.

ವಿಶ್ವೇಶ್ವರಯ್ಯ ನಾಲೆ ಆಧುನೀಕರಣಕ್ಕಾಗಿ ೧೯೯೭ರ ಮಾರ್ಚ್ ಅಂತ್ಯಕ್ಕೆ ೧೧೬.೦೧ ಕೋಟಿ ರೂ.ವೆಚ್ಚವಾಗಿದ್ದು, ೧೯೯೭-೯೮ನೇ ಸಾಲಿಗೆ ೪೦ ಕೋಟಿ ರೂ. ಅನುದಾನ ಒದಗಿಸಲಾಗಿತ್ತು. ಇದರಲ್ಲಿ ೧೯೯೭ ಮೇ ಅಂತ್ಯದವರೆಗೆ ೧೮ ಕೋಟಿ ರೂ.ಗಳು ವೆಚ್ಚವಾಗಿವೆ. ಒಟ್ಟಾರೆ ೧೯೯೭ ಮೇ ಅಂತ್ಯಕ್ಕೆ ಆಗಿರುವ ಒಟ್ಟು ವೆಚ್ಚ ೧೩೪.೦೧ ಕೋಟಿ ರೂ.ಗಳಾಗಿದ್ದು, ಜಿಲ್ಲೆಯಲ್ಲಿ ೧೯೯೬-೯೭ ರಲ್ಲಿ ಪಶು ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ ಕೃತಕ ಗರ್ಭಧಾರಣೆ ಗುರಿ ೬೦,೦೦೦ ಆಗಿತ್ತು. ಈ ಗುರಿಗೆ ಎದುರಾಗಿ ೬೬,೭೫೭ ರಾಸುಗಳಿಗೆ ಕೃತಕ ಗರ್ಭಧಾರಣೆ ಸೇವೆಯನ್ನು ನೀಡಿ ಗುರಿ ಮೀರಿ ಸಾಧನೆ ಮಾಡಲಾಯಿತು. ಧನಗೂರು ಕುರಿ ಫಾರಂನಲ್ಲಿ ೧೪೦ ಬೀಜದ ಟಗರುಗಳನ್ನು ವಿತರಿಸುವ ಗುರಿ ಹೊಂದಿದ್ದು, ೧೧೫ ಬೀಜದ ಟಗರುಗಳನ್ನು ವಿತರಿಸಲಾಗಿದೆ. ಮಳವಳ್ಳಿಯಲ್ಲಿನ ಪ್ರಾದೇಶಿಕ ಕೋಳಿ ಸಾಕಾಣಿಕೆ ಕೇಂದ್ರದಲ್ಲಿ ೪೦,೦೦೦ ಕೋಳಿಮರಿಗಳನ್ನು ಉತ್ಪಾದಿಸುವ ಗುರಿ ಹೊಂದಿದ್ದು, ೫೬,೧೦೫ ಕೋಳಿಮರಿಗಳನ್ನು ಉತ್ಪಾದಿಸಿ ಗುರಿಮೀರಿ ಸಾಧನೆ ಮಾಡಲಾಗಿದೆ.

೧೯೯೬-೯೭ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಂತೆ ೪೫೮ ಮಂದಿ ಹೊಸ ಫಲಾನುಭವಿಗಳಿಗೆ ೧೪.೦೮ ಲಕ್ಷ ರೂ.ಗಳ ನೆರವು ನೀಡಲಾಯಿತು. ಟ್ರೈಸಂ ಯೋಜನೆಯಡಿ ೬೫೦ ಮಹಿಳೆಯರೂ ಸೇರಿದಂತೆ ೧,೬೭೯ ಮಂದಿಗೆ ತರಬೇತಿ ನೀಡಲಾಯಿತು. ಇದಕ್ಕಾಗಿ ೨೪.೮೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಸ್ವಯಂ ಉದ್ಯೋಗ ಕಾರ್ಯಕ್ರಮದಂತೆ ೩೦ ಮಂದಿ ಮಹಿಳೆಯರೂ ಸೇರಿದಂತೆ ೬೦ ಮಂದಿಗೆ ಉದ್ಯೋಗಕ್ಕಾಗಿ ನೆರವು ನೀಡಲಾಯಿತು. ಇದಕ್ಕಾಗಿ ೧.೦೫ ಲಕ್ಷ ರೂ. ಸಹಾಯಧನ ಹಾಗೂ ೧.೮೮ ಲಕ್ಷ ರೂ. ಸಾಲ ದೊರಕಿಸಿಕೊಡಲಾಯಿತು.

**೯ನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨)**

ಈ ಯೋಜನೆಯಲ್ಲಿ ಜಿಲ್ಲೆಯ ಅಭಿವೃದ್ಧಿಗಾಗಿ ಮೊದಲೆರಡು ವರ್ಷಗಳಲ್ಲಿ ಪ್ರಮುಖ ವಲಯವಾರು ಮೀಸಲಾಗಿಸಿದ್ದ ಹಣದ ವಿವರ ಹೀಗಿದೆ. ಕಂಸದಲ್ಲಿರುವ ಅಂಕಿಗಳು ನೈಜ ವೆಚ್ಚವನ್ನು ಲಕ್ಷ ರೂ.ಗಳಲ್ಲಿ ಸೂಚಿಸುತ್ತವೆ. ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣಕ್ಕೆ ೮೫೩.೪೨ ಲಕ್ಷ ರೂ.ಗಳು (೧೦೩೩.೧೦), ವಯಸ್ಕರ ಶಿಕ್ಷಣಕ್ಕೆ ೧೩.೭೨ ಲಕ್ಷ ರೂ.ಗಳು (೧.೬೩), ಕ್ರೀಡೆ ಮತ್ತು ಯುವಜನ ಸೇವೆಗೆ ೫೭.೨೦ ಲಕ್ಷ ರೂ.ಗಳು (೬೯.೫೧), ಗ್ರಾಮೀಣ ಆರೋಗ್ಯಕ್ಕೆ ೩೭೬.೬೧ ಲಕ್ಷ ರೂ.ಗಳು (೨೯೫.೨೩), ಭಾರತೀಯ ವೈದ್ಯಪದ್ದತಿಗೆ ೯೫೩.೮೯ ಲಕ್ಷ ರೂ.ಗಳು (೮೫೫.೬೧), ಕುಟುಂಬ ಕಲ್ಯಾಣಕ್ಕೆ ೬೫೫ ಲಕ್ಷ ರೂ.ಗಳು (೪೩೭), ನೀರು ಪೂರೈಕೆ ಮತ್ತು ನೈರ್ಮಲ್ಯಕ್ಕೆ ೧೯೪೮.೫೦ ಲಕ್ಷ ರೂ.ಗಳು (೨೮೭೪.೧೫), ಸಮಾಜ ಕಲ್ಯಾಣಕ್ಕೆ ೩೨೩.೬೬ ಲಕ್ಷ ರೂ.ಗಳು (೪೩೧.೩೪), ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ೧೬೩.೭೪ ಲಕ್ಷ ರೂ.ಗಳು (೧೭೫.೭೫), ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕೆ ೫೭೬.೨೬ ಲಕ್ಷ ರೂ.ಗಳು (೫೫೮.೩೭), ವ್ಯವಸಾಯಕ್ಕೆ ೯೭.೭೧ ಲಕ್ಷ ರೂ.ಗಳು (೮೨.೮೦), ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ೨೪೪೭.೫೩ ಲಕ್ಷ ರೂ.ಗಳು (೨೭೧೦.೦೧), ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ೯೭೦.೮೩ ಲಕ್ಷ ರೂ.ಗಳು (೧೦,೦೪೧.೧೩) ಗಳನ್ನು ವ್ಯಯಿಸಲಾಗಿದೆ.

ಈ ಯೋಜನೆಯ ಪ್ರಾರಂಭದಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ೫೫೮ ಕೊಳವೆ ಬಾವಿಗಳನ್ನು ಕೊರೆಯಿಸಲಾಯಿತು. ಆಶ್ರಯ ಯೋಜನೆಯಡಿ ಮಂಜೂರಾದ ಭೌತಿಕ ಗುರಿ ೧,೬೨೫ ಆಗಿದ್ದರೆ, ಮಾರ್ಚ್ ೧೯೯೮ರ ಅಂತ್ಯಕ್ಕೆ ಕೇವಲ ೨೧ ರಷ್ಟು ಸಾಧನೆ ಆಗಿತ್ತು. ೧೯೯೯ರ ಅಂತ್ಯಕ್ಕೆ ೮೬೫ ಗುರಿ ಸಾಧಿಸಲಾಯಿತು. ಇದಕ್ಕಾಗಿ ೧೯೩.೩೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಯೋಜನೆಯ ಎರಡನೇ ವರ್ಷದಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ೩,೨೨೮ ಭೌತಿಕ ಹಾಗೂ ೨೪೮.೭೪ ಲಕ್ಷ ರೂ.ಗಳ ಆರ್ಥಿಕ ಗುರಿ ಹೊಂದಲಾಗಿದ್ದು, ಅದಕ್ಕೆ ಎದುರಾಗಿ ೧೯೯೯ರ ಮಾರ್ಚ್ ಅಂತ್ಯಕ್ಕೆ ೪,೦೨೪ ಭೌತಿಕ ಸಾಧನೆ ಮಾಡಿ ೧೬೨.೧೪ ಲಕ್ಷ ರೂ. ವೆಚ್ಚ ಮಾಡಲಾಯಿತು. ಈ ಯೋಜನೆಯಲ್ಲಿ ೧,೪೪೬ ಪರಿಶಿಷ್ಟ ಜಾತಿಯವರು, ೯೧ ಪರಿಶಿಷ್ಟ ಪಂಗಡದವರು ೧೬೬೮ ಮಹಿಳೆಯರು, ೪೪ ಮಂದಿ ಅಂಗವಿಕಲರು ಸೌಲಭ್ಯ ಪಡೆದವರಾಗಿದ್ದಾರೆ. ಟ್ರೈಸಂ ಯೋಜನೆಯಡಿ ೮೦೭ ಮಂದಿಗೆ ತರಬೇತಿ ನೀಡಲಾಗಿದೆ. ಇದಕ್ಕಾಗಿ ೨೭.೬೨೮ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿ ೯೭ ಗುಂಪುಗಳನ್ನು ರಚಿಸುವ ಭೌತಿಕ ಗುರಿ ಹೊಂದಲಾಗಿತ್ತು. ಈ ಕಾರ್ಯಕ್ರಮದಡಿಯಲ್ಲಿ ೯೯ ಗುಂಪುಗಳನ್ನು ರಚಿಸಲಾಗಿದೆ. ಇದಕ್ಕಾಗಿ ೨೪.೯೫ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಯಿತು. ಯೋಜನೆಯ ಮೂರನೇ ವರ್ಷದ ಅಂತ್ಯಕ್ಕೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ ಗಾರ್ ಯೋಜನೆಯಡಿ ಈ ಸಾಲಿನಲ್ಲಿ ೨೧೧.೩೦೧ ಲಕ್ಷ ರೂ.ಗಳ ಆರ್ಥಿಕ ಮತ್ತು ೭೬ ಗುಂಪುಗಳು ಹಾಗೂ ೩೬೨ ವೈಯಕ್ತಿಕ ಫಲಾನುಭವಿಗಳ ಗುರಿ ನಿಗದಿಪಡಿಸಿರುತ್ತದೆ. ಇದಕ್ಕೆ ಪೂರಕವಾಗಿ ಮೊದಲನೇ

ಕಂತಾಗಿ ೧೨೬.೩೩ ಲಕ್ಷ ರೂ. ಬಿಡುಗಡೆಯಾಗಿತ್ತು. ಆದರೆ ಫೆಬ್ರವರಿ ೨೦೦೦ದಲ್ಲಿ ಯೋಜನೆಯನ್ನು ಪರಿಷ್ಕರಿಸಿ ೨ನೇ ಕಂತಿನ ಹಣ ೩೧೩ ಲಕ್ಷ ರೂ. ಹಾಗೂ ೭೬ ಗುಂಪುಗಳು ಮತ್ತು ೭೫೦ ವೈಯಕ್ತಿಕ ಫಲಾನುಭವಿಗಳ ಗುರಿಯನ್ನು ಹೊಂದಲಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಸಾಮೂಹಿಕ ಜೀವ ವಿಮಾ ಸೌಲಭ್ಯವನ್ನು ಕಲ್ಪಿಸಲು ಈಯೋಜನೆಯನ್ನು ಜಾರಿಗೆ ತರಲಾಗಿದ್ದು, ೧೯೯೯-೨೦೦೦ದಲ್ಲಿ ಮೂಲ ಭೌತಿಕ ಗುರಿ ೧೧,೪೬೪ ಅಗಿತ್ತು ಹಾಗೂ ೨೦೦೦ ಮಾರ್ಚ್ ಅಂತ್ಯಕ್ಕೆ ೧೫,೮೫೯ ಫಲಾನುಭವಿಗಳಿಗೆ ಸಾಮೂಹಿಕ ಜೀವವಿಮೆ ಒದಗಿಸಲಾಗಿದೆ.

## ಬಡತನ ನಿವಾರಣೆ

ಬಡತನ ಒಂದು ಸಾಪೇಕ್ಷ ಅಂಶವಾಗಿದ್ದು, ಅದನ್ನು ಭೌತಿಕ ಅಂಶಗಳ ಆಧಾರದ ಮೇಲೆ ವ್ಯಕ್ತಪಡಿಸಲಾಗುತ್ತದೆ. ವಿಶ್ವ ಆಹಾರ ಮತ್ತು ಕೃಷಿ ಸಂಘಟನೆಯ ಮೊದಲ ಮಹಾನಿರ್ದೇಶಕ ಲಾರ್ಡ್ ಬಾಯಿಡಾರ್ ಅವರು ೧೯೪೫ರಲ್ಲಿ ಮೊದಲ ಬಾರಿಗೆ ಬಡತನದ ರೇಖೆಯನ್ನು ವ್ಯಾಖ್ಯಾನಿಸುತ್ತಾ, ಒಬ್ಬ ವ್ಯಕ್ತಿ ಒಂದು ದಿನಕ್ಕೆ ೨,೩೦೦ ಕ್ಕಿಂತಲೂ ಕಡಿಮೆ ಕ್ಯಾಲರಿ ಆಹಾರವನ್ನು ಸೇವಿಸುತ್ತಿದ್ದರೆ ಆತ ಬಡತನದ ರೇಖೆಗಿಂತಲೂ ಕೆಳಗಿದ್ದಾನೆಂದು ಪರಿಗಣಿಸಬೇಕಾಗುತ್ತದೆ ಎಂದು ತಿಳಿಸಿರುವರು. ಭಾರತದ ಯೋಜನಾ ಆಯೋಗದ ಮೇರೆಗೆ ದಿನವೊಂದಕ್ಕೆ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ೨,೪೦೦ ಕ್ಯಾಲರಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ೨,೧೦೦ ಕ್ಯಾಲರಿಗಿಂತಲೂ ಕಡಿಮೆ ಆಹಾರ ಪಡೆಯುತ್ತಿರುವವರು ಬಡತನ ರೇಖೆಗಿಂತಲೂ ಕೆಳಗಿರುವವರಾಗಿರುವರು.

ಮಿತಿಮೀರಿ ವೃದ್ಧಿಯಾಗುತ್ತಿರುವ ಜನಸಂಖ್ಯೆ ಆದಾಯದ ಅಸಮಾನತೆ, ಕಡಿಮೆ ತಲಾದಾಯ, ನಿರುದ್ಯೋಗ, ಕನಿಷ್ಠ ಅನುಭೋಗ ವೆಚ್ಚ, ಪ್ರಾದೇಶಿಕ ಅಸಮತೋಲನ, ಹಿಂದುಳಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆ ಮುಂತಾದ ಸಾಮಾಜಿಕ ಮತ್ತು ರಾಜಕೀಯ ಅಂಶಗಳು, ಬಡತನಕ್ಕೆ ಕಾರಣಗಳಾಗಿವೆ. ಅದರಲ್ಲೂ ೫ನೇ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಬಡತನ ನಿರ್ಮೂಲನೆಯನ್ನು ಆರ್ಥಿಕ ಯೋಜನೆಯ ಒಂದು ಪ್ರಮುಖ ಧ್ಯೇಯವಾಗಿ ಅಳವಡಿಸಿಕೊಳ್ಳಲಾಗಿದೆ.

೧೯೭೦ರ ದಶಕದಲ್ಲಿ ಪ್ರಥಮವಾಗಿ ಬಡಜನರ ಅನುಕೂಲಕ್ಕಾಗಿ ಅನೇಕ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಯಿತು. ಆದರೆ ಅವು ಅಷ್ಟೊಂದು ಪರಿಣಾಮಕಾರಿಯಾಗಿರಲಿಲ್ಲ ಮತ್ತು ವ್ಯಾಪಕವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಡತನದ ಮೇಲೆ ನೇರ ಆಕ್ರಮಣ ಮಾಡುವಂತಹ ವ್ಯಾಪಕ ಕಾರ್ಯಕ್ರಮಗಳೊಂದಿಗೆ ಕನಿಷ್ಠ ಅವಶ್ಯಕತೆ ಕಾರ್ಯಕ್ರಮ (MNP), ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (IRDP), ಗ್ರಾಮೀಣ ಭೂರಹಿತ ಉದ್ಯೋಗ ದೃಢೀಕರಣ ಯೋಜನೆ (RLGEP), ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ (NREP), ಜವಾಹರಲಾಲ್ ನೆಹರೂ ರೋಜ್‌ಗಾರ್ ಯೋಜನೆ (JRY), ಮತ್ತು ಗ್ರಾಮೀಣ ಯುವಕರಿಗೆ ಸ್ವ-ಉದ್ಯೋಗ ತರಬೇತಿ ಯೋಜನೆ (TRYSEM), ಮುಂತಾದವುಗಳನ್ನು ಜಾರಿಗೆ ತರಲಾಯಿತು.

ಮಂಡ್ಯ ಜಿಲ್ಲೆಯಲ್ಲಿ ಗ್ರಾಮೀಣ ಜನತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮತ್ತು ಆರ್ಥಿಕ ಸ್ಥಿತಿ ಉತ್ತಮಪಡಿಸಲು ೨೦ ಅಂಶಗಳ ಕಾರ್ಯಕ್ರಮಗಳು ಪ್ರಮುಖ ಪಾತ್ರವಹಿಸುತ್ತಿವೆ. ಈ ದಿಸೆಯಲ್ಲಿ ಮಂಡ್ಯ ಜಿಲ್ಲಾ ಪರಿಷತ್ ವಿವಿಧ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲು ಶ್ರಮವಹಿಸಿದೆ. ಜಿಲ್ಲೆಯಲ್ಲಿ ೨೦ ಅಂಶಗಳ ಕಾರ್ಯಕ್ರಮದಡಿ ೧೯೮೬-೮೭ನೇ ಸಾಲಿನಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಲಾಭಪಡೆದ ಫಲಾನುಭವಿಗಳು ೫,೧೫೭, ಅಂತ್ಯೋದಯ ಯೋಜನೆಯನ್ವಯ ಲಾಭ ಪಡೆದ ಕುಟುಂಬಗಳು ೫೪೯, ನೇಗಿಲ ಭಾಗ್ಯ ಯೋಜನೆಯನ್ವಯ ಲಾಭ ಪಡೆದ ಕುಟುಂಬಗಳು ೧೪೯, ೧೦೦ ಬಾವಿಗಳ ಯೋಜನೆಯನ್ವಯ ತೋಡಲಾದ

ಬಾವಿಗಳು ೩೧೨, ಟ್ರೈಸಂ ಯೋಜನೆಯನ್ವಯ ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ ೧೩೬, ಜೀತವಿಮುಕ್ತರ ಮರುವಸತಿ ಯೋಜನೆಯನ್ವಯ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ೧,೩೬೦ ಆಗಿತ್ತು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯನ್ವಯ ಒದಗಿಸಲಾದ ಉದ್ಯೋಗ ೬.೨೭ ಲಕ್ಷ ಮಾನವ ದಿನಗಳು, ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆಯನ್ವಯ ೧೧.೧೮ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಕುಡಿಯುವ ನೀರು ಒದಗಿಸಲ್ಪಟ್ಟ ಗ್ರಾಮಗಳು ೩೨೬, ಗ್ರಾಮಾಂತರ ಪ್ರದೇಶದಲ್ಲಿ ನಿರ್ಮಾಣ ಸಹಾಯ ಪಡೆದ ಕುಟುಂಬಗಳು ೬೬೮, ಮನೆನಿವೇಶನ ಪಡೆದ ಗ್ರಾಮೀಣ ಕುಟುಂಬಗಳು ೨,೦೧೯, ಕೊಳಚೆ ಪ್ರದೇಶದ ಅಭಿವೃದ್ಧಿ ಯೋಜನೆಗೆ ಒಳಪಟ್ಟ ಜನಸಂಖ್ಯೆ ೫೦೦ ಆಗಿದ್ದವು. ಇದೇ ಯೋಜನೆಯಡಿ ಆರ್ಥಿಕವಾಗಿ ಹಿಂದುಳಿದವರಿಗೆ ೧೪೯೮ ಮನೆಗಳನ್ನು ಹಂಚಲಾಯಿತು.

೧೯೯೦–೯೧ ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ೪,೭೨೮ ಜನರು ಪ್ರಯೋಜನ ಪಡೆದಿರುವರು. ಅಂತ್ಯೋದಯ ಯೋಜನೆಯಡಿ ೪೬೮ ಕುಟುಂಬಗಳು ಪ್ರಯೋಜನ ಪಡೆದಿವೆ. ನೂರು ಬಾವಿ ಯೋಜನೆಯಡಿ ೧೯೧, ಟ್ರೈಸಂ ಯೋಜನೆಯನ್ವಯ ತರಬೇತಿ ಪಡೆದ ಅಭ್ಯರ್ಥಿಗಳು ೪೩೧, ಜವಾಹರ್ ರೋಜ್‌ಗಾರ್ ಯೋಜನೆಯನ್ವಯ ಸೃಷ್ಟಿಸಲಾದ ಮಾನವ ದಿನಗಳು ೧೨.೮೭ ಲಕ್ಷ, ಉಪಯೋಗಿಸಿದ ಆಹಾರ ಧಾನ್ಯಗಳು ೧,೭೬೨.೧೦೦ ಟನ್ನುಗಳು, ಇಂದಿರಾ ಆವಾಸ್ ಯೋಜನೆಯಡಿ ಕಟ್ಟಿದ ಮನೆಗಳ ಸಂಖ್ಯೆ ೧,೨೭೨, ಕೊಳಚೆ ನಿರ್ಮೂಲನೆ ಮತ್ತು ಅಭಿವೃದ್ಧಿ ಯೋಜನೆಗೆ ಒಳಪಟ್ಟ ಜನಸಂಖ್ಯೆ ೯೫೦ ಆಗಿದ್ದವು. ೧೯೯೪–೯೫ ರಲ್ಲಿ ಐ.ಆರ್.ಡಿ.ಪಿ.ಯೋಜನೆಯಲ್ಲಿ ಪ್ರಯೋಜನ ಪಡೆದವರ ಸಂಖ್ಯೆ ೫,೩೮೫ ಆಗಿತ್ತು. ನೂರು ಬಾವಿ ಯೋಜನೆಯಡಿ ಪ್ರಯೋಜನಾ ಪಡೆದವರ ಸಂಖ್ಯೆ ೨೬೭ ಆಗಿತ್ತು. ಟ್ರೈಸಂ ಯೋಜನೆಯನ್ವಯ ತರಬೇತಿ ಪಡೆದ ಅಭ್ಯರ್ಥಿಗಳು ೬೭೨, ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ೯ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಯಿತು ಮತ್ತು ೧,೨೨೨ ಟನ್ ಆಹಾರ ಧಾನ್ಯಗಳನ್ನು ವಿತರಿಸಲಾಯಿತು. ಆಶ್ರಯ ಯೋಜನೆಯಡಿ ೭,೮೦೮ ಮನೆ ನಿವೇಶನಗಳನ್ನು ಹಂಚಲಾಗಿದೆ. ಜನವಸತಿ ಕಾರ್ಯಕ್ರಮದಲ್ಲಿ ಒಟ್ಟು ೩,೫೬೭ ಮನೆಗಳನ್ನು ವಿತರಿಸಲಾಗಿದೆ. ೧೯೯೭–೯೮ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ೫,೦೮೮ ಜನರು ಪ್ರಯೋಜನ ಪಡೆದರೆ, ೧೦೦ ಬಾವಿ ಯೋಜನೆಯಡಿ ೨೧೮ ಜನರು, ಟ್ರೈಸಂ ಯೋಜನೆಯಡಿ ೧,೦೩೧ ಅಭ್ಯರ್ಥಿಗಳು ತರಬೇತಿ ಪಡೆದಿದ್ದಾರೆ. ಜವಾಹರ್ ರೋಜ್ ಗಾರ್ ಯೋಜನೆಯಲ್ಲಿ ೬.೧೧೧ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ. ಉಪಯೋಗಿಸಿದ ಆಹಾರ ಧಾನ್ಯಗಳು ೮೭೨.೪೮ ಲಕ್ಷ ಟನ್ನುಗಳಾಗಿವೆ. ಆಶ್ರಯ ಯೋಜನೆಯಡಿ ಹಂಚಿನ ಮನೆ ನಿವೇಶನಗಳು ೧,೧೬೪, ಕೊಳಚೆ ಆಭಿವೃದ್ಧಿ ಯೋಜನೆಯ ವ್ಯಾಪ್ತಿಯಲ್ಲಿ ೨೦೦೦ ಜನರು ಸೌಲಭ್ಯ ಪಡೆದರು.

**ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ ಯೋಜನೆ (ಟ್ರೈಸಂ):** ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಲಾಭದಾಯಕವಾದ ಸ್ವಯಂ ಉದ್ಯೋಗವನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗುವಂತೆ ಅವರ ಆಸಕ್ತಿಗೆ ಅನುಗುಣವಾದ ತರಬೇತಿ ನೀಡುವುದೇ ಈ ಯೋಜನೆಯ ಮೂಲ ಉದ್ದೇಶವಾಗಿದೆ. ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸಿ ೧೯೭೯ನೇ ಆಗಸ್ಟ್‌ನಲ್ಲಿ ಜಾರಿಗೆ ತರಲಾಯಿತು. ಗ್ರಾಮಾಂತರ ಪ್ರದೇಶದಲ್ಲಿರುವ ೧೮ ರಿಂದ ೩೫ ವರ್ಷದೊಳಗಿನ ನಿರುದ್ಯೋಗಿ ಯುವಜನತೆಗೆ ಮಾತ್ರ ಈ ಯೋಜನೆಯಡಿ ಸ್ವಯಂ ಉದ್ಯೋಗ ಕಲ್ಪಿಸುವ ಸಲುವಾಗಿ ಆರು ತಿಂಗಳ ಕಾಲ ತರಬೇತಿ ನೀಡಲಾಗುವುದು. ತರಬೇತಿಯ ನಂತರ ಫಲಾನುಭವಿಗಳಿಗೆ ಬ್ಯಾಂಕುಗಳ ಮೂಲಕ ಸಾಲಸೌಲಭ್ಯಗಳನ್ನು ಐ.ಆರ್.ಡಿ.ಪಿ. ಯೋಜನೆಯನ್ವಯ ಕಲ್ಪಿಸಿ ಸ್ವಉದ್ಯೋಗಿಗಳನ್ನಾಗಿ ಮಾಡಲಾಗುತ್ತಿತ್ತು. ತರಬೇತಿಗಾಗಿ ಅಭ್ಯಥಿಗಳು ಯಾವುದೇ ಶುಲ್ಕ ನೀಡಬೇಕಾಗಿರಲಿಲ್ಲ. ರೂ.೨೦೦ ರಿಂದ ರೂ.೫೦೦ ರವರೆಗಿನ ಗರಿಷ್ಟ ಮಿತಿಯವರೆಗೆ ಶಿಷ್ಯವೇತನ ನೀಡಲಾಗುತ್ತಿತ್ತು. ಕಚ್ಚಾ ಸಾಮಗ್ರಿ ಪೂರೈಕೆಗಾಗಿ ಒಬ್ಬ ಅಭ್ಯರ್ಥಿಗೆ ತಿಂಗಳಿಗೆ ಕನಿಷ್ಠ ರೂ.೭೫ ರಿಂದ ಗರಿಷ್ಟ ರೂ. ೬೦೦ ಕ್ಕೆ ಮೀರದಂತೆ ಭತ್ಯೆ ನೀಡಲಾಗುತ್ತಿತ್ತು.

ಬೋರ್‌ವೆಲ್ ರಿಪೇರಿ, ಕಂಪ್ಯೂಟರ್ ಬಳಸುವಿಕೆ, ಟೈಲರಿಂಗ್, ಆಹಾರ ಸಂಸ್ಕರಣೆ, ಮರಗೆಲಸ, ಕಬ್ಬಿಣದ ಕೆಲಸ ಅಗರಬತ್ತಿ ತಯಾರಿಸುವುದು, ಮುದ್ರಣ, ರೇಷ್ಮೆ ಕೃಷಿ, ತೋಟಗಾರಿಕೆ, ವಿದ್ಯುತ್ ಕೆಲಸ, ಚರ್ಮದ ಕೆಲಸ, ನೇಯ್ಗೆ, ತೆಂಗಿನ ನಾರಿನ ಕೈಗಾರಿಕೆ, ಕೋಳಿಸಾಕಾಣಿಕೆ, ಇತ್ಯಾದಿಗಳ ಬಗ್ಗೆ ಅಭ್ಯರ್ಥಿಗಳ ಆಸಕ್ತಿಗನುಗುಣವಾಗಿ ಈ ಯೋಜನೆಯಡಿ ತರಬೇತಿ ನೀಡಲಾಗುತ್ತಿತ್ತು.

ಈ ಯೋಜನೆಯಡಿ ಜಿಲ್ಲೆಯಲ್ಲಿ ೧೯೯೮–೯೯ರಲ್ಲಿ ಒಟ್ಟು ರೂ. ೨೭,೬೨೮ ಲಕ್ಷಗಳನ್ನು ವೆಚ್ಚ ಮಾಡಿ ೮೦೭ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಯಿತು. ಅವರುಗಳ ಪೈಕಿ ೩೩೪ ಮಂದಿ ಪರಿಶಿಷ್ಟ ಜಾತಿ, ಎಂಟು ಮಂದಿ ಪರಿಶಿಷ್ಟ ಪಂಗಡ, ೧೫ ಮಂದಿ ಅಂಗವಿಕಲರು, ೨೯ ಮಂದಿ ಅಲ್ಪ ಸಂಖ್ಯಾತರು ಹಾಗೂ ೪೨೧ ಇತರೆಯವರು ಒಳಗೊಂಡಿದ್ದರು. ಆದರೆ ೧೯೯೯ರ ಏಪ್ರಿಲ್ ತಿಂಗಳಿನಿಂದ ಈ ಯೋಜನೆಯನ್ನು ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಳಿಸಲಾಯಿತು.

**ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ) :** ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಆರ್ಥಿಕವಾಗಿ ಮೇಲೆತ್ತುವ ಮುಖ್ಯ ಉದ್ದೇಶವಿಟ್ಟುಕೊಂಡು ಮಹಾತ್ಮ ಗಾಂಧೀಜಿಯವರ ಹುಟ್ಟುಹಬ್ಬವಾದ (೦೨–೧೦–೧೯೮೦)ರಂದು ಈ ಯೋಜನೆಯನ್ನು ಜಾರಿಗೆ ತರಲಾಯಿತು. ರೂ.೧೧,೦೦೦ (ಹನ್ನೊಂದು ಸಾವಿರ)ದೊಳಗಿನ ವಾರ್ಷಿಕ ವರಮಾನವನ್ನು ಹೊಂದಿರುವ ಗ್ರಾಮೀಣ ಬಡಕುಟುಂಬಗಳಿಗೆ ಆದಾಯ ತರುವಂತಹ ಪಶುಸಂಗೋಪನೆ, ವ್ಯಾಪಾರ, ಕೈಗಾರಿಕೆ ಮುಂತಾದ ಉದ್ದೇಶಗಳಿಗೆ ಬ್ಯಾಂಕುಗಳ ಮೂಲಕ ರೂ.೧೫,೦೦೦(ಹದಿನೈದು ಸಾವಿರ)ಗಳವರೆಗೆ ಸಾಲ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಈ ಯೋಜನೆಯ ಅನುಷ್ಠಾನಕ್ಕೆ ಬೇಕಾದ ಮೊತ್ತವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ ಶೇ.೫೦ರ ಪ್ರಮಾಣದಲ್ಲಿ ಭರಿಸುತ್ತಿವೆ. ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಆಯ್ಕೆ ಮಾಡಲಾಗುತ್ತದೆ.

ಈ ಯೋಜನೆಯಡಿ ೧೯೯೮–೯೯ರಲ್ಲಿ ಮಂಡ್ಯ ಜಿಲ್ಲೆಯಲ್ಲಿ ೩,೨೨೮ ಫಲಾನುಭವಿಗಳ ಭೌತಿಕ ಹಾಗೂ ರೂ. ೨೪೭.೯೬ ಲಕ್ಷಗಳ ಆರ್ಥಿಕ ಗುರಿಯನ್ನು ನಿಗದಿಪಡಿಸಲಾಗಿತ್ತು. ನಂತರ ಆರ್ಥಿಕ ಗುರಿಯನ್ನು ಪರಿಷ್ಕರಿಸಿ ರೂ. ೨೩೫.೬೪ ಲಕ್ಷಗಳಿಗೆ ನಿಗದಿಪಡಿಸಲಾಯಿತು. ಆದರೆ ರೂ. ೨೬೫.೧೦ ಲಕ್ಷ ರೂ. (ಶೇ.೧೧೨) ವೆಚ್ಚ ಮಾಡಿ ಫಲಾನುಭವಿಗಳಿಗೆ ಸೌಕರ್ಯ ಕಲ್ಪಿಸಿ ಗಣನೀಯ ಪ್ರಮಾಣದಲ್ಲಿ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಸಾಧಿಸಲಾಗಿದ್ದು, ತಾಲೂಕುವಾರು ವಿವರಗಳನ್ನು ಕೋಷ್ಟಕ ೮. ೩೩ ರಲ್ಲಿ ನೀಡಲಾಗಿದೆ.

**ಕೋಷ್ಟಕ ೮.೩೩ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಡಿ ೧೯೯೮–೯೯ರಲ್ಲಿ ಮಂಡ್ಯ ಜಿಲ್ಲೆಯ ಸಾಧನೆಗಳ ತಾಲೂಕುವಾರು ವಿವರ**

**ಭೌತಿಕ : ಸಂಖ್ಯೆಗಳಲ್ಲಿ**

**ಆರ್ಥಿಕ : ಲಕ್ಷ ರೂ.ಗಳಲ್ಲಿ**

| ಕ್ರ.ಸಂ. | ತಾಲೂಕುಗಳು | ಭೌತಿಕ ಗುರಿ | ಆರ್ಥಿಕ ಗುರಿ | | ಸಾಧನೆ | |
|---|---|---|---|---|---|---|
| | | | ಮೂಲ | ಪರಿಷ್ಕೃತ | ಭೌತಿಕ | ಆರ್ಥಿಕ |
| ೧ | ೨ | ೩ | ೪ | ೫ | ೬ | ೭ |
| ೧ | ಕೆ.ಆರ್.ಪೇಟೆ | ೪೭೬ | ೨೪.೭೩ | ೨೨.೬೦ | ೪೯೯ | ೨೨.೩೭ |
| ೨ | ಮದ್ದೂರು | ೫೮೮ | ೩೦.೪೬ | ೨೫.೭೯ | ೭೭೪ | ೨೭.೦೯ |

| ೧ | ೨ | ೩ | ೪ | ೫ | ೬ | ೭ |
|---|---|---|---|---|---|---|
| ೩ | ಮಳವಳ್ಳಿ | ೫೪೫ | ೨೮.೩೧ | ೨೪.೨೫ | ೫೫೩ | ೨೩.೯೮ |
| ೪ | ಮಂಡ್ಯ | ೬೨೮ | ೩೨.೬೨ | ೩೩.೨೯ | ೮೫೪ | ೩೩.೫೮ |
| ೫ | ನಾಗಮಂಗಲ | ೩೭೭ | ೧೯.೫೯ | ೧೮.೯೬ | ೪೨೩ | ೧೯.೪೦ |
| ೬ | ಪಾಂಡವಪುರ | ೩೫೫ | ೧೭.೧೨ | ೧೯.೮೮ | ೫೫೩ | ೨೦.೨೬ |
| ೭ | ಶ್ರೀರಂಗಪಟ್ಟಣ | ೨೭೯ | ೧೪.೪೯ | ೧೬.೯೨ | ೩೮೬ | ೧೫.೪೬ |
| ೮ | ಆಡಳಿತ ವೆಚ್ಚ ಹಾಗೂ ಆಂತರಿಕ ಅಭಿವೃದ್ಧಿ | – | ೮೦.೬೪ | ೭೩.೯೫ | – | ೧೦೨.೯೬ |
| | ಒಟ್ಟು | ೩೨೪೮ | ೨೪೭.೯೬ | ೨೩೫.೬೪ | ೪೦೪೨ | ೨೬೫.೧೦ |

## ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆ

ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯಡಿಯಲ್ಲಿ ದೊರೆಯುತ್ತಿದ್ದ ಸೌಲಭ್ಯಗಳನ್ನು ಬಡತನದ ರೇಖೆಯ ಕೆಳಗಿನ ಕುಟುಂಬದಲ್ಲಿರುವ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತಿರಲಿಲ್ಲ. ಇದನ್ನರಿತ ಭಾರತ ಸರ್ಕಾರವು ೧೯೮೩-೮೪ರಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮವನ್ನು ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯ ಉಪಯೋಜನೆಯನ್ನಾಗಿ ಪ್ರಾರಂಭಿಸಿತು. ಯೋಜನೆಯು ಗ್ರಾಮೀಣ ಪ್ರದೇಶದಲ್ಲಿನ ಬಡತನ ರೇಖೆಯ ಕೆಳಗಿರುವ ಕುಟುಂಬದ ಮಹಿಳೆಯರಿಗೆ ಆದಾಯ ತರುವ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸುವ ಮೂಲಕ ಅವರ ಸ್ಥಿತಿಗತಿಗಳನ್ನು ಸುಧಾರಿಸುತ್ತದೆ. ಇದರಂತೆ ಬಡತನ ರೇಖೆಯ ಕೆಳಗಿರುವ ಗ್ರಾಮೀಣ ಮಹಿಳೆಯರನ್ನು ೧೦-೧೫ ಸದಸ್ಯರುಳ್ಳ ಗುಂಪುಗಳಾಗಿ ರಚಿಸಲಾಗುವುದು. ಗುಂಪಿನ ಸದಸ್ಯರು ಅವರ ಸಾಮರ್ಥ್ಯ ಹಾಗೂ ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ತಮಗೆ ಸೂಕ್ತವಾದ ಮತ್ತು ನಿರಂತರ ಆದಾಯ ತರುವ ಆರ್ಥಿಕ ಚಟುವಟಿಕೆಯನ್ನು ಆಯ್ಕೆ ಮಾಡಿಕೊಂಡು ಉತ್ಪಾದನೆಯಲ್ಲಿ ತೊಡಗಬಹುದು.

ಗುಂಪು ಚಟುವಟಿಕೆಗೆ ದೊರಕುವ ರಿವಾಲ್ವಿಂಗ್ ಫಂಡ್‌ನ ಮೊತ್ತ ಪ್ರಾರಂಭದಲ್ಲಿ ರೂ.೧೫,೦೦೦ ಗಳಿತ್ತು. ಇದು ೧೯೯೪-೯೫ರಲ್ಲಿ ರೂ.೨೫,೦೦೦ ಕ್ಕೆ ಹೆಚ್ಚಳಗೊಂಡಿದೆ. ೧೯೯೮-೯೯ರಲ್ಲಿ ೯೭ಗುಂಪುಗಳನ್ನು ರಚಿಸುವ ಭೌತಿಕ ಹಾಗೂ ರೂ.೨೪.೪೪ ಲಕ್ಷಗಳ ಆರ್ಥಿಕ ಗುರಿ ಹೊಂದಲಾಗಿದ್ದು, ಇದಕ್ಕೆ ಪ್ರತಿಯಾಗಿ ೯೯ ಗುಂಪುಗಳನ್ನು ರಚಿಸಿ, ೨೪.೯೮ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಯೊಜನೆಯು ಸಹ ೧೯೯೯ರ ಏಪ್ರಿಲ್‌ನಿಂದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಂಡಿತು.

**ಜವಾಹರ್ ರೋಜ್‌ಗಾರ್ ಯೋಜನೆ :** ಗ್ರಾಮೀಣ ನಿರುದ್ಯೋಗ ಮತ್ತು ಅರೆ ಉದ್ಯೋಗವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಹಿಂದಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಹಾಗೂ ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆಗಳನ್ನು ವಿಲೀನಗೊಳಿಸಿ, ಭಾರತ ಸರ್ಕಾರವು ೧-೪-೧೯೮೯ರಿಂದ ಜಾರಿಗೆ ಬರುವಂತೆ ಜವಾಹರ್ ರೋಜ್‌ಗಾರ್ ಯೋಜನೆಯನ್ನು ಪ್ರಾರಂಭಿಸಿತು. ಗ್ರಾಮೀಣ ಪ್ರದೇಶದಲ್ಲಿನ ನಿರುದ್ಯೋಗಿ ಮತ್ತು ಅರೆ ಉದ್ಯೋಗಿ ಪುರುಷರು ಹಾಗೂ ಮಹಿಳೆಯರಿಗೆ ಹೆಚ್ಚುವರಿ ಲಾಭದಾಯಕ ಉದ್ಯೋಗವನ್ನು ಸೃಷ್ಟಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಅತ್ಯಾವಶ್ಯಕವಾದ ಸೌಲಭ್ಯವನ್ನು ಬಲಪಡಿಸಿ, ನಿರಂತರ ಉದ್ಯೋಗವನ್ನು ಸೃಜಿಸುವುದು. ಪ್ರತ್ಯಕ್ಷ ಮತ್ತು ಪರೋಕ್ಷ ಸೌಲಭ್ಯಗಳಿಗೆ ಕಾರಣವಾಗುವ ಸಮುದಾಯ ಮತ್ತು ಸಾಮಾಜಿಕ ಸ್ವತ್ತುಗಳು ಹಾಗೂ ಇತರೆ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಪ್ರದೇಶದಲ್ಲಿರುವ

ಜನರಜೀವನ ಮಟ್ಟದಲ್ಲಿ ಒಟ್ಟಾರೆ ಸುಧಾರಣೆ ತರುವುದು. ಯೋಜನೆಯ ಇತರ ಉದ್ದೇಶಗಳಾಗಿರುತ್ತವೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಹಾಗೂ ಜೀತ ಕಾರ್ಮಿಕರಿಗೆ ಈ ಯೋಜನೆಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಶೇ.೩೦ರಷ್ಟು ಉದ್ಯೋಗಾವಕಾಶಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ.

ಈ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಕ್ರಮವಾಗಿ ೮೦:೨೦ರ ಪ್ರಮಾಣದಲ್ಲಿ ಭರಿಸುತ್ತವೆ. ಈ ನೇರವಾದ ಪಂಚಿಕೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳು ಅನುಕ್ರಮವಾಗಿ ೨೦:೧೫:೬೫ರ ಪ್ರಮಾಣದಲ್ಲಿ ಪಾಲು ಪಡೆಯುತ್ತವೆ. ಇಂದಿರಾ ಅವಾಸ್ ಯೋಜನೆ (ಗೃಹ ನಿರ್ಮಾಣ) ಹಾಗೂ ದಶಲಕ್ಷ ಬಾವಿ ಯೋಜನೆ ಇವು ಜವಾಹರ್ ರೋಜ್‌ಗಾರ್ ಯೋಜನೆಯ ಉಪಯೋಜನೆಗಳು.

ಈ ಯೋಜನೆಯಡಿ ಜಿಲ್ಲೆಯಲ್ಲಿ ೧೯೯೭-೯೮ ರಲ್ಲಿ ೪೨೩.೧೩೦ ಲಕ್ಷ ರೂ. ಅನುದಾನವಿತ್ತು. ಅದರಲ್ಲಿ ರೂ.೩೮೧.೭೨೧ ಲಕ್ಷ ವೆಚ್ಚ ಮಾಡಿ, ಶೇ.೯೦ ರಷ್ಟು ಪ್ರಗತಿ ಸಾಧಿಸಿ, ೬.೧೧೧ ಲಕ್ಷ ಮಾನವದಿನಗಳನ್ನು ಸೃಷ್ಟಿಸಲಾಗಿದೆ. ೧೯೯೮-೯೯ರಲ್ಲಿ ೩೩೩.೭೮೬ ಲಕ್ಷ ರೂ. ಅನುದಾನದಲ್ಲಿ ೩೦೫.೭೨೭ ಲಕ್ಷ ರೂ. ವೆಚ್ಚ ಮಾಡಿ ೫.೬೯೧ ಲಕ್ಷಗಳ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ.

**ಆಶ್ರಯ ಯೋಜನೆ**

ಗ್ರಾಮೀಣ ಪ್ರದೇಶದಲ್ಲಿ ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಆಶ್ರಯ ಯೋಜನೆಯನ್ನು ೧೯೯೧-೯೨ರಲ್ಲಿ ಜಾರಿಗೆ ತರಲಾಯಿತು. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಾರ್ಷಿಕ ೧೧,೦೦೦ ರೂ.ಗಳ ಆದಾಯ ಮತ್ತು ಅದಕ್ಕಿಂತ ಕಡಿಮೆ ಆದಾಯವಿರುವ ನಿವೇಶನ ರಹಿತ ಜನರಿಗೆ ಕುಟುಂಬಕ್ಕೆ ಒಂದರಂತೆ ಗ್ರಾಮೀಣ ಪ್ರದೇಶದವರಿಗೆ ೩೦ × ೪೦ ಅಡಿಗಳ ಹಾಗೂ ನಗರ ಪ್ರದೇಶದವರಿಗೆ ೨೦ × ೩೦ ಅಡಿಗಳ ಅಳತೆಯ ನಿವೇಶನಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆ ಖಾಸಗಿ ಭೂಮಿಯನ್ನು ಖರೀದಿಸಿ, ನಿವೇಶನ ರಚಿಸಿ, ವಿತರಿಸಲಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೯-೨೦೦೦ನೇ ಸಾಲಿನಲ್ಲಿ ೨,೨೧೭ ನಿವೇಶನಗಳನ್ನು ಹಂಚುವ ಗುರಿ ಹೊಂದಿದ್ದು, ೧೯೭೮ ನಿವೇಶನಗಳನ್ನು ಹಂಚಲಾಯಿತು.

**ನಿರ್ಮಲ ಗ್ರಾಮಯೋಜನೆ** : ಗ್ರಾಮೀಣ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೆ ಉತ್ತಮ ನೈರ್ಮಲ್ಯ ಅವಶ್ಯಕ. ಉತ್ತಮ ನೈರ್ಮಲ್ಯವನ್ನು ಕಾಪಾಡುವ ಮೂಲಕ ಹಾಗೂ ಜಲಮೂಲ ಹಾಗೂ ಮಾನವ ಮೂಲಗಳಿಂದ ಬರುವ ಕಾಯಿಲೆಗಳನ್ನು ಬಹುಮಟ್ಟಿಗೆ ತಡೆಗಟ್ಟಬಹುದಾಗಿವೆ. ಈ ದಿಸೆಯಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಮತ್ತು ಪಂಚಾಯ್ತಿ ಸಂಸ್ಥೆಗಳ ಸಹಯೋಗದೊಂದಿಗೆ ೨ನೇ ಅಕ್ಟೋಬರ್ ೧೯೯೫ರಿಂದ ನಿರ್ಮಲ ಗ್ರಾಮ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಬಡತನ ರೇಖೆಗಿಂತ ಕೆಳಗಿರುವ ಯಾವುದೇ ಜನಾಂಗದ ಫಲಾನುಭವಿಗಳಿಗೆ ಘಟಕ ಒಂದಕ್ಕೆ ರೂ.೨,೦೦೦ ರಂತೆ ಹಾಗೂ ಬಡತನ ರೇಖೆಗಿಂತ ಮೇಲಿರುವ ಯಾವುದೇ ಜನಾಂಗದ ಫಲಾನುಭವಿಗಳಿಗೆ ರೂ.೧,೬೨೦ರಂತೆ ಸರ್ಕಾರ ಆರ್ಥಿಕ ನೆರವು ನೀಡುತ್ತದೆ. ಮಂಡ್ಯ ಜಿಲ್ಲೆಯಲ್ಲಿ ೧೯೯೭-೯೮ರಲ್ಲಿ ಈ ಯೋಜನೆಯಲ್ಲಿ ೯೯೫ ಶೌಚಾಲಯಗಳನ್ನು ನಿರ್ಮಿಸಿ, ೩೮,೪೬೪ ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ಗ್ರಾಮೀಣ ಸಾಮೂಹಿಕ ಜೀವವಿಮೆ** : ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳಿಗೆ ಸಾಮೂಹಿಕ ಜೀವವಿಮೆ ಸೌಲಭ್ಯ ಕಲ್ಪಿಸಲು ೧೯೯೫ರಲ್ಲಿ ಈ ಯೋಜನೆಯನ್ನು

ಕೇಂದ್ರ ಸರ್ಕಾರ ಜಾರಿಗೆ ತಂದಿತು. ವಾರ್ಷಿಕ ವಿಮಾ ಪ್ರೀಮಿಯಂ ಹಣದಲ್ಲಿ ಅರ್ಧಭಾಗವನ್ನು ಫಲಾನುಭವಿಗಳು ಪಾವತಿ ಮಾಡಬೇಕಾಗಿದ್ದು, ಉಳಿದ ವಿಮಾ ಪ್ರೀಮಿಯಂ ಹಣವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಿಸುತ್ತವೆ. ಈ ಯೋಜನೆಯನ್ನು ೧-೪-೨೦೦೦ದಲ್ಲಿ ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಲ್ಲಿ ವಿಲೀನಗೊಳಿಸಿದೆ.

### ಸಮಗ್ರ ಗ್ರಾಮೀಣ ಇಂಧನಶಕ್ತಿ ಯೋಜನಾ ಕಾರ್ಯಕ್ರಮ (ಐ.ಆರ್.ಇ.ಪಿ.)

ಗ್ರಾಮೀಣ ಪ್ರದೇಶದಲ್ಲಿ ಉರುವಲಿಗಾಗಿ ಮಾಡುವ ಅರಣ್ಯನಾಶ ತಡೆಗಟ್ಟಲು, ಉರುವಲಿನ ಬಳಕೆಯಿಂದ ಅಡುಗೆ ಮಾಡುವವರ ಆರೋಗ್ಯ ರಕ್ಷಿಸಲು, ಇದರ ಹೊಗೆಯಿಂದಾಗುವ ಪರಿಸರ ಮಾಲಿನ್ಯ ತಡೆಯಲು, ಈ ಯೋಜನೆಯು ಸ್ಥಳೀಯ ಸಾಂಪ್ರದಾಯಿಕ ಇಂಧನ ಮೂಲಗಳನ್ನು ಕ್ರೋಡೀಕರಿಸಿದ ಸೌರ, ಜೈವಿಕ ಅನಿಲ, ಪವನಶಕ್ತಿಗಳ ಬಳಕೆಯನ್ನು ರೂಪಿಸಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಮಳವಳ್ಳಿ ತಾಲೂಕನ್ನು ೧೯೯೬-೯೭ರಿಂದ ಆಯ್ಕೆ ಮಾಡಲಾಯಿತು. ಗ್ರಾಮೀಣ ಹಾಗೂ ಪಟ್ಟಣ ಫಲಾನುಭವಿಗಳಿಗೆ ವಿವಿಧ ರೀತಿಯ ಇಂಧನ ಉಳಿತಾಯದ ಉಪಕರಣಗಳ ಬಳಕೆಗಾಗಿ ಹಾಗೂ ಅಸಾಂಪ್ರದಾಯಿಕ ಇಂಧನಶಕ್ತಿ ಸಲಕರಣೆಗಳನ್ನು ಅಳವಡಿಸಿಕೊಳ್ಳಲು ಸರ್ಕಾರದಿಂದ ಸಹಾಯಧನ ಸೌಲಭ್ಯ ಹಾಗೂ ಸಾರ್ವಜನಿಕ ಉಪಯೋಗಕ್ಕಾಗಿ ಪ್ರಾತ್ಯಕ್ಷತೆ ಕಾರ್ಯಕ್ರಮದ ಮೂಲಕ ವಿವಿಧ ಸೌರಶಕ್ತಿ ಉಪಕರಣಗಳನ್ನು ಅಳವಡಿಸಲಾಗಿದೆ. ಸಮಗ್ರ ಗ್ರಾಮೀಣ ಇಂಧನಶಕ್ತಿ ಯೋಜನೆಯಡಿಯಲ್ಲಿ ೧೯೯೯-೨೦೦೦ರಲ್ಲಿ ಸಹಾಯಧನ ಹಾಗೂ ಪ್ರಾತ್ಯಕ್ಷಿಕಾ ಕಾರ್ಯಕ್ರಮಗಳೆರಡರಲ್ಲೂ ೨೫೦ ಭೌತಿಕ ಗುರಿ ಹೊಂದಿದ್ದು, ೧೭ ಇಂಧನ ಶಕ್ತಿ ಉಪಕರಣಗಳನ್ನು ವಿತರಿಸಲಾಗಿದೆ. ಅದರಂತೆ ೭.೪೨ ಲಕ್ಷ ಆರ್ಥಿಕ ಗುರಿ ಹೊಂದಿದ್ದು, ೫ ಲಕ್ಷ ವೆಚ್ಚ ಮಾಡಲಾಗಿದೆ.

### ಉದ್ಯೋಗ ಭರವಸೆ ಯೋಜನೆ

ಈ ಯೋಜನೆಯು ಕೃಷಿ ಕೆಲಸಗಳು ಕಡಿಮೆ ಇರುವ ಕಾಲದಲ್ಲಿ ಉದ್ಯೋಗ ಒದಗಿಸುವ, ಸಮುದಾಯ ಆಸ್ತಿಗಳನ್ನು ಸೃಜಿಸುವ ಮುಖ್ಯ ಉದ್ದೇಶಗಳೊಂದಿಗೆ ೧೯೯೬-೯೭ರಲ್ಲಿ ಜಿಲ್ಲೆಯಲ್ಲಿ ಜಾರಿಗೆ ಬಂದಿತು. ಈ ಯೋಜನೆಯಂತೆ ಕನಿಷ್ಠ ೧೮ ವರ್ಷಕ್ಕೆ ಮೇಲ್ಪಟ್ಟು ೬೦ ವರ್ಷಕ್ಕಿಂತ ಕಡಿಮೆ ವಯಸ್ಸಿನ ಪುರುಷರು ಹಾಗೂ ಸ್ತ್ರೀಯರಿಗೆ ೧೦೦ ಮಾನವ ದಿನಗಳ ಕೆಲಸವನ್ನು ಕನಿಷ್ಠ ವೇತನಕ್ಕೆ ಅನುಗುಣವಾಗಿ ನೀಡಲಾಗುವುದು. ಈ ಯೋಜನೆಯ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯಗಳ ನಡುವೆ ೮೦:೨೦ರ ಅನುಪಾತದಲ್ಲಿ ಭರಿಸಲಾಗುತ್ತದೆ.

೧೯೯೯-೨೦೦೦ ರಲ್ಲಿ ಈ ಯೋಜನೆಗೆ ಜಿಲ್ಲೆಯಲ್ಲಿ ಲಭ್ಯವಿದ್ದ ಹಣ ರೂ.೪೧೧.೮೨೦ ಲಕ್ಷಗಳಲ್ಲಿ ರೂ.೧೭೫.೧೩೭ ಲಕ್ಷ ವೆಚ್ಚವಾಗಿದ್ದು, ೪.೫೧೦ ಲಕ್ಷ ಮಾನವದಿನಗಳನ್ನು ಸೃಷ್ಟಿಸಲಾಯಿತು. ಒಟ್ಟು ೧೦೮೯ ಕಾಮಗಾರಿಗಳಲ್ಲಿ ೭೮೯ ಕಾಮಗಾರಿಗಳು ಪೂರ್ಣಗೊಂಡಿದ್ದು, ೩೦೦ ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದವು.

### ಇಂದಿರಾ ಆವಾಸ್ ಯೋಜನೆ

ಇಂದಿರಾ ಆವಾಸ್ ಯೋಜನೆಯು ಜವಾಹರ್ ರೋಜ್‌ಗಾರ್ ಯೋಜನೆಯ ಉಪಯೋಜನೆಯಾಗಿತ್ತು. ಆದರೆ ಈ ಯೋಜನೆಯು ೧ನೇ ಜನವರಿ ೧೯೯೬ರಿಂದ ಒಂದು ಸ್ವತಂತ್ರ ಯೋಜನೆಯಾಗಿ ಪರಿವರ್ತಿತವಾಯಿತು. ಬಡತನ ರೇಖೆಯ ಕೆಳಗಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಬಡತನ ರೇಖೆಗಿಂತ ಕೆಳಗಿರುವ ವಿಮುಕ್ತಿಗೊಳಿಸಿದ ಜೀತದಾಳುಗಳಿಗೆ ವಸತಿ ಸೌಲಭ್ಯ ಒದಗಿಸುವುದೇ ಈ ಯೋಜನೆಯ ಉದ್ದೇಶವಾಗಿದೆ. ಈ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಇತರೆ ಬಡಜನರಿಗೂ ಸಹ ಒಟ್ಟು ಅನುದಾನದ ಪೈಕಿ ಶೇ.೪ಕ್ಕಿಂತ ಅಧಿಕವಾಗದ ಆರ್ಥಿಕ ಸಹಾಯವನ್ನು ವಿಸ್ತರಿಸಲಾಗಿದೆ.

ಈ ಯೋಜನೆಯ ಮೇರೆಗೆ ಗೃಹಗಳ ಪಾಯದ ಮೇಲಿನ ವಿಸ್ತೀರ್ಣ ೧೭-೨೦ ಚ.ಮೀ.ಗಳಿರಬೇಕೆಂಬ ಷರತ್ತನ್ನು ಹೊರತುಪಡಿಸಿ, ಇನ್ನು ಯಾವುದೇ ಷರತ್ತು ನಿಗದಿಪಡಿಸಲಾಗಿರಲಿಲ್ಲ. ಸ್ಥಳೀಯ ಸಾಮಗ್ರಿಗಳನ್ನೇ ಉಪಯೋಗಿಸಿಕೊಂಡು ಫಲಾನುಭವಿಗಳೇ ಸ್ವತಃ ಮನೆಗಳನ್ನು ನಿರ್ಮಿಸಿಕೊಳ್ಳಬೇಕಾಗಿರುತ್ತದೆ. ಸರ್ಕಾರ ತಾಂತ್ರಿಕ ನೆರವು ಹಾಗೂ ಕಟ್ಟಡ ಸಾಮಗ್ರಿಗಳನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡುತ್ತದೆ. ಈ ಯೋಜನೆಯ ಪ್ರಕಾರ ಮನೆಯ ನಿರ್ಮಾಣ, ಶೌಚಾಲಯ, ಹೊಗೆ ರಹಿತ ಒಲೆ ನಿರ್ಮಾಣ, ಮುಂತಾದ ಸಾಮಾನ್ಯ ಸೌಲಭ್ಯಗಳುಳ್ಳ ಮನೆಗಳನ್ನು ನಿರ್ಮಿಸಲು ಒಟ್ಟು ರೂ.೨೦,೦೦೦ ಗಳನ್ನು ಸರ್ಕಾರ ನೀಡುತ್ತದೆ.

೧-೪-೧೯೯೯ಕ್ಕೆ ಮುಂದುವರಿದ ಮನೆಗಳೂ ಸೇರಿದಂತೆ ೧೯೯೯-೨೦೦೦ನೇ ಸಾಲಿಗೆ ಜಿಲ್ಲೆಯಲ್ಲಿ ಒಟ್ಟು ೧೬೯೫ ಮನೆಗಳ ಭೌತಿಕ ಹಾಗೂ ೧೭೬.೮೬೫ ಲಕ್ಷ ರೂ.ಗಳ ಆರ್ಥಿಕ ಗುರಿ ಹೊಂದಲಾಗಿದ್ದು, ಇದಕ್ಕೆ ಎದುರಾಗಿ ೨೦೦೦ ಮಾರ್ಚ್ ಅಂತ್ಯದವರೆಗೂ ರೂ. ೧೩೫.೦೮೬ ಲಕ್ಷಗಳನ್ನು ವ್ಯಯಿಸಿ ೬೭೫ ಮನೆಗಳನ್ನು ನಿರ್ಮಿಸಲಾಯಿತು.

## ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (ಐ.ಆರ್.ಡಿ.ಪಿ.) ಗ್ರಾಮೀಣ ಯುವಕರಿಗೆ ಸ್ವಂತ ಉದ್ಯೋಗ ತರಬೇತಿ ಕಾರ್ಯಕ್ರಮ (ಟ್ರೈಸಂ), ಗ್ರಾಮೀಣ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ), ಗಂಗಾಕಲ್ಯಾಣ, ಸುಧಾರಿತ ಉಪಕರಣಗಳ ಸರಬರಾಜು ಮತ್ತು ದಶಲಕ್ಷ ಬಾವಿ ಯೋಜನೆ ಮುಂತಾದ ಯೋಜನೆಗಳನ್ನು ವಿಲೀನಗೊಳಿಸಿ ಒಂದನೇ ಏಪ್ರಿಲ್ ೧೯೯೯ ರಿಂದ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಆ ಪ್ರಕಾರ ೧೯೯೯-೨೦೦೦ನೇ ಆರ್ಥಿಕ ವರ್ಷದಲ್ಲಿ ರೂ.೨೧೧.೩೦೧ ಲಕ್ಷ ಆರ್ಥಿಕ ಗುರಿ, ೭೬ ಗುಂಪುಗಳ ಮೂಲಕ ೩೬೨ ವೈಯಕ್ತಿಕ ಫಲಾನುಭವಿಗಳಿಗೆ ನೆರವು ಗುರಿ ನಿಗಧಿಪಡಿಸಿ ಈ ಯೋಜನೆ ಅನುಷ್ಠಾನಕ್ಕೆ ಬಂದಿತು. ಮೊದಲನೆ ಕಂತಾಗಿ ರೂ.೧೨೬.೩೩ ಲಕ್ಷ ಅನುದಾನ ಬಿಡುಗಡೆ ಮಾಡಲಾಯಿತು. ಅಲ್ಲದೆ ಹಿಂದಿನ ಸಾಲಿನಿಂದ ವಿಲೀನಗೊಂಡ ಮೇಲ್ಕಂಡ ಕಾರ್ಯಕ್ರಮಗಳಡಿ ೧-೪-೧೯೯೯ಕ್ಕೆ ಉಳಿದ ರೂ.೧೦೧.೯೭ಲಕ್ಷ ಪ್ರಾರಂಭಿಕ ಶಿಲ್ಕು ಸೇರಿದಂತೆ ಒಟ್ಟು ರೂ.೨೨೮.೩೦ ಲಕ್ಷ ಅನುದಾನ ಲಭ್ಯವಿತ್ತು. ಫೆಬ್ರವರಿ ೨೦೦೦ರಲ್ಲಿ ಮೂಲಗುರಿಯನ್ನು ಪರಿಷ್ಕರಿಸಿ ರೂ.೩೧೩.೨೭ ಲಕ್ಷಗಳ ಆರ್ಥಿಕ ಗುರಿ ೭೬ ಗುಂಪುಗಳ ಮೂಲಕ ೭೫೦ ವೈಯಕ್ತಿಕ ಫಲಾನುಭವಿಗಳ ಭೌತಿಕ ಗುರಿಯನ್ನು ನಿಗಧಿಪಡಿಸಲಾಯಿತು. ಅದರಂತೆ ೭೭ ಗುಂಪುಗಳ ರಚನೆಯ ಮೂಲಕ ೬೯೪ ವೈಯಕ್ತಿಕ ಫಲಾನುಭವಿಗಳು ಲಾಭ ಪಡೆದರು.

## ಜವಾಹರ್ ಗ್ರಾಮ ಸಮೃದ್ಧಿ ಯೋಜನೆ

೧. ಜವಾಹರ್ ಗ್ರಾಮಸಮೃದ್ಧಿ ಯೋಜನೆಯು ಒಂದನೇ ಏಪ್ರಿಲ್ ೧೯೯೯ರಲ್ಲಿ ಜಾರಿಗೆ ಬಂದಿತು. ಗ್ರಾಮ ಮಟ್ಟದಲ್ಲಿ ಬಾಳಿಕೆಯ ಸ್ವತ್ತುಗಳ ನಿರ್ಮಾಣ ಮಾಡುವುದು ಹಾಗೂ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಬಡವರಿಗೆ ಪೂರಕ ಉದ್ಯೋಗಾವಕಾಶವನ್ನು ಸೃಷ್ಟಿಸುವುದು, ಮುಂತಾದ ಉದ್ದೇಶಗಳನ್ನು ಈ ಯೋಜನೆಯು ಹೊಂದಿದೆ.

ಮೇಲಿನ ಉದ್ದೇಶ ಸಾಧನೆಗಾಗಿ ವಾರ್ಷಿಕ ಅನುದಾನ ಮಂಜೂರಾತಿಯಲ್ಲಿ ಶೇ.೨೨.೫ರಷ್ಟನ್ನು ಪರಿಶಿಷ್ಟ ವರ್ಗ ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ತೆಗೆದಿಡಬೇಕು. ಈ ಯೋಜನೆಗೆ ೭೫:೨೫ರ ಪ್ರಮಾಣದಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ವೆಚ್ಚ ಹಂಚಿಕೊಳ್ಳುವ ಆಧಾರದ ಮೇಲೆ ಕೇಂದ್ರಿಯ ಪ್ರಾಯೋಜಿತ ಯೋಜನೆಯಾಗಿ ಅನುಷ್ಠಾನಗೊಳಿಸಲಾಯಿತು. ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಮಸ್ತ ನಿಧಿಗಳನ್ನು ಕೇಂದ್ರವೇ ಒದಗಿಸುತ್ತವೆ. ಮಂಡ್ಯ

ಜಿಲ್ಲೆಗೆ ೨೦೦೦-೦೧ನೇ ಆರ್ಥಿಕ ವರ್ಷದಲ್ಲಿ ಒಟ್ಟು ೩೪೬.೭೨೪ ಲಕ್ಷಗಳ ಅನುದಾನವಿದ್ದು, ಇದಕ್ಕೆ ಎದುರಾಗಿ ರೂ.೩೨೮.೫೪೨ ಲಕ್ಷ ವೆಚ್ಚ ಮಾಡಿ ೩.೨೫೫ ಲಕ್ಷ ಮಾನವ ದಿನಗಳನ್ನು ಸೃಷ್ಟಿಸಿ ಶೇ.೯೦ ರಷ್ಟು ಪ್ರಗತಿ ಸಾಧಿಸಲಾಗಿದೆ.

**ಸ್ವಸ್ತಿ ಗ್ರಾಮ ಯೋಜನೆ :** ಭಾರತದ ೫೦ನೇ ಸ್ವಾತಂತ್ರ್ಯ (೧೯೪೭-೧೯೯೭) ವರ್ಷಾಚರಣೆಯ ಸಂದರ್ಭದಲ್ಲಿ ಮಾದರಿ ಗ್ರಾಮಗಳನ್ನು ಸಾಕಾರಗೊಳಿಸಲು ಸ್ವಸ್ತಿ ಗ್ರಾಮೀಣ ಯೋಜನೆಯನ್ನು ಜಾರಿಗೆ ತರಲಾಯಿತು. ಈ ಯೋಜನೆಯನ್ವಯ ಸ್ವಸ್ತಿ ಗ್ರಾಮ ಯೋಜನೆಗೆ ಸೇರಿಸಲ್ಪಡುವ ಗ್ರಾಮಗಳ ಜನಸಂಖ್ಯೆ ೨,೦೦೦ ರಿಂದ ೩,೦೦೦ ಇರಬೇಕು. ಈ ಯೋಜನೆಯಡಿ ಗ್ರಾಮಾಭಿವೃದ್ಧಿಪಡಿಸಲು ಬೇಕಾಗಿರುವ ಒಟ್ಟು ವೆಚ್ಚದಲ್ಲಿ ಶೇ. ೫೦ ರಷ್ಟನ್ನು ಸರ್ಕಾರ ವಿವಿಧ ಕಾರ್ಯಕ್ರಮಗಳ ಅನುದಾನದಿಂದ ಕ್ರೋಢಿಕರಿಸಿ ಒದಗಿಸುತ್ತದೆ. ಸ್ವಸ್ತಿ ಗ್ರಾಮಗಳ ಅಭಿವೃದ್ಧಿಗೆ ಮುಂದೆ ಬರುವ ಸಾಂಸ್ಥಿಕ ದಾನಿಗಳು ಶೇ.೪೦ರಷ್ಟನ್ನು, ಉಳಿದ ಶೇ.೧೦ರಷ್ಟನ್ನು ವಂತಿಗೆಯ ರೂಪದಲ್ಲಿ ಆಯಾ ಗ್ರಾಮದ ಸಾರ್ವಜನಿಕರು ಒದಗಿಸಬೇಕು. ಸ್ವಸ್ತಿ ಗ್ರಾಮ ಯೋಜನೆಗೆ ಆಯ್ಕೆ ಮಾಡಿದ ಪ್ರತೀ ಗ್ರಾಮದಲ್ಲಿ ಸ್ವಸ್ತಿ ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಗ್ರಾಮದ ಅಭಿವೃದ್ಧಿಯಲ್ಲಿ ಭಾಗವಹಿಸಬೇಕು. ಸ್ವಸ್ತಿ ಗ್ರಾಮ ಯೋಜನೆಯಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳು ಹೀಗಿವೆ.

೧. ಮಣ್ಣು ನೀರು ಮತ್ತು ಸಸ್ಯಸಂಪತ್ತುಗಳ ಅಭಿವೃದ್ಧಿ

೨. ಜನಜೀವನ ಪುನರ್ ಸುಧಾರಣೆಗಾಗಿ ಗ್ರಾಮದ ಆಂತರಿಕ ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆ, ಗ್ರಾಮ ನೈರ್ಮಲ್ಯದ ವ್ಯವಸ್ಥೆ ಕಲ್ಪಿಸುವುದು ಹಾಗೂ ಮನೆಗಳ ನಿರ್ಮಾಣ.

೩. ಗ್ರಾಮದ ಮಾನವ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳ ಸ್ಥಾಪನೆ, ಯುವಜನರಿಗೆ ತರಬೇತಿ ಹಾಗೂ ವೈದ್ಯಕೀಯ ವ್ಯವಸ್ಥೆ ಕಲ್ಪಿಸಿ ಅಭಿವೃದ್ಧಿಗೊಳಿಸುವುದು ಮುಂತಾದವು.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಂಡ್ಯ ತಾಲೂಕಿನ ಹೊನಗಾನಹಳ್ಳಿ ಗ್ರಾಮವನ್ನು ಆಯ್ಕೆ ಮಾಡಿ ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಗೆ ವಹಿಸಲಾಗಿದೆ. ಈ ಕಾರ್ಖಾನೆಯವರು ಒಟ್ಟು ಅಂದಾಜಿನ ಮೊತ್ತದಲ್ಲಿ ಶೇ.೪೦ರಷ್ಟು (ರೂ.೨೦ ಲಕ್ಷಗಳು) ವಂತಿಗೆಯನ್ನು ತೊಡಗಿಸಲು ಒಪ್ಪಿದ್ದು, ೧೯೯೯-೨೦೦೦ ನೇ ಸಾಲಿನಲ್ಲಿ ಈಗಾಗಲೇ ಮೈಸೂರು ಸಕ್ಕರೆ ಕಾರ್ಖಾನೆ ೫ ಲಕ್ಷ ರೂ.ಗಳು, ಜಿಲ್ಲಾ ಪಂಚಾಯ್ತಿ ಐದು ಲಕ್ಷ ರೂ. ಹೀಗೆ ಒಟ್ಟು ೧೦ ಲಕ್ಷ ರೂ.ಗಳನ್ನು ಉದ್ದೇಶಿತ ಕಾರ್ಯದಲ್ಲಿ ತೊಡಗಿಸಲು ಉದ್ದೇಶಿಸಿದೆ. ಕಾರ್ಯಪಾಲಕ ಅಭಿಯಂತರರು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಮಂಡ್ಯ ಇವರು ರೂ.೫೦ ಲಕ್ಷದ ಅಂದಾಜನ್ನು ತಯಾರಿಸಿದ್ದಾರೆ.

### ಅಂಬೇಡ್ಕರ್ ವಸತಿ ಯೋಜನೆ

ಅಂಬೇಡ್ಕರ್ ವಸತಿ ಯೋಜನೆಯನ್ವಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮಾತ್ರ ಮೀಸಲಾಗಿದೆ. ೧೯೯೬-೯೭ ರಿಂದ ೧೯೯೮-೯೯ರವರಿಗಿನ ಗುರಿ ಸಾಧನೆಯ ವಿವರ ಹೀಗಿದೆ. ಮಂಜೂರಾದ ಮನೆಗಳು (ಗುರಿ) ೨,೬೨೭, ಪೂರ್ಣಗೊಂಡ ಮನೆಗಳು ೧,೯೬೮, ಪ್ರಗತಿಯಲ್ಲಿರುವ ಮನೆಗಳು ೨೦೩ ಹಾಗೂ ಪ್ರಾರಂಭಿಸಲು ಬಾಕಿ ಇರುವ ಮನೆಗಳು ೩೫೭ ಆಗಿದ್ದವು.

### ಪ್ರವಾಹ ಮತ್ತು ಬರಪೀಡನೆ

ಬರ ಹಾಗೂ ಪ್ರವಾಹ ಸಂದರ್ಭಗಳಲ್ಲಿ ಸೂಕ್ತ ಪರಿಹಾರ ಒದಗಿಸಲಾಗುತ್ತಿತ್ತಾದರೂ, ಅದನ್ನು ಪುಷ್ಟೀಕರಿಸುವ ದಾಖಲೆಗಳು ವಿರಳವೆಂದೇ ಹೇಳಬೇಕು. ೧೬ನೇ ಶತಮಾನದ ಕೊನೆಯಲ್ಲಿ ಬಂದೊದಗಿದ ಸುಣ್ಣದಕ್ಕಿ ಬರ ಬಹಳ ಭೀಕರವಾಗಿದ್ದು, ಸುಮಾರು ಏಳು ವರ್ಷ ಸತತವಾಗಿ ಮಳೆಬೀಳದೆ ಗಿಡಮರ, ಬಳ್ಳಿ, ತೋಟಗಳೆಲ್ಲಾ ನಾಶವಾಗಿ

ಪ್ರಾಣಿ-ಪಕ್ಷಿಗಳು ಆಹಾರ, ನೀರು, ನೆರಳಿಲ್ಲದೆ ಸತ್ತು ಜನರು ವಿಧಿಯಿಲ್ಲದೆ ಬಿದಿರಕ್ಕಿ ಮತ್ತು ಕತ್ತಾಳೆ ಗೆಡ್ಡೆಗಳನ್ನು ತಿಂದು ಜೀವನ ನಡೆಸುವಂತಹ ಪರಿಸ್ಥಿತಿ ಒದಗಿ ಬಂದಿತ್ತೆಂದು ತಿಳಿದುಬರುತ್ತದೆ.

೧೭೯೯ರಲ್ಲಿ ಶ್ರೀರಂಗಪಟ್ಟಣದ ಪತನದ ಸಂದರ್ಭದಲ್ಲಿ ಕಾಲರಾ ಹಾಗೂ ಪ್ಲೇಗ್‌ನಿಂದಾಗಿ ಸಾಕಷ್ಟು ಪ್ರಮಾಣದಲ್ಲಿ ಸಾವುಂಟಾಯಿತು. ಸಾವಿರಾರು ಜನ ಮೈಸೂರು ಕಡೆ ವಲಸೆ ಹೋದರು. ಟಿಪ್ಪು ಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ೧,೫೦,೦೦೦ವಿದ್ದ ಜನಸಂಖ್ಯೆ ೧೮೦೦ರ ವೇಳೆಗೆ ಕೇವಲ ೩೨ ಸಾವಿರಕ್ಕೆ ಕುಸಿಯಿತೆಂದು ಬುಕಾನನ್ ಹೇಳಿದ್ದಾನೆ. ನಂತರ ೧೮೭೬ರಲ್ಲಿ ಸಂಭವಿಸಿದ ಬರದಲ್ಲಿ ನಾಗಮಂಗಲ ತಾಲೂಕಿನಲ್ಲಿದ್ದ ಅಡಿಕೆ ಮರಗಳು ನಾಶವಾದರೂ ಅಷ್ಟಿಷ್ಟು ತೆಂಗಿನ ಮರಗಳು ಉಳಿದುಕೊಂಡವೆಂದೂ, ಹಯವದನರಾವ್ ದಾಖಲಿಸಿದ್ದಾರೆ. ೧೮೯೧-೯೨ರ ನಂತರ ಜಿಲ್ಲೆಯಲ್ಲಿ ಯಾವುದೇ ಪ್ರಕೃತಿ ವಿಕೋಪ ಸಂಭವಿಸಿದ ಬಗ್ಗೆ ದಾಖಲೆಗಳಿಲ್ಲದಿದ್ದರೂ, ಮಳೆಯ ವಿಫಲತೆಯಿಂದಾಗಿ ಆಹಾರ, ನೀರು ಹಾಗೂ ದನಗಳ ಮೇವಿಗಾಗಿ ಆಗಾಗ ಕೊರತೆ ಸಂಭವಿಸಿತು. ೧೮೯೧-೯೨, ೧೮೯೮-೯೯, ೧೯೦೧-೦೨, ೧೯೧೮-೧೦, ೧೯೨೨-೨೩, ೧೯೨೮-೨೯, ೧೯೩೫-೩೬, ೧೯೪೦-೪೧, ೧೯೪೬-೪೭, ೧೯೫೨-೫೩, ೧೯೫೮-೫೯, ೧೯೬೩-೬೪ ಹಾಗೂ ೧೯೬೫-೬೬ರವರೆಗಿನ ವರ್ಷಗಳಲ್ಲಿ ಮಳೆಯ ವಿಫಲತೆ ಜಿಲ್ಲೆಯ ಆರ್ಥಿಕ ಸ್ಥಿತಿಗತಿಯನ್ನು ಹದಗೆಡಿಸಿತು. ಅಲ್ಲದೇ ಆಹಾರ, ನೀರಿನ ಕೊರತೆ ಉಂಟಾಯಿತು. ಇಂತಹ ಕೊರತೆ ಮಂಡ್ಯ, ನಾಗಮಂಗಲ, ಕೃಷ್ಣರಾಜಪೇಟೆ ಹಾಗೂ ಮಳವಳ್ಳಿ ತಾಲೂಕುಗಳಲ್ಲಿ ಹೆಚ್ಚಾಗಿತ್ತು. ೧೮೯೧-೯೨ರಲ್ಲಿ ಮುಂಗಾರಿನ ವಿಫಲತೆಯಿಂದ ಒಳಪ್ರದೇಶದಲ್ಲಿ ಬೆಳೆಗಳು ಒಣಗಿದ್ದರಿಂದ, ಮಂಡ್ಯ ಹಾಗೂ ಮಳವಳ್ಳಿ ತಾಲೂಕುಗಳಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಯಿತು.

೧೮೯೮-೯೯, ೧೯೦೧-೦೨ ಹಾಗೂ ೧೯೦೮-೦೯ರಲ್ಲಿ ಮಳೆಯ ಕೊರತೆ ಉಂಟಾದರೂ ಜಿಲ್ಲೆಯ ಜನರ ಆರ್ಥಿಕ ಜೀವನದ ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಆದರೂ ಮಂಡ್ಯ, ನಾಗಮಂಗಲ ಹಾಗೂ ಕೃಷ್ಣರಾಜಪೇಟೆ ತಾಲೂಕುಗಳಲ್ಲಿ ಉಂಟಾದ ನೀರು ಮತ್ತು ದನಗಳ ಮೇವಿನ ಕೊರತೆಯನ್ನು ಹೋಗಲಾಡಿಸಲಾಯಿತು. ೧೯೨೨-೨೩ರಲ್ಲಿ ಸಂಭವಿಸಿದ ಬರ ಕೇವಲ ನಾಗಮಂಗಲ ತಾಲೂಕಿಗೆ ಸೀಮಿತವಾಗಿದ್ದು, ಒಂಬತ್ತು ಹಳ್ಳಿಗಳ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ೧೯೬೭ರಲ್ಲಿ ಜಿಲ್ಲೆಯಲ್ಲಿ ಸರಾಸರಿ ೪೯೮.೮೩ ಮಿ.ಮೀ. ಮಳೆಯಾಗಿದ್ದು, ಬಿಟ್ಟರೆ, ಉಳಿದ ತಾಲೂಕುಗಳಾದ ಮಂಡ್ಯ (೩೮೦.೪ ಮಿ.ಮೀ), ಕೃಷ್ಣರಾಜ ಪೇಟೆ (೪೧೦ ಮಿ.ಮೀ.) ನಾಗಮಂಗಲ (೪೪೩.೬ ಮಿ.ಮೀ) ಶ್ರೀರಂಗಪಟ್ಟಣ (೪೬೧.೫ ಮಿ.ಮೀ) ಹಾಗೂ ಪಾಂಡವಪುರಗಳಲ್ಲಿ (೪೮೧.೬ ಮಿ.ಮೀ) ಕನಿಷ್ಟ ಮಳೆಯಾಗಿತ್ತು. ೧೯೭೬ರಲ್ಲಿ ಜಿಲ್ಲಾ ಸರಾಸರಿ ೪೬೭.೧೩ ಮಿ.ಮೀ. ಮಳೆಯಾಗಿದ್ದು, ಪಾಂಡವಪುರದಲ್ಲಿ (೩೭೧.೪ ಮಿ.ಮೀ) ಮಂಡ್ಯ (೩೮೦.೮ ಮಿ.ಮೀ) ಶ್ರೀರಂಗಪಟ್ಟಣ (೩೮೨.೩ ಮಿ.ಮೀ), ಮಳವಳ್ಳಿ (೪೯೯.೭ ಮಿ.ಮೀ) ಕೃಷ್ಣರಾಜ ಪೇಟೆ (೪೬೭.೯ ಮಿ.ಮೀ) ಹಾಗೂ ನಾಗಮಂಗಲ (೪೯೫.೫ ಮಿ.ಮೀ)ಗಳಲ್ಲಿ ಕನಿಷ್ಠ ಮಳೆಯಾಗಿತ್ತು.

೧೯೮೨ರಿಂದ ೧೯೮೫ರವರೆಗಿನ ವರ್ಷಗಳಲ್ಲಿ ಮುಂಗಾರಿನ (ಜೂನ್ ನಿಂದ ಸೆಪ್ಟೆಂಬರ್ ತಿಂಗಳವರೆಗೆ) ಅವಧಿಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ಯಾವುದೇ ತಾಲೂಕುಗಳಿರಲಿಲ್ಲ. ಆದರೆ ಸಾಧಾರಣ ಬರಗಾಲಕ್ಕೆ ೧೯೮೩ರಲ್ಲಿ ೩ ತಾಲೂಕುಗಳು ೧೯೮೪ರಲ್ಲಿ ೨ ತಾಲೂಕುಗಳು ಹಾಗೂ ೧೯೮೫ರಲ್ಲಿ ಒಂದು ತಾಲೂಕು ತುತ್ತಾಗಿದ್ದವು. ಕಡಿಮೆ ಬರಗಾಲಕ್ಕೆ ೧೯೮೨ರಲ್ಲಿ ೩ ತಾಲೂಕುಗಳು, ೧೯೮೫ರಲ್ಲಿ ಒಂದು ತಾಲೂಕು ತುತ್ತಾಗಿತ್ತು. ೧೯೮೨ರಿಂದ ೧೯೮೫ರವರೆಗಿನ ವರ್ಷಗಳಲ್ಲಿ ಹಿಂಗಾರಿನ (ಅಕ್ಟೋಬರ್ ನಿಂದ ಡಿಸೆಂಬರ್ ತಿಂಗಳವರೆಗೆ) ಅವಧಿಯಲ್ಲಿ ತೀವ್ರ ಬರಗಾಲಕ್ಕೆ ತುತ್ತಾದ ತಾಲೂಕುಗಳ ಸಂಖ್ಯೆ ೧೯೮೨ರಲ್ಲಿ ಆರು, ೧೯೮೩ರಲ್ಲಿ ಒಂದು, ೧೯೮೪ರಲ್ಲಿ ಮೂರು ಹಾಗೂ ೧೯೮೫ರಲ್ಲಿ ಆರು ಆಗಿದ್ದಿತು. ಸಾಧಾರಣ ಬರಗಾಲಕ್ಕೆ ೧೯೮೨ರಲ್ಲಿ ಒಂದು, ೧೯೮೩ರಲ್ಲಿ ಮೂರು,

೧೯೮೪ರಲ್ಲಿ ಎರಡು ತಾಲೂಕುಗಳು ಹಾಗೂ ೧೯೮೫ರಲ್ಲಿ ಒಂದು ತಾಲೂಕು ತುತ್ತಾಗಿತ್ತು. ೧೯೮೫–೮೬ರಲ್ಲಿ ಬರ ಪರಿಹಾರ ಕಾರ್ಯಕ್ರಮ ಹಾಗೂ ಉದ್ಯೋಗ ಮೂಲ ಕಾರ್ಯಕ್ರಮಗಳನ್ವಯ ರಸ್ತೆಗಳ ದುರಸ್ತಿ, ಗ್ರಾಮಾಂತರ ಕೂಡು ರಸ್ತೆಗಳ ನಿರ್ಮಾಣ, ಹಳೆಯ ಕೆರೆಗಳ ಹೂಳು ತೆಗೆಯುವುದು, ಹಾಗೂ ಶಾಲಾ ಕಟ್ಟಡಗಳ ನಿರ್ಮಾಣ, ಮುಂತಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಜಿಲ್ಲೆಯಲ್ಲಿ ೧೯೯೦–೯೧ ರಿಂದ ೨೦೦೧–೦೨ರವರೆಗೆ ಅತಿ ವೃಷ್ಟಿಯಿಂದ ಹಾನಿ ಸಂಭವಿಸಿರುವುದನ್ನು ಮುಂದಿನ ಕೋಷ್ಟಕ ೮.೩೪ರಲ್ಲಿ ನೋಡಿ.

**ಕೋಷ್ಟಕ ೮.೩೪ ಜಿಲ್ಲೆಯಲ್ಲಿ ೧೯೯೦–೯೧ ರಿಂದ ೨೦೦೧–೨೦೦೨ರವರೆಗಿನ ಪ್ರಕೃತಿ ವಿಕೋಪದಿಂದ ಆದ ಹಾನಿ ಹಾಗೂ ವಿತರಿಸಲಾ ಪರಿಹಾರ ಧನದ ವಿವರ**

| ಕ್ರ. ಸಂ. | ವರ್ಷಗಳು | ಮಳೆಯಿಂದ ಮನೆಬಿದ್ದು ನಷ್ಟಕ್ಕೊಳಗಾದ ಕುಟುಂಬಗಳ ಸಂಖ್ಯೆ | ಬೆಳೆನಾಶ ಕ್ಕೊಳಗಾದ ಕುಟುಂಬಗಳ ಸಂಖ್ಯೆ | ಜಾನುವಾರು ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಮನೆ, ಬೆಳೆ ಹಾಗೂ ಜಾನುವಾರುಗಳ ನಷ್ಟಕ್ಕೊಳಗಾದವರಿಗೆ ವಿತರಿಸಿದ ಪರಿಹಾರ (ರೂ.ಗಳಲ್ಲಿ) | ಬೆಂಕಿ ಅನಾಹುತದಿಂದ ನಷ್ಟ ಹೊಂದಿದ ಕುಟುಂಬಗಳ ಸಂಖ್ಯೆ | ಬೆಂಕಿ ಅನಾಹುತಕ್ಕೆ ಒಳಗಾದವರಿಗೆ ಒದಗಿಸಲಾದ ಪರಿಹಾರ (ರೂ.ಗಳಲ್ಲಿ) |
|---|---|---|---|---|---|---|---|
| ೧ | ೧೯೯೦–೯೧ | ೨೭೫ | ೮೫ | ೦೭ | ೨,೨೨,೩೭೧ | ೧೧೯ | ೮೩,೦೪೮ |
| ೨ | ೧೯೯೧–೯೨ | ೫೭೬ | ೮೧೬ | ೪೬ | ೫,೩೬,೩೦೦ | ೧೬೩ | ೫,೮೯,೯೭೭ |
| ೩ | ೧೯೯೨–೯೩ | ೨೬೪ | ೧೪೦ | ೦೧ | ೧,೯೦,೧೩೪ | ೨೦೬ | ೧,೯೨,೬೩೭ |
| ೪ | ೧೯೯೩–೯೪ | ೫೪೫ | ೨೨೭ | ೨೨ | ೫,೩೭,೫೩೩ | ೨೧೨ | ೧,೬೯,೫೩೫ |
| ೫ | ೧೯೯೪–೯೫ | ೫೬೪ | ೧,೧೮೪ | ೨೬ | ೫,೫೦,೫೯೩ | ೨೨೮ | ೧,೩೮,೬೮೦ |
| ೬ | ೧೯೯೫–೯೬ | ೫೫೮ | ೩೫೪ | ೧೫ | ೫,೭೧,೯೩೪ | ೧೭೪ | ೧,೮೩,೬೦೮ |
| ೭ | ೧೯೯೬–೯೭ | ೧,೬೧೪ | ೮೨ | ೧೫ | ೧೧,೮೧,೧೫೬ | ೧೯೬ | ೩,೦೩,೪೦೦ |
| ೮ | ೧೯೯೭–೯೮ | ೬೪೦ | ೪೦ | ೯ | ೪,೮೧,೯೮೪ | ೧೭೧ | ೨,೩೭,೯೪೦ |
| ೯ | ೧೯೯೮–೯೯ | ೧,೮೮೪ | ೩೭೩ | ೨೯ | ೨೪,೨೨,೫೫೩ | ೧೭೯ | ೧,೮೭,೦೮೫ |
| ೧೦ | ೨೦೦೦–೦೧ | ೨,೩೧೪ | ೬೦೮ | – | ೨೭,೫೩,೬೧೦ | ೨೯೯ | ೩,೮೩,೧೦೦ |
| ೧೧ | ೨೦೦೧–೦೨ | ೧,೦೨೪ | ೧೯೨ | ೦೧ | ೬,೯೦,೩೧೦ | ೨೭೨ | ೪,೭೭,೫೨೮ |

## ಅಭಿವೃದ್ಧಿ ಸಾಧ್ಯತೆಗಳು

ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.೨.೫೯ರಷ್ಟನ್ನು ಹೊಂದಿರುವ ಜಿಲ್ಲೆಯ ಜನಸಂಖ್ಯೆ ೨೦೦೧ರ ಜನಗಣತಿಯಂತೆ (ತಾತ್ಕಾಲಿಕ) ೧೭.೨೧ ಲಕ್ಷವಿದ್ದು, ರಾಜ್ಯದ ಜನಸಂಖ್ಯೆಯಲ್ಲಿ ಶೇ.೩.೩೪ರಷ್ಟಿದ್ದಿತು. ೧೯೯೧ರ ಜನಗಣತಿಯಂತೆ ಜಿಲ್ಲೆಯ ಜನತೆ ತಮ್ಮ ಜೀವನೋಪಾಯಕ್ಕಾಗಿ ವ್ಯವಸಾಯವನ್ನೇ ಅವಲಂಬಿಸಿದ್ದು, ವೃತ್ತಿ ಸ್ವರೂಪದಂತೆ ಜಿಲ್ಲೆಯಲ್ಲಿ ಇದ್ದ ವಸ್ತುಸ್ಥಿತಿ ಈ ಮುಂದಿನಂತಿತ್ತು. ೬,೩೫,೫೯೩ (ಶೇ.೩೮.೬೫) ಮುಖ್ಯ ಕೆಲಸಗಾರರು, ೯,೧೨,೬೧೧ (ಶೇ.೫೫.೫೦) ಕೆಲಸಗಾರರಲ್ಲದವರು, ೯೬,೧೭೦ (ಶೇ.೫.೮೫) ಸೀಮಾಂತ ಕೆಲಸಗಾರರಿದ್ದರು. ಮುಖ್ಯ ಕೆಲಸಗಾರರ ಪೈಕಿ ೩,೩೮,೨೬೧ (ಶೇ.೫೩.೨೨) ವ್ಯವಸಾಯಗಾರರಾಗಿಯೂ, ೧,೫೮,೬೫೬ (ಶೇ.೨೪.೯೬) ವ್ಯವಸಾಯ ಕಾರ್ಮಿಕರಾಗಿಯೂ, ೧೬,೮೪೧ (ಶೇ.೨.೬೫) ಜಾನುವಾರು, ಅರಣ್ಯ, ಮೀನುಗಾರಿಕೆ, ಬೇಟೆ, ಹಣ್ಣಿನ ತೋಟ ಹಾಗೂ ಸಂಬಂಧಿತ ಚಟುವಟಿಕೆಗಳಲ್ಲಿಯೂ, ೩೪೩೬ (ಶೇ.೦.೫೪) ಗಣಿಗಾರಿಕೆಯಲ್ಲಿಯೂ, ೨೮,೫೦೮

(ಶೇ.೪.೪೮) ಕೈಗಾರಿಕೆಗಳಲ್ಲೂ, ೧೦,೦೭೧ (ಶೇ.೧.೫೮) ಜನರು ನಿರ್ಮಾಣ ಚಟುವಟಿಕೆಗಳಲ್ಲಿಯೂ, ೩೩,೩೮೯ (ಶೇ.೫.೨೫) ವ್ಯಾಪಾರ-ವಾಣಿಜ್ಯದಲ್ಲಿಯೂ, ೭೫೨೩ (ಶೇ.೧.೧೮) ಸಾರಿಗೆ, ಸಂಗ್ರಹಣೆ ಹಾಗೂ ಸಂಪರ್ಕ ಕ್ಷೇತ್ರಗಳಲ್ಲಿಯೂ ಹಾಗೂ ೩೮,೯೦೮ (ಶೇ.೬.೧೨) ಇತರೆ ಸೇವೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದ್ದರು. ಶೇ.೩೮.೭ ರಷ್ಟು ಮಂದಿ ಮುಖ್ಯ ಕೆಲಸಗಾರರು, ಶೇ.೫೨.೩ ಮಂದಿ ಕೆಲಸಗಾರರಲ್ಲದವರು ಹಾಗೂ ಶೇ.೯.೦ ಮಂದಿ ಸೀಮಾಂತ (ಮಾರ್ಜಿನಲ್) ಕೆಲಸಗಾರರಿದ್ದಾರೆಂದು ತಿಳಿದು ಬಂದಿದೆ.

ಮೇಲಿನ ಅಂಕಿಅಂಶಗಳನ್ನು ಗಮನಿಸಿದಾಗ, ಜಿಲ್ಲೆಯ ಒಟ್ಟು ಜನಸಂಖ್ಯೆಯ ಮುಕ್ಕಾಲು ಭಾಗ ವ್ಯವಸಾಯ ಮತ್ತು ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿರುವುದು ಸ್ಪಷ್ಟವಾಗಿದೆ. ಅಲ್ಲದೆ ತುಂಡು ಭೂಹಿಡುವಳಿಯಿಂದಾಗಿ ವ್ಯವಸಾಯ ಲಾಭದಾಯಕ ಉದ್ಯೋಗವಾಗಿಲ್ಲ. ಹೀಗಾಗಿ ಅಗತ್ಯವಾಗಿ ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದರೆ, ಕಡಿಮೆ ಬಂಡವಾಳ ಹೂಡಿಕೆ, ಹೆಚ್ಚು ಉದ್ಯೋಗ ಸೃಷ್ಟಿ, ಕಡಿಮೆ ಪ್ರಮಾಣದ ಶಕ್ತಿ ಸಂಪನ್ಮೂಲಗಳು ಮತ್ತು ಆಯಾತ,ಕಡಿಮೆ ಪ್ರಮಾಣದ ಮೂಲ ಸೌಕರ್ಯಗಳು ದೊರಕಿದರೂ ನಗರ ಪ್ರದೇಶದ ಕೈಗಾರಿಕೆಗಳಿಗಿಂತ ಹೆಚ್ಚಾಗಿ ಗ್ರಾಮೀಣ ಕೈಗಾರಿಕೆಗಳ ಬೆಳವಣಿಗೆ ಹೊಂದಬಹುದಾಗಿದೆ. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ೨೦೦೧ ರ ಜೂನ್ ಅಂತ್ಯಕ್ಕೆ ೬೫,೧೪೬ ನಿರುದ್ಯೋಗಿಗಳಿದ್ದು, ಇವರಲ್ಲಿ ೪೯,೯೧೭ ಮಂದಿ ಪುರುಷರು ಹಾಗೂ ೧೫,೨೨೯ ಮಂದಿ ಮಹಿಳೆಯರೂ ಸೇರಿದ್ದರು.

ಜಿಲ್ಲೆಯಲ್ಲಿ ಭತ್ತ, ರಾಗಿ, ಕಬ್ಬು, ರೇಷ್ಮೆ, ಬಾಳೆ, ತೆಂಗು ಹಾಗೂ ಮಾವು ಮುಂತಾದ ಪ್ರಮುಖ ವಾಣಿಜ್ಯ-ಆಹಾರದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇಲ್ಲಿ ವ್ಯವಸಾಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಫುಲ ಅವಕಾಶವಿದೆ. ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ.೫ ರಷ್ಟು ಮಾತ್ರ ಅರಣ್ಯವಿದ್ದು (೦.೨೪ ಲಕ್ಷ ಹೆ.ಗಳಲ್ಲಿ), ಕೇವಲ ಉರುವಲು ಕಟ್ಟಿಗೆಗಳನ್ನು ಮಾತ್ರ ಬೆಳೆಯಲಾಗುತ್ತಿದ್ದು, ನೆರೆಹೊರೆಯ ಜಿಲ್ಲೆಗಳಿಗೆ ಪೂರೈಸುತ್ತಿದೆ. ೧೯೯೭ರ ಜಾನುವಾರು ಗಣತಿಯಂತೆ ಜಿಲ್ಲೆಯಲ್ಲಿ ೧೨.೨೯ ಲಕ್ಷ ಜಾನುವಾರುಗಳಿದ್ದು, ಚರ್ಮೋದ್ಯಮದ ಸ್ಥಾಪನೆಗೆ ಅವಕಾಶವಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರವು ನೀಡಿದ ಮಾಹಿತಿಯಂತೆ ೨೦೦೧ರ ಮಾರ್ಚಿ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು ಹತ್ತು ಬೃಹತ್ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳಿದ್ದು, ಇವುಗಳಲ್ಲಿ ರೂ.೨೪,೭೭೫ ಲಕ್ಷ ಬಂಡವಾಳ ತೊಡಗಿಸಿ, ೪,೦೦೮ ಜನರಿಗೆ ಉದ್ಯೋಗ ಒದಗಿಸಲಾಗಿದೆ. ೬,೩೦೮ ಸಣ್ಣ ಪ್ರಮಾಣದ ಕೈಗಾರಿಕೆಗಳಿದ್ದು, ರೂ.೯,೭೩೭ ಲಕ್ಷ ಬಂಡವಾಳ ಹೂಡಿ ೩೦,೧೬೨ ಜನರಿಗೆ ಉದ್ಯೋಗ ಒದಗಿಸಲಾಗಿದೆ. ಈ ಅಂಶಗಳಿಂದ ಜಿಲ್ಲೆಯಲ್ಲಿ ಕಡಿಮೆ ಪ್ರಮಾಣದಲ್ಲಿ ಕೈಗಾರಿಕಾ ಉದ್ಯೋಗಿಗಳಿರುವುದು ಸ್ಪಷ್ಟವಾಗಿದೆ.

ಜಿಲ್ಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆಗೆ ವಿಫುಲ ಅವಕಾಶಗಳಿದ್ದು, ಅವುಗಳನ್ನು ಬೇಡಿಕೆ ಆಧಾರಿತ (೩೨ ಕೈಗಾರಿಕೆಗಳು), ಸಂಪನ್ಮೂಲ ಆಧಾರಿತ (೨೧ ಕೈಗಾರಿಕೆಗಳು) ಹಾಗೂ ಕೌಶಲ್ಯ ಆಧಾರಿತ (೧೩ ಕೈಗಾರಿಕೆಗಳೂ) ಎಂದು ಗುರುತಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವು ಹೀಗಿವೆ ;

೧. **ವ್ಯವಸಾಯಾಧಾರಿತ ಕೈಗಾರಿಕೆಗಳು :** ಅವಲಕ್ಕಿ, ಹಿಟ್ಟು ಬೀಸುವ ಗಿರಣಿ, ಬೇಕರಿ, ಎಣ್ಣೆ ಗಿರಣಿ, ಹಣ್ಣಿನ ರಸ, ನಾರು ಉತ್ಪಾನೆ, ರೇಷ್ಮೆ ನೂಲು ಸುತ್ತುವುದು, ಊಟದ ಎಲೆ ಹಚ್ಚುವುದು, ಬಿದಿರಿನ ಕೆಲಸ ಮುಂತಾದವು

೨. **ಅರಣ್ಯಾಧಾರಿತ ಕೈಗಾರಿಕೆಗಳು :** ಎತ್ತಿನ ಗಾಡಿ, ಪ್ಯಾಕಿಂಗ್ ಪೆಟ್ಟಿಗೆ, ಕೇನ್ ಫರ್ನಿಚರ್, ಫ್ಲಷ್ ಬೋರ್ಡ್, ಮುಂತಾದವು

೩. **ರಬ್ಬರ್ ಹಾಗೂ ಪ್ಲಾಸ್ಟಿಕ್ ಸಂಬಂಧಿಸಿದ ಕೈಗಾರಿಕೆಗಳು :** ಪಾದರಕ್ಷೆಗಳು, ಪಾಲಿಥಿನ್ ಚೀಲಗಳು, ಪಿ.ವಿ.ಸಿ. ಪೈಪುಗಳು, ಮುಂತಾದವು, ಟೈರ್ಸ್ ರೀ ಟ್ರೇಡಿಂಗ್, ಇಂಜಕ್ಷನ್ ಮತ್ತು ಬ್ಲೋ ಮೌಲ್ಡಿಂಗ್

**೪. ರಾಸಾಯನಿಕ ಮತ್ತು ಸಂಬಂದಿಸಿದ ಕೈಗಾರಿಕೆಗಳು :** ಅಗರಬತ್ತಿ, ಎಣ್ಣೆ, ಎಲೆಕ್ಟ್ರೋ ಪ್ಲೇಟಿಂಗ್, ಆರೋಮೆಟಿಕ್ ಕೆಮಿಕಲ್ಸ್, ಪೈಂಟ್ಸ್, ಪೇಪರ್ ಬ್ಯಾಗ್, ರಟ್ಟಿನ ಡಬ್ಬಗಳು

**೫. ಸಿದ್ದ ಉಡುಪುಗಳ ಕೈಗಾರಿಕೆಗಳಿಗೆ** ಇಲ್ಲಿ ವಿಫುಲ ಅವಕಾಶವಿದೆ.

**೬. ಇಂಜಿನಿಯರಿಂಗ್ ಕೈಗಾರಿಕೆಗಳು :** ಪ್ಲಾಸ್ಟಿಕ್ ಉತ್ಪನ್ನಗಳು, ಕೃಷಿ ಉಪಕರಣಗಳು, ಐರನ್ ಫ್ಯಾಬ್ರಿಕೇಷನ್, ಕಬ್ಬಿಣದ ಪೀಠೋಪಕರಣಗಳು, ಮುಂತಾದವು.

**೭. ಎಲೆಕ್ಟ್ರಾನಿಕ್ಸ್ ಕೈಗಾರಿಕೆ :** ಪೋರ್ಟೆಬಲ್ ಜನರೇಟರ್ ಸೆಟ್, ಎಲೆಕ್ಟ್ರಿಕಲ್ ಸಲಕರಣೆಗಳು, ಮುಂತಾದವು

**೮. ಸೇವಾ ಕ್ಷೇತ್ರದ ಉದ್ದಿಮೆ :** ಡಾಬಾ, ಟ್ರಾಕ್ಟರ್ ರಿಪೇರಿ, ಪವರ್ ಟಿಲ್ಲರ್ಸ್, ವಿದ್ಯುತ್ ಉಪಕರಣಗಳು, ಮೋಟಾರು ವಾಹನಗಳ ಸರ್ವಿಸಿಂಗ್, ದೂರದರ್ಶನ, ರೇಡಿಯೋ ರಿಪೇರಿ, ಹಾಗೂ ಟೆಕ್ಸ್‌ಟೈಲ್ಸ್ ಪ್ರಿಂಟಿಂಗ್, ಮುಂತಾದವು

**೯. ಪ್ರವಾಸೋದ್ಯಮ :** ಮಂಡ್ಯ ಜಿಲ್ಲೆಯು ಬೆಂಗಳೂರು–ಮೈಸೂರು ಮಾರ್ಗದಲ್ಲಿದ್ದು, ಹಲವಾರು ಪ್ರವಾಸಿ ಕೇಂದ್ರಗಳನ್ನು ಹೊಂದಿದೆ.

**೧೦. ಮಾಹಿತಿ ತಂತ್ರಜ್ಞಾನ :** ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು, ಆಹಾರ ಸಂಸ್ಕರಣಾ ಘಟಕಗಳು, ಸರ್ಕಾರಿ ಕಚೇರಿ ಹಾಗೂ ಬ್ಯಾಂಕುಗಳಲ್ಲಿ ಮಾಹಿತಿ ತಂತ್ರಜ್ಞಾನದ ಅರಿವು ಹಾಗೂ ಉಪಯೋಗಗಳ ಬಗ್ಗೆ ಮನದಟ್ಟಾಗಿದೆ. ಅಲ್ಲದೆ ೫೦ಕ್ಕೂ ಹೆಚ್ಚು ತರಬೇತಿ ಶಾಲೆಗಳು, ೭೫ ಪದವಿಪೂರ್ವ ಕಾಲೇಜುಗಳು, ೩ ಪಾಲಿಟೆಕ್ನಿಕ್ ಗಳು ಹಾಗೂ ಒಂದೊಂದು ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಿರುವುದರಿಂದ ಮಾಹಿತಿ ತಂತ್ರಜ್ಞಾನ ಅಳವಡಿಕೆಗೆ ವಿಫುಲ ಅವಕಾಶಗಳಿವೆ. ಅಲ್ಲದೇ ಜಿಲ್ಲಾ ಕೈಗಾರಿಕಾ ಕೇಂದ್ರ, ಟೆಕ್ಸಾಕ್, ಎಸ್.ಐ.ಎಸ್.ಐ. ಹಾಗೂ ಸಂಘಟಿತ ಸಂಸ್ಥೆಗಳು ಲಾಭದಾಯಕ ಉದ್ದಿಮೆಗಳ ಸ್ಥಾಪನೆಗಾಗಿ ಸ್ಥಳಗಳನ್ನು ಗುರುತಿಸಿದೆ. ಅವುಗಳ ವಿವರಗಳನ್ನು ಈ ಮುಂದೆ ನೀಡಿದೆ.

**ಕೋಷ್ಟಕ ೮.೩೫ ಜಿಲ್ಲಾ ಕೈಗಾರಿಕಾ ಕೇಂದ್ರ, ಟೆಕ್ಸಾಕ್, ಎಸ್.ಐ.ಎಸ್.ಐ. ಹಾಗೂ ಸಂಘಟಿತ ಸಂಸ್ಥೆಗಳು ಲಾಭದಾಯಕ ಉದ್ದಿಮೆಗಳ ಅಭಿವೃದ್ಧಿಗಾಗಿ ಗುರುತಿಸಿರುವ ಸ್ಥಳಗಳು**

| ಕ್ರ. ಸಂ | ತಾಲೂಕುಗಳು | ಸ್ಥಳಗಳು | ಚಟುವಟಿಕೆಗಳು |
|---|---|---|---|
| ೧ | ೨ | ೩ | ೪ |
| ೧ | ಕೃಷ್ಣರಾಜಪೇಟೆ | ಕೃಷ್ಣರಾಜಪೇಟೆ, ಅಕ್ಕಿಹೆಬ್ಬಾಳ್, ಸಂತೇಬಾಚಹಳ್ಳಿ, ಕಿಕ್ಕೇರಿ, ಮಂದಗೆರೆ, | ಆಹಾರ ಸಂಸ್ಕರಣೆ, ಹ್ಯಾಂಡ್ ಲೂಮ್, ಪವರ್‌ಲೂಮ್, ಪ್ಲಾಸ್ಟಿಕ್ ಉಪಕರಣಗಳು |
| ೨ | ಮದ್ದೂರು | ಮದ್ದೂರು, ಕೆ.ಎಂ.ದೊಡ್ಡಿ, ಬೆಸಗರಹಳ್ಳಿ, ಕೆಸ್ತೂರು, ಕೊಪ್ಪ, ಶಿವಪುರ, ಸೋಮನಹಳ್ಳಿ | ಆಹಾರ ಸಂಸ್ಕರಣೆ, ಮೊಸಾಯಿಕ್ ಟೈಲ್ಸ್, ಕಲ್ಲುಪುಡಿ ಮಾಡುವುದು, ರೇಷ್ಮೆ ನೂಲು ಸುತ್ತುವಿಕೆ, ಜಮಖಾನೆ ನೇಯುವುದು, ಚಾಪೆ ನೇಯುವುದು, ಆಟೋ ರಿಪೇರಿ, ಅಗರಬತ್ತಿ, ಕಬ್ಬು ಅರೆಯುವಿಕೆ, ಇಟ್ಟಿಗೆ ತಯಾರು ಮಾಡುವುದು, ಮುಂತಾದವು. |
| ೩ | ಮಳವಳ್ಳಿ | ಮಳವಳ್ಳಿ, ಬೆಳಕವಾಡಿ, ಹಲಗೂರು, ತಳಗವಾಡಿ | ಚರ್ಮೋದ್ಯಮ, ಬಿದಿರಿನ ಉತ್ಪನ್ನಗಳು, ಎಣ್ಣೆ ತೆಗೆಯುವುದು, ಉಣ್ಣೆ ನೇಯುವುದು, ರೇಷ್ಮೆ ನೂಲು ಹುರಿ ಮಾಡುವುದು, ಮರದ ಕೆತ್ತನೆ ಕೆಲಸ, ಮುಂತಾದವು |

| ೧ | ೨ | ೩ | ೪ |
|---|---|---|---|
| ೪ | ಮಂಡ್ಯ | ಮಂಡ್ಯ, ಬಸರಾಳು, ಬೂತನಹೊಸೂರು, ಹೊಳಲು, ಎಲಿಯೂರು | ಆಹಾರ ಸಂಸ್ಕರಣೆ, ಕಲ್ಲುಪುಡಿ ಮಾಡುವುದು, ಆಟೋ ರಿಪೇರಿ, ಎಲೆಕ್ಟ್ರಾನಿಕ್ಸ್ ರಿಪೇರಿ, ಎಲೆಕ್ಟ್ರೋ ಪ್ಲೇಟಿಂಗ್, ಜಮಖಾನೆ ಹಾಗೂ ಚಾಪೆ ನೇಯುವಿಕೆ, ಮುಂತಾದವು |
| ೫ | ನಾಗಮಂಗಲ | ನಾಗಮಂಗಲ,ದೇವಲಾಪುರ, ಬೇಲೂರು, ಲಾಳನಕೆರೆ | ತೆಂಗಿನ ಉತ್ಪನ್ನಗಳು, ನಾರು ಉತ್ಪತ್ತಿ, ಆಹಾರ ಸಂಸ್ಕರಣೆ, ಮರಗೆಲಸ, ಕರಕುಶಸಲ ವಸ್ತುಗಳ ತಯಾರಿಕೆ |
| ೬ | ಪಾಂಡವಪುರ | ಪಾಂಡವಪುರ, ಪಾಂಡವಪುರ ರೈಲ್ವೆ ನಿಲ್ದಾಣ, ಜಕ್ಕನಹಳ್ಳಿ | ಸಿಹಿ ತಿಂಡಿ ತಯಾರಿಸುವಿಕೆ, ಆಹಾರ ಸಂಸ್ಕರಣೆ, ಮೊಸಾಯಿಕ್ ಟೈಲ್ಸ್, ರೇಷ್ಮೆ ನೂಲು ಹುರಿ ಮಾಡುವುದು, ಮುಂತಾದವು |
| ೭ | ಶ್ರೀರಂಗಪಟ್ಟಣ | ಶ್ರೀರಂಗಪಟ್ಟಣ, ಗಂಜಾಂ, ಅರಕೆರೆ, ಬೆಳಗೊಳ, ಕೊಡಿಯಾಲ, ಪಾಲಹಳ್ಳಿ | ಆಹಾರ ಸಂಸ್ಕರಣೆ ಪೇಪರ್ ಬೋರ್ಡ್ಸ್, ಫ್ಲಷ್ ಬೋರ್ಡ್ಸ್, ಮೇಣದ ತಯಾರಿಕೆ, ಮೆಟಲ್ ಪಾಲಿಶ್, ಬಣ್ಣವನ್ನು ತಯಾರಿಸುವುದರಲ್ಲಿ ಬಳಸುವ ಪದಾರ್ಥಗಳು, ಸೀಮೆಸುಣ್ಣ ತಯಾರಿಕೆ, ಮುಂತಾದವು. |

## ಕೋಷ್ಟಕ ೮.೩೬ ಜಿಲ್ಲೆಯ ಐದು ದಶಕಗಳ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ಪಟ್ಟಿ

| | ವಿಷಯ | ಘಟಕ | ೧೯೬೧ | ೧೯೭೧ | ೧೯೮೧ | ೧೯೯೧ | ೨೦೦೧ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧ | ಒಟ್ಟು ದಶಕದ ಜನಸಂಖ್ಯೆಯ ಬೆಳವಣಿಗೆ | ಶೇಕಡ | – | +೨೮.೩೮ | +೨೨.೮೫ | +೧೫.೯೫ | +೭.೧೪ |
| ೨ | ಒಟ್ಟು ದಶಕದ ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆಯ ಬೆಳವಣಿಗೆ | ಶೇಕಡ | – | ೨೪.೫೮ | ೨೦.೩೪ | ೧೪.೯೮ | – |
| ೩ | ಒಟ್ಟು ದಶಕದ ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆಯ ಬೆಳವಣಿಗೆ | ಶೇಕಡ | | ೫೮.೬೭ | ೩೮.೫೭ | ೨೧.೨೬ | – |
| ೪ | ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆ | ಶೇಕಡ | ೮೮.೯ | ೮೬.೨ | ೮೪.೫ | ೮೩.೮ | ೮೩.೯೮ |
| ೫ | ಒಟ್ಟು ಜನಸಂಖ್ಯೆಯಲ್ಲಿ ನಗರ ಜನಸಂಖ್ಯೆ | ಶೇಕಡ | ೧೧.೧ | ೧೩.೮ | ೧೫.೫ | ೧೬.೨ | ೧೬.೦೨ |
| ೬ | ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ | ಶೇಕಡ | ೧೨.೯೨ | ೧೨.೨೫ | ೧೨.೮೯ | ೧೩.೭೮ | – |
| ೭ | ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ | ಶೇಕಡ | ೦.೦೬ | ೦.೨೪ | ೦.೮೨ | ೦.೭೩ | – |
| ೮ | ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ಕೆಲಸಗಾರರು | ಶೇಕಡ | ೪೭.೪೫ | ೩೨.೫೬ | ೩೪.೦೧ | ೩೮.೬೫ | – |

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ೯ | ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಕೆಲಸಗಾರರು | ಶೇಕಡ | ೪೯.೧೫ | ೩೩.೧೨ | ೩೮.೧೯ | ೩೯.೯೦ | – |
| ೧೦ | ಒಟ್ಟು ಜನಸಂಖ್ಯೆಯಲ್ಲಿ ನಗರ ಕೆಲಸಗಾರರು | ಶೇಕಡ | ೩೩.೯೨ | ೨೯.೦೧ | ೨೯.೩೨ | ೩೨.೨೩ | – |
| ೧೧ | ಒಟ್ಟು ಕೆಲಸಗಾರರಲ್ಲಿ ವ್ಯವಸಾಯದಲ್ಲಿ ತೊಡಗಿರುವವರು | ಶೇಕಡ | ೮೩.೮೭ | ೮೧.೧೧ | ೮೦.೬೦ | ೭೮.೧೮ | – |
| ೧೨ | ಜನಸಾಂದ್ರತೆ ಚ.ಕಿ.ಮೀ.ಗೆ | | | | | | |
| ಅ | ಗ್ರಾಮೀಣ | ಶೇಕಡ | ೧೬೭ | ೨೦೪ | ೨೪೫ | ೩೩೧ | ೩೩೫ |
| ಆ | ನಗರ | ಶೇಕಡ | ೧೫೯೧ | ೨೩೩೧ | ೩೬೧೦ | ೪೫೦೭ | – |
| ೧೩ | ಲೈಂಗಿಕ ಪ್ರಮಾಣ (೧೦೦೦ ಗಂಡಸರಿಗೆ) | | ೯೬೭ | ೯೬೦ | ೯೬೦ | ೯೬೩ | ೯೮೫ |
| ೧೪ | ಸಾಕ್ಷರತೆ ಪ್ರಮಾಣ | | | | | | |
| ಅ | ಪುರುಷರು | ಶೇಕಡ | ೨೬.೪೫ | ೩೧.೫೯ | ೪೦.೪೮ | ೫೯.೧೮ | ೭೦.೭೧ |
| ಆ | ಸ್ತ್ರೀಯರು | ಶೇಕಡ | ೭.೮೬ | ೧೩.೦೬ | ೧೯.೯೧ | ೩೬.೭೦ | ೫೧.೬೨ |
| | ಒಟ್ಟು | ಶೇಕಡ | ೧೭.೩೧ | ೨೨.೫೧ | ೩೦.೪೦ | ೪೮.೧೫ | ೬೧.೨೧ |
| ೧೫ | ಸಾಕ್ಷರತೆ (ಗ್ರಾಮೀಣ) | | | | | | |
| ಅ | ಪುರುಷರು | ಶೇಕಡ | ೨೩.೩೧ | ೨೮.೪೭ | ೩೭.೪೦ | – | ೫೫.೮೯ |
| ಆ | ಸ್ತ್ರೀಯರು | ಶೇಕಡ | ೫.೨೫ | ೯.೯೯ | ೧೬.೧೪ | – | ೩೨.೧೨ |
| | ಒಟ್ಟು | ಶೇಕಡ | ೧೪.೩೯ | ೧೯.೩೯ | ೨೬.೯೫ | – | ೪೪.೧೯ |
| ೧೬ | ಸಾಕ್ಷರತೆ (ನಗರ) | | | | | | |
| ಅ | ಪುರುಷರು | ಶೇಕಡ | ೫೦.೬೫ | ೫೦.೫೯ | ೫೬.೮೫ | – | ೭೫.೭೫ |
| ಆ | ಸ್ತ್ರೀಯರು | ಶೇಕಡ | ೨೯.೧೦ | ೩೨.೮೩ | ೪೦.೪೦ | – | ೬೦.೬೬ |
| | ಒಟ್ಟು | ಶೇಕಡ | ೪೦.೬೦ | ೪೨.೧೧ | ೪೯.೧೯ | – | ೬೮.೪೬ |

| | ವ್ಯವಸಾಯ | ಘಟಕ | ೧೯೭೦–೭೧ | ೧೯೮೦–೮೧ | ೧೯೯೦–೯೧ | ೧೯೯೫–೯೬ | ೧೯೯೯–೦೦ |
|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ |
| ೧. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಟ್ಟು ಅರಣ್ಯ ಪ್ರದೇಶ | ಶೇಕಡ | ೪.೮೬ | ೪.೭೬ | ೪.೭೭ | ೪.೭೭ | ೪.೯೭ |
| ೨. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ವ್ಯವಸಾಯೇತರ ಉದ್ದೇಶಕ್ಕೆ ಬಳಸಲಾದ ಪ್ರದೇಶ | ಶೇಕಡ | ೧೦.೭೪ | ೧೨.೦೨ | ೧೨.೧೬ | ೧೨.೧೮ | ೧೨.೨೦ |

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ೩. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾಗುವಳಿಗೆ ಲಭ್ಯವಿಲ್ಲದ ಬಂಜರು ಭೂಮಿ | ಶೇಕಡ | ೨.೯೯ | ೪.೩೫ | ೪.೩೫ | ೪.೩೪ | ೪.೩೩ |
| ೪. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಖಾಯಂ ಗೋಮಾಳ | ಶೇಕಡ | ೧೧.೧೯ | ೯.೧೪ | ೮.೨೯ | ೭.೬೩ | ೭.೬೭ |
| ೫. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ವೃಕ್ಷ ಮತ್ತು ತೋಪುಗಳು ಮುಂತಾದವು | ಶೇಕಡ | ೦.೩೪ | ೦.೩೯ | ೦.೬೫ | ೦.೬೩ | ೦.೬೪ |
| ೬. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ | ಶೇಕಡ | ೧೦.೩೭ | ೮.೬೩ | ೭.೯೭ | ೭.೮೪ | ೮.೪೨ |
| ೭. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಇತರೆ ಬೀಳು ಭೂಮಿ | ಶೇಕಡ | ೧.೪೦ | ೧.೬೫ | ೪.೮೧ | ೩.೯೬ | ೪.೨೪ |
| ೮. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಚಾಲ್ತಿ ಬೀಳು ಭೂಮಿ | ಶೇಕಡ | ೩.೮೪ | ೧೦.೪೪ | ೮.೬೮ | ೭.೮೯ | ೮.೦೨ |
| ೯. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ನಿವ್ವಳ ಬಿತ್ತನೆಯಾದ ಪ್ರದೇಶ | ಶೇಕಡ | ೫೪.೨೮ | ೪೮.೬೨ | ೪೮.೩೩ | ೫೦.೭೬ | ೪೯.೫೧ |
| ೧೦. | ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಬಿತ್ತನೆಯಾದ ಪ್ರದೇಶ | ಶೇಕಡ | ೧೧೦.೮೪ | ೧೨೪.೬೭ | ೧೧೪.೯೫ | ೧೨೩.೦೬ | ೧೧೫.೭೦ |
| ೧೧. | ನಿವ್ವಳ ಬಿತ್ತನೆ ಪ್ರದೇಶದಲ್ಲಿ ನಿವ್ವಳ ನೀರಾವರಿಯಾದ ಪ್ರದೇಶ | ಶೇಕಡ | ೩೧.೬ | ೪೦.೨ | ೪೧.೪ | ೪೪.೪೩ | ೪೩.೭೯ |
| ೧೨. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಒಟ್ಟು ನೀರಾವರಿ ಯಾದ ಪ್ರದೇಶ | ಶೇಕಡ | ೩೪.೨೦ | ೪೩.೦೫ | ೪೬.೪೦ | ೪೪.೨೧ | ೪೯.೪೨ |
| ೧೩. | ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಕಾಲುವೆಗಳಿಂದ ನೀರಾವರಿಯಾದ ಪ್ರದೇಶ | ಶೇಕಡ | ೭೩.೦೭ | ೮೩.೪೦ | ೮೩.೧೬ | ೮೨.೭೩ | ೭೯.೯೪ |
| ೧೪. | ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಕೆರೆಗಳಿಂದ ನೀರಾವರಿಯಾದ ಪ್ರದೇಶ | ಶೇಕಡ | ೧೭.೦೦ | ೬.೩೪ | ೭.೪೮ | ೭.೩೯ | ೭.೫೫ |
| ೧೫. | ನೀರಾವರಿ ಯಾದ ನಿವ್ವಳ ಪ್ರದೇಶದಲ್ಲಿ ಬಾವಿಗಳಿಂದ ನೀರಾವರಿಯಾದ ಪ್ರದೇಶ | ಶೇಕಡ | ೭.೦೦ | ೯.೦೦ | ೪.೦೦ | ೮.೭೭ | ೧೧.೬೩ |

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ೧೬. | ನೀರಾವರಿಯಾದ ನಿವ್ವಳ ಪ್ರದೇಶದಲ್ಲಿ ಇತರೆ ಮೂಲಗಳಿಂದ ನೀರಾವರಿ ಪ್ರದೇಶ | ಶೇಕಡ | ೨.೦೦ | ೩.೦೦ | ೧.೦೦ | ೧.೧೧ | ೦.೮೮ |
| ೧೭. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಭತ್ತದ ಪ್ರದೇಶ | ಶೇಕಡ | ೨೧.೨೨ | ೨೧.೬೪ | ೨೪.೫೨ | ೨೩.೧೪ | ೨೭.೬೫ |
| ೧೮. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ರಾಗಿ ಪ್ರದೇಶ | ಶೇಕಡ | ೨೯.೦೯ | ೨೨.೬೭ | ೨೭.೫೩ | ೩೧.೬೬ | ೨೩.೭೪ |
| ೧೯. | ಒಟ್ಟು ಬಿತ್ತನೆಯಾದ ಪ್ರದೇಶದಲ್ಲಿ ಜೋಳದ ಪ್ರದೇಶ | ಶೇಕಡ | ೫.೯೭ | ೧.೨೪ | ೧.೭೧ | ೧.೯೧ | ೧.೦೨ |
| ೨೦. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಗೋಧಿ ಪ್ರದೇಶ | ಶೇಕಡ | – | ೦.೦೧ | – | – | – |
| ೨೧. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಸಜ್ಜೆ ಪ್ರದೇಶ | ಶೇಕಡ | ೦.೦೨ | – | – | – | – |
| ೨೨. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಇತರ ಏಕದಳ ಧಾನ್ಯಗಳು | ಶೇಕಡ | ೩.೩೭ | ೧.೫೮ | ೦.೦೬ | ೦.೦೮ | ೦.೦೨ |
| ೨೩. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಒಟ್ಟು ಏಕದಳ ಮತ್ತು ತೃಣ ಧಾನ್ಯಗಳು | ಶೇಕಡ | ೫೭.೯೬ | ೪೭.೧೪ | ೫೩.೮೨ | ೫೬.೭೯ | ೫೨.೨೫ |
| ೨೪. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಒಟ್ಟು ದ್ವಿದಳ ಧಾನ್ಯಗಳ ಪ್ರದೇಶ | ಶೇಕಡ | ೨೧.೧೮ | ೨೯.೫೭ | ೧೭.೩೫ | ೧೩.೮೭ | ೧೭.೪೮ |
| ೨೫. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಹತ್ತಿಯ ಪ್ರದೇಶ | ಶೇಕಡ | – | – | ೦.೦೧ | – | ೦.೦೪ |
| ೨೬. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಕಬ್ಬು ಪ್ರದೇಶ | ಶೇಕಡ | ೫.೮೪ | ೮.೩೫ | ೧೦.೮೩ | ೧೦.೮೫ | ೧೦.೯೯ |
| ೨೭. | ಒಟ್ಟು ಬಿತ್ತನೆ ಯಾದ ಪ್ರದೇಶದಲ್ಲಿ ಎಣ್ಣೆಕಾಳುಗಳ ಪ್ರದೇಶ | ಶೇಕಡ | ೩.೯೩ | ೩.೬೩ | ೭.೨೦ | ೭.೫೫ | ೪.೮೮ |
| ೨೮. | ಸರಾಸರಿ ಅಕ್ಕಿಯ ಉತ್ಪಾದನೆ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೨೩೫೪ | ೨೯೬೩ | ೨೯೫೩ | ೩೩೬೦ | ೩೨೮೬ |
| ೨೯. | ಸರಾಸರಿ ಜೋಳದ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೯೭೫ | ೧೨೫೬ | ೫೫೯ | ೬೭೫ | ೧೦೩೯ |
| ೩೦. | ಸರಾಸರಿ ರಾಗಿಯ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೯೦೭ | ೧೪೮೦ | ೭೪೦ | ೧೯೧೬ | ೧೭೩೨ |
| ೩೧. | ಸರಾಸರಿ ಸಜ್ಜೆಯ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೪೨೮ | – | ೧೦೫೩ | – | – |

| ೧ | ೨ | ೩ | ೪ | ೫ | ೬ | ೭ | ೮ |
|---|---|---|---|---|---|---|---|
| ೩೨. | ಸರಾಸರಿ ಗೋಧಿಯ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೧೪೧೬ | ೧೫೭೧ | – | – | – |
| ೩೩. | ಸರಾಸರಿ ಕಡಲೆ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೪೯೧ | ೪೭೨ | ೩೧೯ | ೫೦೬ | ೫೭೮ |
| ೩೪. | ಸರಾಸರಿ ತೊಗರಿ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೫೨೮ | ೩೩೩ | ೪೧೬ | ೨೮೩ | ೬೦೦ |
| ೩೫. | ಸರಾಸರಿ ಸೂರ್ಯಕಾಂತಿ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | – | ೧೭೯೧ | ೩೮೫ | ೪೪೪ | ೬೨೩ |
| ೩೬. | ಸರಾಸರಿ ಹತ್ತಿಯ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | – | ೧೫೨ | ೨೧೩ | – | ೧೯೯ |
| ೩೭. | ಸರಾಸರಿ ಕಬ್ಬಿನ ಉತ್ಪತ್ತಿ | ಹೆಕ್ಟೇರಿಗೆ ಟನ್ನುಗಳಲ್ಲಿ | ೮೯ | ೧೦೬ | ೧೧೬ | ೧೧೯ | ೧೩೮ |
| ೩೮. | ಸರಾಸರಿ ಶೇಂಗಾ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೧೧೨೭ | ೧೦೫೯ | ೭೩೦ | ೯೮೭ | ೮೩೭ |
| ೩೯. | ವ್ಯವಸಾಯಕ್ಕೆ ಲಭ್ಯವಿರುವ ತಲಾವಾರು ಪ್ರದೇಶ | ಹೆಕ್ಟೇರುಗಳಲ್ಲಿ | ೦.೨೬ | ೦.೨೨ | ೦.೨೦ | – | ಲಭ್ಯವಿಲ್ಲ |
| ೪೦. | ತಲಾ ಆಹಾರಧಾನ್ಯಗಳ ಉತ್ಪತ್ತಿ | ಹೆಕ್ಟೇರಿಗೆ ಕೆ.ಜಿ.ಗಳಲ್ಲಿ | ೨೨೦.೫೪ | ೨೧೯.೮೦ | ೧೫೫.೫೨ | ೨೪೩.೧೯ | ೨೧೮.೨೪ |
| ೪೧. | ಸರಾಸರಿ ಭೂ ಹಿಡುವಳಿಗಳು | ಹೆಕ್ಟೇರುಗಳಲ್ಲಿ | ೧.೩೭ | ೧.೦೮ | ೦.೮೩ | – | – |
| ೪೨. | ಸರಾಸರಿ ಅತಿ ಸಣ್ಣ ಹಿಡುವಳಿಗಳು | ಹೆಕ್ಟೇರುಗಳಲ್ಲಿ | – | ೦.೪೦ | ೦.೩೭ | – | – |
| ೪೩. | ಸರಾಸರಿ ಸಣ್ಣ ಹಿಡುವಳಿಗಳು | ಹೆಕ್ಟೇರುಗಳಲ್ಲಿ | – | ೧.೪೦ | ೧.೩೯ | – | – |
| ೪೪. | ಸರಾಸರಿ ಅರೆ ಮದ್ಯಮ ಭೂಹಿಡುವಳಿಗಳು | ಹೆಕ್ಟೇರುಗಳಲ್ಲಿ | – | ೨.೭೦ | ೨.೬೯ | – | – |
| ೪೫. | ಸರಾಸರಿ ಮದ್ಯಮ ಭೂ ಹಿಡುವಳಿಗಳು | ಹೆಕ್ಟೇರುಗಳಲ್ಲಿ | – | ೫.೪೭ | ೫.೪೩ | – | – |
| ೪೬. | ಸರಾಸರಿ ದೊಡ್ಡ ಭೂ ಹಿಡುವಳಿಗಳು | ಹೆಕ್ಟೇರುಗಳಲ್ಲಿ | – | ೧೬.೭೬ | ೧೪.೮೩ | – | – |

## ಹೈನುಗಾರಿಕೆ (ವಿವಿಧ ವರ್ಷಗಳಲ್ಲಿದ್ದಂತೆ)

| | | ೧೯೬೬ | ೧೯೭೨ | ೧೯೭೭ | ೧೯೮೩ | ೧೯೯೦ | ೧೯೯೭ |
|---|---|---|---|---|---|---|---|
| ೧. ಪ್ರತಿ ಚ.ಕಿ.ಮೀ.ಪ್ರದೇಶದಲ್ಲಿರುವ ದನಗಳು (ಎಮ್ಮೆಗಳು ಸೇರಿ) | ಸಂಖ್ಯೆಗಳಲ್ಲಿ | ೧೦೮ | ೧೦೩ | ೧೦೭ | ೧೨೩ | ೧೧೭ | ೧೮೦ |
| ೨. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ದನಗಳು (ಎಮ್ಮೆಗಳು ಸೇರಿ) | ಸಂಖ್ಯೆಗಳಲ್ಲಿ | ೫೩,೬೨೪ | ೪೨,೬೧೫ | ೨,೭.೯೩ | ೪೦,೫೨೦ | ೩೪,೧೧೮ | ೨೯,೫೭೯ |
| ೩. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಾಲು ಕರೆಯುವ ಹಸುಗಳು | ಸಂಖ್ಯೆಗಳಲ್ಲಿ | ೩,೫೭೪ | ೩,೫೫೪ | ೩,೪೪೯ | ೩,೬೬೦ | ೩,೧೧೦ | ೩,೪೩೨ |
| ೪. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಾಲು ಕರೆಯುವ ಎಮ್ಮೆಗಳು | ಸಂಖ್ಯೆಗಳಲ್ಲಿ | ೪,೫೬೦ | ೪,೭೪೭ | ೪,೦೦೩ | ೪,೦೫೦ | ೫,೧೪೦ | ೪,೮೦೯ |
| ೫. ಪ್ರತಿ ಲಕ್ಷ ಜನ ರಿಗೆ ಲಭ್ಯವಿರುವ ಕುರಿಗಳು | ಸಂಖ್ಯೆಗಳಲ್ಲಿ | ೩೮,೬೦೨ | ೩೧,೩೮೧ | ೨೭,೪೯೮ | ೨೨,೫೫೦ | ೨೦,೦೭೦ | ೨೦,೦೯೧ |
| ೬. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಮೇಕೆಗಳು | ಸಂಖ್ಯೆಗಳಲ್ಲಿ | ೧೩,೫೩೨ | ೧೨,೭೦೯ | ೧೦,೭೯೬ | ೧೪,೨೭೦ | ೧೦,೭೭೦ | ೧೨,೯೦೯ |
| ೭. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಹಂದಿಗಳು | ಸಂಖ್ಯೆಗಳಲ್ಲಿ | ೫೭೭ | ೫೪೧ | ೫೨೧ | ೫೫೦ | ೫೪೦ | ೬೩೮ |
| ೮. ಪ್ರತಿ ಲಕ್ಷ ಜನರಿಗೆ ಲಭ್ಯವಿರುವ ಕೋಳಿಗಳು | ಸಂಖ್ಯೆಗಳಲ್ಲಿ | ೫೫,೩೮೨ | ೫೬,೮೧೯ | ೫೧,೬೧೯ | ೪೭,೦೭೦ | ೩೬,೧೨೦ | ೩೦,೩೯೩ |
| ೯. ಪ್ರತಿ ಪಶು ವೈದ್ಯಶಾಲೆಯ ವ್ಯಾಪ್ತಿಗೆ ಒಳಪಡುವ ಜಾನುವಾರುಗಳು | ಸಂಖ್ಯೆಗಳಲ್ಲಿ | ೪೦,೧೧೧ | ೩೧,೬೧೮ | ೨೩,೫೧೪ | ೨೨,೮೧೬ | ೧೫,೦೩೮ | ೬,೪೩೫ |

ಆಧಾರ : ಸಾಮಾಜಿಕ – ಆರ್ಥಿಕ ಸಮೀಕ್ಷೆ ೨೦೦೧